ಗುರುವಾರ, ಜನವರಿ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 30 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾವಾಣಿ
ಭಾರತೀಯ ರೈಲ್ವೆಯ ವಿವಿಧ ವಲಯಗಳಲ್ಲಿ 32,438 ಡಿ ಗ್ರೂಪ್ ಹುದ್ದೆಗಳಿಗೆ ನೇಮಕಾತಿ

ಆಳ-ಅಗಲ
ರಾಕೆಟ್ ಉಡಾವಣೆ: ಶ್ರೀಹರಿಕೋಟ@100

ಯತ್ನಾಳಗೆ ಸುಪ್ರೀಂ ತರಾಟೆ 6
ಕಾರಿನಲ್ಲಿ ₹1.14 ಕೋಟಿ ಪತ್ತೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,532	23,163	₹85,330 (ಬೆಂಗಳೂರು)	₹96,200 (ಬೆಂಗಳೂರು)	86.55

'ಮೌನಿ ಅಮಾವಾಸ್ಯೆ'ಯಂದು 8 ಕೋಟಿಯಷ್ಟು ಭಕ್ತರು ಪುಣ್ಯಸ್ನಾನ ಮಾಡಿರುವ ಅಂದಾಜು • ನಡುರಾತ್ರಿಯೇ ಶುರುವಾದ ನೂಕುನುಗ್ಗಲು

ಕುಂಭಮೇಳದಲ್ಲಿ ಕಾಲ್ತುಳಿತ: 30 ಸಾವು

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಜೊತೆ ಪ್ರಧಾನಿ ಮೋದಿ ಚರ್ಚೆ– ಪರಿಸ್ಥಿತಿ ಅವಲೋಕನ • ಮೃತರ ಕುಟುಂಬಕ್ಕೆ ತಲಾ ₹ 25 ಲಕ್ಷ ಪರಿಹಾರ ಘೋಷಿಸಿದ ಉತ್ತರ ಪ್ರದೇಶ ಸರ್ಕಾರ

ಪ್ರಜಾವಾಣಿ ವಾರ್ತೆ/ಪಿಟಿಐ/ರಾಯಿಟರ್ಸ್

ಮಹಾಕುಂಭ ನಗರ/ಲಖನೌ (ಉತ್ತರ ಪ್ರದೇಶ): 'ಮೌನಿ ಅಮಾವಾಸ್ಯೆ'ಯಂದು ಇಲ್ಲಿನ 'ಸಂಗಮ'ದಲ್ಲಿ ಬುಧವಾರ ಪುಣ್ಯಸ್ನಾನಕ್ಕಾಗಿ ನೂಕುನುಗ್ಗಲಿನಿಂದ ಉಂಟಾದ ಕಾಲ್ತುಳಿತದಲ್ಲಿ ಮಹಿಳೆಯರು ಸೇರಿ ಕನಿಷ್ಠ 30 ಮಂದಿ ಮೃತಪಟ್ಟಿದ್ದು, ಇತರ 60 ಜನರು ಗಾಯಗೊಂಡಿದ್ದಾರೆ.

ಮೃತರಲ್ಲಿ ಕರ್ನಾಟಕದ ನಾಲ್ವರು ಸೇರಿದ್ದಾರೆ. ಪುಣ್ಯಸ್ನಾನಕ್ಕಾಗಿ 'ಸಂಗಮ' ತೀರದಲ್ಲಿ ಕೋಟ್ಯಂತರ ಭಕ್ತರು ಸೇರಿದ್ದಾಗ, ರಾತ್ರಿ 2ರ ಸುಮಾರಿಗೆ ಈ ಅವಘಡ ಸಂಭವಿಸಿದೆ.

ಕಾಲ್ತುಳಿತ ಹೇಗೆ ಉಂಟಾಯಿತು ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. 'ಸಂಗಮ'ದಲ್ಲಿ ದಟ್ಟಣೆಯಿಂದಾಗಿ ಹಠಾತ್ತನೇ ನೂಕುನುಗ್ಗಲು ಉಂಟಾಯಿತು. ಮಹಿಳೆಯರು ಸೇರಿದಂತೆ ಹಲವು ಭಕ್ತರು ಕೆಳಗೆ ಬಿದ್ದ ನಂತರ ಕಾಲ್ತುಳಿತ ಉಂಟಾಯಿತು. ಗಲಿಬಿಲಿಗೊಂಡ ಜನರು ಕೆಳಗೆ ಬಿದ್ದವರನ್ನು ತುಳಿಯುತ್ತಾ ಓಡಲು ಶುರು ಮಾಡಿದರು' ಎಂದು ಕೆಲ ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

'ರಾತ್ರಿ 1ರಿಂದ 2 ಗಂಟೆ ನಡುವೆ ಅಮೃತ ಸ್ನಾನಕ್ಕಾಗಿ ಸೇರಿದ್ದ ಜನರ ದೊಡ್ಡ ಗುಂಪೊಂದು ತಡೆಗೋಡೆಯನ್ನು ಮುರಿದು ಮುನ್ನುಗ್ಗಿದ್ದರಿಂದ ಕಾಲ್ತುಳಿತ ಉಂಟಾಯಿತು. ಈ ವೇಳೆ, 'ಸಂಗಮ ಬಳಿ ಸ್ನಾನ ಮಾಡಲು ಕಾಯುತ್ತಿದ್ದವರು ಕೆಳಗೆ ಬಿದ್ದರು. ಭಾರಿ ಸಂಖ್ಯೆಯಲ್ಲಿ ಜನರು ಕೆಳಗೆ ಬಿದ್ದಿದ್ದವರನ್ನು ತುಳಿಯುತ್ತಾ ಓಡಿದರು' ಎಂದು ಕುಂಭಮೇಳದ ಡಿಐಜಿ ವೈಭವ ಕೃಷ್ಣ ತಿಳಿಸಿದ್ದಾರೆ.

ಕುಂಭಮೇಳದಲ್ಲಿ ಕಾಲ್ತುಳಿತ ಸಂಭವಿಸಿದ್ದನ್ನು ಉತ್ತರ ಪ್ರದೇಶದ ಹಿರಿಯ ಅಧಿಕಾರಿಯೊಬ್ಬರು ಮೊದಲು ತಳ್ಳಿ ಹಾಕಿದ್ದರು. 'ಸಂಗಮ'ದಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದಾರೆ ಎಂದಷ್ಟೆ ಹೇಳಿದ್ದರು. ನಂತರ ದುರಂತದ ಸುದ್ದಿ ಬಂತು.


ಮುಖ್ಯಮಂತ್ರಿ ಯೋಗಿ ಮನವಿ: 'ಮೌನಿ ಅಮಾವಾಸ್ಯೆ' ಅಂಗವಾಗಿ ಪುಣ್ಯಸ್ನಾನ ಮಾಡುವುದಕ್ಕಾಗಿ ಪ್ರಯಾಗ್‌ರಾಜ್‌ನಲ್ಲಿ 9–10 ಕೋಟಿ ಜನರು ಜಮಾಯಿಸಿದ್ದಾರೆ. ಭಕ್ತರು ತಮಗೆ ಸಮೀಪದ ಘಾಟ್‌ಗಳಲ್ಲಿ ಗಂಗಾ ನದಿಯಲ್ಲಿ ಸ್ನಾನ ಮಾಡಬೇಕು. ಇದರಿಂದ ಸಂಗಮದಲ್ಲಿ ಜನರ ದಟ್ಟಣೆ ತಪ್ಪಿಸಬಹುದಾಗಿದೆ' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮನವಿ ಮಾಡಿದ್ದಾರೆ.

'ಕಾಲ್ತುಳಿತದ ವೇಳೆ, ಗಾಯಗೊಂಡವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗಿದೆ. ಕಾಲ್ತುಳಿತ ಘಟನೆಗೆ ಸಂಬಂಧಿಸಿ, ಮಹಾ ಮಂಡಲೇಶ್ವರರು ಸೇರಿದಂತೆ ಅಖಾಡ ಪರಿಷತ್ ಮುಖ್ಯಸ್ಥರು ಹಾಗೂ ಇತರ ಸಾಧು–ಸಂತರೊಂದಿಗೆ ನಾನು ಮಾತುಕತೆ ನಡೆಸಿದ್ದೇನೆ. ಭಕ್ತರು ಪುಣ್ಯಸ್ನಾನ ಮಾಡುವುದಕ್ಕೆ ಅವಕಾಶ ನೀಡಲು ಹಾಗೂ ದಟ್ಟಣೆ ಕಡಿಮೆಯಾದ ನಂತರ ಪುಣ್ಯಸ್ನಾನ ಮಾಡಲು ಎಲ್ಲರೂ ಒಪ್ಪಿಗೆ ನೀಡಿದ್ದಾರೆ' ಎಂದು ಹೇಳಿದ್ದಾರೆ.

'ಭಕ್ತರ ಸುರಕ್ಷತೆ ನಮ್ಮ ಮೊದಲ ಆದ್ಯತೆ. ಪ್ರಯಾಗ್‌ರಾಜ್‌ನಲ್ಲಿ ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ, ಜನಸಂದಣಿ ಕಡಿಮೆಯಾಗಿಲ್ಲ' ಎಂದೂ ಹೇಳಿದ್ದಾರೆ.

11ನೇ ಪುಟ ನೋಡಿ





ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭ ಮೇಳದಲ್ಲಿ 'ಮೌನಿ ಅಮಾವಾಸ್ಯೆ' ದಿನವಾದ ಬುಧವಾರ ಸಂಭವಿಸಿದ ಕಾಲ್ತುಳಿತದ ದುರಂತಕ್ಕೆ ಸಾಕ್ಷಿಯಾದ ಭಕ್ತರೊಬ್ಬರ ಮೌನ ರೋದನ —ಪಿಟಿಐ ಚಿತ್ರ

ನ್ಯಾಯಾಂಗ ತನಿಖೆಗೆ ಆದೇಶಿಸಿದ ಯೋಗಿ

ಲಖನೌ: ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತ ದುರಂತದ ಬಗ್ಗೆ ನ್ಯಾಯಾಂಗ ತನಿಖೆಗೆ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಬುಧವಾರ ಆದೇಶಿಸಿದ್ದಾರೆ. ಘಟನೆಯಲ್ಲಿ ಮೃತಪಟ್ಟವರ ಕುಟುಂಬದವರಿಗೆ ರಾಜ್ಯ ಸರ್ಕಾರದಿಂದ ತಲಾ ₹25 ಲಕ್ಷ ಪರಿಹಾರವನ್ನೂ ಘೋಷಿಸಿದ್ದಾರೆ.

ಮಹಾಕುಂಭ ಮೇಳದಲ್ಲಿ ಸಂಭವಿಸಿದ ದುರಂತದ ಕಾರಣಗಳ ಬಗ್ಗೆ ಮೂವರು ಸದಸ್ಯರ ಸಮಿತಿಯು ತನಿಖೆ ನಡೆಸಲಿದೆ.

ಬೆಳಗಾವಿಯ ನಾಲ್ವರ ಸಾವು



ಮೇಘಾ ಜ್ಯೋತಿ ಅರುಣ ಮಹಾದೇವಿ

ಬೆಳಗಾವಿ: ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ಸಿಲುಕಿ, ಬೆಳಗಾವಿಯ ನಾಲ್ವರು ಬುಧವಾರ ಸಾವಿಗೀಡಾಗಿದ್ದಾರೆ. ಮೂವರು ಗಾಯಗೊಂಡಿದ್ದು, ಇನ್ನೂ ಎಂಟು ಜನರ ಸಂಪರ್ಕ ಕಡಿತಗೊಂಡಿದೆ.

ನಗರದ ವಡಗಾವಿಯ ನಿವಾಸಿ ಜ್ಯೋತಿ ಹತ್ತರವಾಟ (44), ಅವರ ಪುತ್ರಿ ಮೇಘಾ ಹತ್ತರವಾಟ (24), ಶಿವಾಜಿ ನಗರದ ಮಹಾದೇವಿ ಬಾವನೂರ (48) ಮತ್ತು ಶೆಟ್ಟಿಗಲ್ಲಿಯ ನಿವಾಸಿ ಅರುಣ ಕೋಪರ್ಡೆ (61) ಮೃತರು.

ಅರುಣ ಕೋಪರ್ಡೆ ಅವರ ಪತ್ನಿ ಕಾಂಚನ್, ವಡಗಾವಿಯವರೇ ಆದ ಸರೋಜಿನಿ ನಡುವಿನಹಳ್ಳಿ ಮತ್ತು ಜ್ಯೋತಿ ಎಂಬ ಯುವತಿಗೆ ಗಾಯವಾಗಿದೆ. ಮೂವರನ್ನೂ ಪ್ರಯಾಗ್‌ರಾಜ್‌ನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಇವರೆಲ್ಲರೂ ಬೆಳಗಾವಿಯ ದಕ್ಷಿಣ ಮತ್ತು ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು.

ಜನವರಿ 26ರ ಮಧ್ಯಾಹ್ನ 1ರ ಸುಮಾರಿಗೆ ವಡಗಾವಿಯ 13 ನಿವಾಸಿಗಳು ಟ್ರಾವೆಲ್ ಏಜೆನ್ಸಿಯ ಒಂದು ಬಸ್ ಮೂಲಕ ಪ್ರಯಾಗ್‌ರಾಜ್‌ಗೆ ಪ್ರಯಾಣಿಸಿ, ಮಂಗಳವಾರವೇ ಅಲ್ಲಿಗೆ ತಲುಪಿದ ಮಾಹಿತಿಯನ್ನು ಕುಟುಂಬ ಸದಸ್ಯರೊಂದಿಗೆ ಹಂಚಿಕೊಂಡಿದ್ದರು. ಕಾಲ್ತುಳಿತದ ಸುದ್ದಿ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದ್ದಂತೆಯೇ ಕುಟುಂಬದವರು ಆತಂಕಗೊಂಡರು. ಸಂಬಂಧಿಕರನ್ನು ಸಂಪರ್ಕಿಸಲು ಪ್ರಯತ್ನಿಸಿದರು. ಸಾವಿನ ಸುದ್ದಿ ಬರತೊಡಗಿತು.

11ನೇ ಪುಟ ನೋಡಿ


ಕನ್ನಡಿಗರ ಸಹಾಯಕ್ಕೆ ದೂರವಾಣಿ

ಬೆಂಗಳೂರು: ಪ್ರಯಾಗ್‌ರಾಜ್‌ನಲ್ಲಿ ಕಾಲ್ತುಳಿತದಲ್ಲಿ ಮೃತಪಟ್ಟ, ಗಾಯಗೊಂಡ ಕನ್ನಡಿಗರ ವಿವರ ಪಡೆಯಲು ಹಾಗೂ ಉತ್ತರ ಪ್ರದೇಶ ಸರ್ಕಾರದ ಜತೆ ಸಂವಹನ ನಡೆಸಲು ಐಎಎಸ್ ಅಧಿಕಾರಿ ಬೋಯರ್ ಹರ್ಷಲ್ ನಾರಾಯಣ್‌ರಾವ್ ಅವರನ್ನು ಕರ್ನಾಟಕ ಸರ್ಕಾರ ನೇಮಿಸಿದೆ.

ಬೆಳಗಾವಿ ಜಿಲ್ಲಾಡಳಿತವು ಹೆಚ್ಚುವರಿ ಎಸ್‌ಪಿ ಶ್ರುತಿ, ವಿಶೇಷ ಜಿಲ್ಲಾಧಿಕಾರಿ ಹರ್ಷ ಶೆಟ್ಟಿ ಅವರನ್ನು ಪ್ರಯಾಗ್‌ರಾಜ್‌ಗೆ ಕಳುಹಿಸಿಕೊಟ್ಟಿದೆ.

ಸಹಾಯವಾಣಿ ಸಂಖ್ಯೆ
080-22340676

ಬಿ.ಎಚ್. ನಾರಾಯಣ್‌ರಾವ್	ಎನ್.ಎಸ್. ಶ್ರುತಿ	ಹರ್ಷ ಶೆಟ್ಟಿ
96226 33744	95917 60190	98867 45505





'ವಸೂಲಿ ಕಿರುಕುಳ'ಕ್ಕೆ ತಡೆ ಮಸೂದೆಗೆ ಇಂದು ಒಪ್ಪಿಗೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲಗಾರರಿಗೆ ಹಿಂಸೆ, ಕಿರುಕುಳ ನೀಡುವ ಮೈಕ್ರೊ ಫೈನಾನ್ಸ್ ಕಂಪನಿಗಳು ಅಥವಾ ಲೇವಾದೇವಿದಾರರಿಗೆ ಕಡಿವಾಣ ಹಾಕಲು ಸಿದ್ಧಪಡಿಸಿದ ಕರಡು ಮಸೂದೆಯನ್ನು ಗುರುವಾರ ಸಚಿವ ಸಂಪುಟ ಸಭೆಯ ಮುಂದೆ ಮಂಡಿಸಲಾಗುವುದು ಎಂದು ಕಾನೂನು ಸಚಿವ ಎಚ್‌.ಕೆ. ಪಾಟೀಲ, ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಮಸೂದೆ ಕುರಿತು ಗೃಹ ಇಲಾಖೆ, ಕಂದಾಯ, ಶಾಸನ ರಚನೆ, ಕಾನೂನು, ಸಹಕಾರ ಇಲಾಖೆಯ ಉನ್ನತಾಧಿಕಾರಿಗಳ ಜತೆ ಬುಧವಾರ ಸಭೆ ನಡೆಸಿದ ನಂತರ ಇಬ್ಬರೂ ಸಚಿವರು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡರು.

ಮೈಕ್ರೊ ಫೈನಾನ್ಸ್

ಕಿರುಸಾಲ ನೀಡುವ ಹಣಕಾಸು ಸಂಸ್ಥೆಗಳು ಸಾರ್ವಜನಿಕರ ಮೇಲೆ ದೌರ್ಜನ್ಯ ಎಸಗುವುದು, ಕಿರುಕುಳ ನೀಡುವುದನ್ನು ನಿಷೇಧಿಸಲು ಹೊಸ ಕಾನೂನು ರೂಪಿಸಲಾಗುತ್ತಿದೆ. ಕಾನೂನು ಪರಿಧಿ ಮೀರಿ ನಡೆದುಕೊಳ್ಳುವ ಹಣಕಾಸು ಸಂಸ್ಥೆಗಳ ವರ್ತನೆ ಸಹಿಸಲು ಸಾಧ್ಯವಿಲ್ಲ. ಹಾಗಾಗಿ, ಕರಡು ಮಸೂದೆಯನ್ನು ಸಂಪುಟ ಸಭೆಯಲ್ಲಿ ಮಂಡಿಸಿ, ಸುಗ್ರೀವಾಜ್ಞೆ ಹೊರಡಿಸಲಾಗುವುದು. ಮುಂದಿನ ಬಜೆಟ್ ಅಧಿವೇಶನದಲ್ಲಿ ಮಸೂದೆಗೆ ಅನುಮೋದನೆ ಪಡೆಯಲಾಗುವುದು ಎಂದು ಮಾಹಿತಿ ನೀಡಿದರು.

7ನೇ ಪುಟ ನೋಡಿ

ಬಿವೈವಿ ವಿರುದ್ಧ ಸುಧಾಕರ್ ಯುದ್ಧ

ಪ್ರಜಾವಾಣಿ ವಾರ್ತೆ



ಸುಧಾಕರ್

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲಾ ಬಿಜೆಪಿ ಅಧ್ಯಕ್ಷ ಸ್ಥಾನದ ಆಯ್ಕೆ ವಿಚಾರದಲ್ಲಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಸಂಸದ ಡಾ.ಕೆ.ಸುಧಾಕರ್ ಅವರು ಸಿಡಿದೆದ್ದಿದ್ದು, 'ನನ್ನ ಸಮಾಧಾನದ ದಿನಗಳು ಮುಗಿದವು. ಇನ್ನು ಏನಿದ್ದರೂ ಯುದ್ಧ' ಎಂದು ಹೇಳಿದರು.

ವಿಜಯೇಂದ್ರ ಅವರನ್ನು ವಿರೋಧಿಸುತ್ತಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣದ ಸದಸ್ಯರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಸುಧಾಕರ್ ಅವರು ಬುಧವಾರ ಸುದ್ದಿಗೋಷ್ಠಿ ನಡೆಸಿ ವಿಜಯೇಂದ್ರ ವಿರುದ್ಧ ಬಂಡಾಯದ ಬಾವುಟ ಹಾರಿಸಿದರು. ವರಿಷ್ಠರಿಗೆ ವಿಜಯೇಂದ್ರ ವಿರುದ್ಧ ದೂರು ನೀಡಿ, ಆ ಬಳಿಕ ಬೆಂಬಲಿಗರ ಜತೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳುವುದಾಗಿಯೂ ಎಚ್ಚರಿಕೆ ನೀಡಿದರು.



'ತಮಗೆ ಬೇಕಾದವರನ್ನು ಜಿಲ್ಲಾ ಅಧ್ಯಕ್ಷ, ರಾಜ್ಯ ಕಾರ್ಯದರ್ಶಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಉಪಾಧ್ಯಕ್ಷರನ್ನು ಮಾಡಿಕೊಂಡಿದ್ದಾರೆ. ವಿಜಯೇಂದ್ರ ಅವರ ಧೋರಣೆ ಬೇಸರ ಹುಟ್ಟಿಸಿದೆ. ನಿಮ್ಮ ನಾಯಕತ್ವದಲ್ಲಿ ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಕನಿಷ್ಠ ಒಂದು ಸೀಟು ಗೆದ್ದು ತೋರಿಸಿ' ಎಂದು ಸವಾಲು ಹಾಕಿದರು.

6ನೇ ಪುಟ ನೋಡಿ

ಯತ್ನಾಳ ಸ್ಪರ್ಧೆ: ನಾಳೆ ತೀರ್ಮಾನ

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಸ್ಪರ್ಧೆಯ ಬಗ್ಗೆ ಇದೇ 31 ರಂದು (ಶುಕ್ರವಾರ) ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮಾಜಿ ಸಚಿವ ಕುಮಾರ್ ಬಂಗಾರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪಕ್ಷವನ್ನು ಒಗ್ಗಟ್ಟಿನಿಂದ ಮುನ್ನಡೆಸುವವರನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಅವರಿಗೆ ಮನವಿ ಮಾಡುತ್ತೇವೆ' ಎಂದರು.

6ನೇ ಪುಟ ನೋಡಿ

ಇಸ್ರೊ ಶತಕ

ದೂರದ ದಿಗಂತದಲ್ಲಿ ಬುಧವಾರ ಸೂರ್ಯ ಮೇಲೇರುತ್ತಿರುವಂತೆಯೇ, ಶ್ರೀಹರಿಕೋಟಾದ ಉಡ್ಡಯನ ನೆಲೆಯಲ್ಲಿ ಇಸ್ರೊ ನಿರ್ಮಿತ ಪಥದರ್ಶಕ ಉಪಗ್ರಹ 'ಎನ್‌ವಿಎಸ್–02' ಹೊತ್ತ ರಾಕೆಟ್ ನಭಕ್ಕೆ ಹಾರಿತು. ಇದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಪಾಲಿಗೆ ಐತಿಹಾಸಿಕ ಮತ್ತು ಸಂಭ್ರಮದ ಕ್ಷಣವಾಗಿತ್ತು. ಇಸ್ರೊ ಯಶಸ್ವಿಯಾಗಿ ಪೂರ್ಣಗೊಳಿಸಿದ 100ನೇ ಅಂತರಿಕ್ಷ ಕಾರ್ಯಕ್ರಮ ಎಂಬ ಹಿರಿಮೆಗೆ ಭಾಜನವಾಯಿತು.

ಪ್ರಯೋಜನ

- ಭೂ ಮತ್ತು ವಾಯು ಹಾಗೂ ಕಡಲ ಯಾನಕ್ಕೆ ಸಂಬಂಧಿಸಿದ ಮಾಹಿತಿ ರವಾನೆ
- ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ನಿಖರ ಮಾಹಿತಿ ಒದಗಿಸುವಿಕೆ
- ಮೊಬೈಲ್ ಸಾಧನಗಳಲ್ಲಿ ಲೊಕೇಷನ್ ಆಧಾರಿತ ಸೇವೆಗೆ ಸಹಕಾರ
- ಉಪಗ್ರಹಗಳು ಯಾವ ಕಕ್ಷೆಯಲ್ಲಿ ಪರಿಭ್ರಮಿಸುತ್ತಿವೆ ಎಂಬುದರ ಮಾಹಿತಿ ರವಾನೆ
- ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ) ಆಧಾರಿತ ಸೇವೆಗೆ ಅಗತ್ಯ ಸೌಲಭ್ಯ



ವಿವರ 11

ಎನ್‌ವಿಎಸ್–02 ಉಪಗ್ರಹ
ಬೆಂಗಳೂರಿನಲ್ಲಿರುವ ಯು.ಆರ್.ರಾವ್ ಉಪಗ್ರಹ ಕೇಂದ್ರದಲ್ಲಿ ಅಭಿವೃದ್ಧಿ

2,250 ಕೆ.ಜಿ ಉಪಗ್ರಹದ ಒಟ್ಟು ತೂಕ | **50.9** ಮೀಟರ್ ರಾಕೆಟ್ ಎತ್ತರ

ಎಚ್‌ಡಿಕೆ ವಿರುದ್ಧದ ಸರ್ಕಾರಿ ಜಮೀನು ಅತಿಕ್ರಮಣ ಆರೋಪ

'ಜೈಲಿಗೆ ಕಳುಹಿಸಿದರೆ ಸರಿ ಹೋಗುತ್ತೆ...'

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: 'ಪ್ರತಿವಾದಿಗಳು (ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮತ್ತು ಸಂಬಂಧಿಗಳು) ತುಂಬಾ ಉನ್ನತ ಹುದ್ದೆಯಲ್ಲಿ ಇದ್ದಾರೆ ಅಂದುಕೊಂಡು ನೀವು ಐದು ವರ್ಷ ಏನೂ ಮಾಡಿಲ್ಲ ತಾನೆ? ಇನ್ನೆರಡು ವಾರ ಸಮಯ ಕೊಡುತ್ತೇನೆ. ಅಷ್ಟರೊಳಗೆ ನಿಮ್ಮ ಕೈಲಿ ಆಗುತ್ತೆ ಅಂದ್ರೆ ಹೇಳಿ. ಇಲ್ಲಾ ಅಸಮರ್ಥರಿದ್ದೀವಿ ಅಂದ್ರೆ ನಿಮ್ಮನ್ನು ಎಲ್ಲಿಗೆ ಕಳಿಸಬೇಕೊ ಅಲ್ಲಿಗೇ ಕಳಿಸುತ್ತೇನೆ. ಹದಿನೈದು ದಿನ ಜೈಲಿನಲ್ಲಿ ಇದ್ದು ಬಂದರೆ ಸರಿಹೋಗ್ತೀರಿ...!

'ಎಚ್‌.ಡಿ.ಕುಮಾರಸ್ವಾಮಿ ಹಾಗೂ ಅವರ ಸಂಬಂಧಿ ಮಾಜಿ ಶಾಸಕ ಡಿ.ಸಿ. ತಮ್ಮಣ್ಣ ಮತ್ತಿತರರು ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ ಖುದ್ದು ಹಾಜರಿದ್ದ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ ಅವರಿಗೆ ಹೈಕೋರ್ಟ್ ನೀಡಿದ ಕಠಿಣ ಎಚ್ಚರಿಕೆ ಇದು.

'ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನೀಡಿರುವ ಆದೇಶ ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಆಕ್ಷೇಪಿಸಿ ಎಸ್.ಆರ್.ಹಿರೇಮಠ ನೇತೃತ್ವದ 'ಸಮಾಜ ಪರಿವರ್ತನಾ ಸಮುದಾಯ' ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಈ ಹಿಂದಿನ ವಿಚಾರಣೆ ವೇಳೆ, 'ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಖುದ್ದು ಹಾಜರಿರಬೇಕು' ಎಂದು ನ್ಯಾಯಪೀಠ ಆದೇಶಿಸಿತ್ತು. ಅದರಂತೆ ಬುಧವಾರ ರಾಜೇಂದ್ರ ಕುಮಾರ ಕಠಾರಿಯಾ ಖುದ್ದು ಹಾಜರಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಲು ಮುಂದಾದರು.

5ನೇ ಪುಟ ನೋಡಿ

ಮುಖ್ಯಾಂಶಗಳು

- ಕಠಾರಿಯಾ ವಿವರಣೆಗೆ ಕಿವಿಗೊಡದ ಪೀಠ
- ವಿಚಾರಣೆ ಫೆಬ್ರುವರಿ 21ಕ್ಕೆ ಮುಂದೂಡಿಕೆ

'ಎಸ್ಕಾರ್ಟ್ ಕೊಟ್ಟು ಪ್ರತಿವಾದಿಗಳ ಕರೆಯಿಸುವೆ'

'ಇನ್ನೆರಡು ವಾರಗಳ ಕಾಲಾವಕಾಶ ನೀಡುತ್ತೇನೆ. ಅಷ್ಟರೊಳಗೆ ಪಾಲಿಸಿದರೆ ಸರಿ. ಇಲ್ಲಾಂದ್ರೆ, ಎಲ್ಲ ಪ್ರತಿವಾದಿಗಳನ್ನೂ ಎಸ್ಕಾರ್ಟ್ ಕೊಟ್ಟು ಕರೆಯಿಸಿಬಿಡುತ್ತೇನೆ. ಅಧಿಕಾರಿಗಳನ್ನು ಎಲ್ಲಿಗೆ ಕಳುಹಿಸಬೇಕೊ ಅಲ್ಲಿಗೆ ಕಳುಹಿಸುತ್ತೇನೆ' ಎಂದು ನ್ಯಾ.ಸೋಮಶೇಖರ್ ಎಚ್ಚರಿಸಿದರು.



ಪ್ರಕರಣದಲ್ಲಿ, ಸಂವಿಧಾನ ಕರಡು ತಜ್ಞರ ಸಮಿತಿ ಮತ್ತು ಎಂ.ಎನ್.ರಾಯ್ ಅವರ ಉದಾಹರಣೆಗಳನ್ನು ನೀಡುತ್ತಾ, 'ಯಾವುದಾದರೂ ವಿಷಯಕ್ಕೆ ಎಸ್‌ಐಟಿ ರಚಿಸುವುದು ಸರ್ಕಾರಕ್ಕೆ ರೂಢಿಯಾಗಿಬಿಟ್ಟಿದೆ' ಎಂದರು.

₹3,200 ಕೋಟಿ ಜಿಎಸ್‌ಟಿ ವಂಚನೆ

ಬೆಂಗಳೂರು (ಪಿಟಿಐ): ಬೆಂಗಳೂರು ಹಾಗೂ ಮುಂಬೈನ 30ಕ್ಕೂ ಹೆಚ್ಚು ಸ್ಥಳಗಳಲ್ಲಿ ಬುಧವಾರ ದಾಳಿ ನಡೆಸಿರುವ ಕೇಂದ್ರ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯದ (ಡಿಜಿಜಿಐ) ಅಧಿಕಾರಿಗಳು, ₹3,200 ಕೋಟಿ ಜಿಎಸ್‌ಟಿ ವಂಚನೆಯನ್ನು ಪತ್ತೆ ಹಚ್ಚಿದ್ದಾರೆ.

ಡಿಜಿಜಿಐ ಬೆಂಗಳೂರು ವಲಯದ ಹೆಚ್ಚುವರಿ ಪ್ರಧಾನ ನಿರ್ದೇಶಕಿ ಸುಚೇತಾ ಶ್ರೀಜೆಷಾ ಅವರ ನೇತೃತ್ವದಡಿ ನಡೆದ ಈ ದಾಳಿಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ.

ಆರೋಪಿಗಳು ನಕಲಿ ಕಂಪನಿಗಳನ್ನು ಸೃಷ್ಟಿಸಿ ವಂಚನೆಯಲ್ಲಿ ತೊಡಗಿರುವುದು ದಾಳಿ ವೇಳೆ ಬಯಲಾಗಿದೆ. ನಕಲಿ ಹೂಡುವಳಿ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಮೂಲಕ ₹665 ಕೋಟಿ ಪಡೆದಿದ್ದಾರೆ. ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಇಷ್ಟು ಮೊತ್ತದ ವಂಚನೆ ಎಸಗಿದ್ದಾರೆ ಎಂದು ಸುಚೇತಾ ತಿಳಿಸಿದ್ದಾರೆ.

10ನೇ ಪುಟ ನೋಡಿ

ಮುಖ್ಯಮಂತ್ರಿ ಬದಲಾವಣೆ; ನಿಲ್ಲದ ಚರ್ಚೆ 6
'ಜಗದ ಗಾಯ'ಕ್ಕೆ ಸಾಹಿತ್ಯದ ಮದ್ದು 10

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಸುಧಾ, ಮಯೂರ ಓದಿರಿ...

ಧಾರ್ಮಿಕ ಕಟ್ಟಡಗಳ ಕಾಯ್ದೆ: ಆಕ್ಷೇಪಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದಿರುವ ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣಾ) ಕಾಯ್ದೆ–2021ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕಾಲಾವಕಾಶ ನೀಡಿದೆ.

ಈ ಸಂಬಂಧ ಬೆಂಗಳೂರಿನ ಡಿ. ಕೇಶವಮೂರ್ತಿ ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಮನು ಪ್ರಭಾಕರ ಕುಲಕರ್ಣಿ, 'ಕಾನೂನಿನ ಅನ್ವಯ ಅನುಮತಿ ಪಡೆಯದೇ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಿಸಲಾಗಿರುವ ದೇವಾಲಯಗಳು, ಚರ್ಚ್, ಮಸೀದಿ, ಗುರುದ್ವಾರ, ಬೋಧಿ ವಿಹಾರ ಇತ್ಯಾದಿಗಳನ್ನು ರಕ್ಷಿಸುವ ಉದ್ದೇಶದಿಂದ ಆಕ್ಷೇಪಾರ್ಹ ಕಾಯ್ದೆ ಜಾರಿಗೊಳಿಸಲಾಗಿದೆ' ಎಂದರು.

'ಅರ್ಜಿಯಲ್ಲಿ ಎತ್ತಲಾಗಿರುವ ವಿಚಾರಗಳು ಮಹತ್ವದ್ದಾಗಿವೆ. ಸಾಂವಿಧಾನಿಕ ಕಾನೂನಿನ ಕಾರ್ಯಾಚರಣೆಯಲ್ಲಿ ದೂರಗಾಮಿ ಆಯಾಮಗಳಿವೆ. ಸುಪ್ರೀಂ ಕೋರ್ಟ್ ಆದೇಶವು ಈ ನೆಲದ ಕಾನೂನಾಗಿದ್ದು, ಅದನ್ನು ಎಲ್ಲರೂ ಪಾಲಿಸಬೇಕು' ಎಂದು ನ್ಯಾಯಪೀಠ ಹೇಳಿತು. ಇದೇ ವೇಳೆ ರಾಜ್ಯ ಸರ್ಕಾರದ ಪರ ವಕೀಲರು, ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಆಕ್ಷೇಪಣೆಗೆ ಕಾಲಾವಕಾಶ ನೀಡಿ ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿತು.

9 ತಿಂಗಳು ತುಂಬಿದ ಮಕ್ಕಳಿಗೂ ಹೆಲ್ಮೆಟ್ ಸಿಗುವಂತೆ ಮಾಡಿ–ಅರ್ಜಿ

ವ್ಹೀಲಿ ತಡೆಗೆ ನಿರ್ಲಕ್ಷ್ಯ: ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ಕೆಲ ಪ್ರದೇಶಗಳಲ್ಲಿ ಯುವಕರು ಬೈಕ್ ವ್ಹೀಲಿ ಮಾಡುತ್ತಿದ್ದರೂ ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸುವಲ್ಲಿ ಪೊಲೀಸರು ನಿರ್ಲಕ್ಷ್ಯ ತೋರುತ್ತಿದ್ದಾರೆ' ಎಂದು ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಒಂಬತ್ತು ತಿಂಗಳು ತುಂಬಿದ ಎಲ್ಲ ಮಕ್ಕಳಿಗೂ ಸುರಕ್ಷತಾ ಹೆಲ್ಮೆಟ್ ಹಾಗೂ ಮಕ್ಕಳ ಸುರಕ್ಷತಾ ಸಾಧನಗಳು ಲಭ್ಯವಾಗುವ ನಿಟ್ಟಿನಲ್ಲಿ ತುರ್ತು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ನಗರದ ಡಾ.ಕೆ.ಅರ್ಚನಾ ಭಟ್ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.



'ಹದಿಹರೆಯದವರು ಬೈಕ್ ವ್ಹೀಲಿ ಮಾಡುತ್ತಿದ್ದು, ಇದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ದೊಡ್ಡ ಪ್ರಮಾಣದಲ್ಲಿ ತೊಂದರೆ ಉಂಟಾಗುತ್ತಿದೆ. ಬೈಕ್ ವ್ಹೀಲಿ ಮಾಡುವವರ ವಿರುದ್ಧ ಪೊಲೀಸರು ಯಾವುದೇ ಕ್ರಮ ಜರುಗಿಸುತ್ತಿಲ್ಲ. ಈ ಬಗ್ಗೆ ಸರ್ಕಾರ ಏನು ಮಾಡುತ್ತಿದೆ' ಎಂದು ನ್ಯಾಯಪೀಠ ಕಟುವಾಗಿ ಪ್ರಶ್ನಿಸಿತು.

'ರಸ್ತೆಯಲ್ಲಿ ಬೈಕ್ ವ್ಹೀಲಿ ಮಾಡುವುದರಿಂದ ಅಪಘಾತಗಳು ಉಂಟಾಗಿ ಸಾವು-ನೋವು ಸಂಭವಿಸುತ್ತಿವೆ. ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಾರೆ. ಹಾಗಾಗಿ, ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ಮಾಡಬೇಕು. ಬೈಕ್ ವ್ಹೀಲಿ ತಡೆಯಬೇಕು. ಈ ಕುರಿತ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು' ಎಂದು ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಮೌಖಿಕವಾಗಿ ಸೂಚಿಸಿತು.

'ದ್ವಿಚಕ್ರ ವಾಹನ ಸವಾರರು ತಪ್ಪದೇ ಹೆಲ್ಮೆಟ್ ಧರಿಸುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ನಿಯಮಗಳ ಜಾರಿಗೆ ಹಾಗೂ ಬೈಕ್ ಸವಾರರ ರಸ್ತೆ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳ ಕುರಿತಂತೆ ಮುಂದಿನ ವಿಚಾರಣೆ ವೇಳೆಗೆ ಮಾಹಿತಿ ನೀಡಿ' ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಮಾರ್ಚ್ 11ಕ್ಕೆ ಮುಂದೂಡಿತು.

'ಹೆಲ್ಮೆಟ್ ಧರಿಸುವುದಕ್ಕೆ ಸಂಬಂಧಿಸಿದಂತೆ ಸದ್ಯ ಇರುವ ನಿಯಮಗಳೇನು? ಅವುಗಳ ಜಾರಿಗೆ ಏನೆಲ್ಲಾ ಕ್ರಮ ಕೈಗೊಳ್ಳಲಾಗಿದೆ? ಎಂಬ ಬಗ್ಗೆ ನ್ಯಾಯಾಲಯಕ್ಕೆ ಮಾಹಿತಿ ನೀಡಿ' ಎಂದು ಸರ್ಕಾರದ ಪರ ವಕೀಲರಿಗೆ ಹೈಕೋರ್ಟ್ ಸೂಚನೆ ನೀಡಿದೆ.

ತುಮಕೂರಿಗೆ ಮೆಟ್ರೊ ಸಿದ್ಧಗೊಳ್ಳುತ್ತಿದೆ ಡಿಪಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಸಿರು ಮಾರ್ಗವನ್ನು ತುಮಕೂರಿನ ವರೆಗೆ ವಿಸ್ತರಣೆ ಮಾಡುವ ಕುರಿತು ಹೈದರಾಬಾದ್‌ನ ಕಂಪನಿ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸುತ್ತಿದೆ. ವರದಿ ಸಿದ್ಧವಾದ ನಂತರ ಅನುಮತಿ ಕೋರಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಪ್ರಸ್ತುತ ರೇಷ್ಮೆ ಮಂಡಳಿ ನಿಲ್ದಾಣದಿಂದ ಮಾದಾವರದವರೆಗೆ ಹಸಿರು ಮಾರ್ಗದ ಸೇವೆ ದೊರೆಯುತ್ತಿದೆ. ತುಮಕೂರಿನವರೆಗೆ ವಿಸ್ತರಣೆಯಾದರೆ ಹೆದ್ದಾರಿ ಮೇಲಿನ ಸಂಚಾರ ದಟ್ಟಣೆ ಗಣನೀಯವಾಗಿ ತಗ್ಗಲಿದೆ ಎಂದರು.

ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮತ್ತೊಂದು ಅಂತರರಾಷ್ಟ್ರೀಯ ವಿಮಾನನಿಲ್ದಾಣವನ್ನು ತುಮಕೂರು ಜಿಲ್ಲೆಯಲ್ಲೇ ಸ್ಥಾಪಿಸಿದರೆ ಉತ್ತರ ಕರ್ನಾಟಕ ಭಾಗದ 21 ಜಿಲ್ಲೆಗಳಿಗೆ ಅನುಕೂಲವಾಗಲಿದೆ. ಈಗಿರುವ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಸಂಪರ್ಕ ಸುಲಭವಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ ಏಳನೇ ತರಗತಿಯ ವಿದ್ಯಾರ್ಥಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾನೆ.

ಅಣ್ಣ (13) ಹಾಗೂ ತಂಗಿ ಒಂದೇ ಶಾಲೆಯಲ್ಲಿ ಓದುತ್ತಿದ್ದರು. ಮೃತ ವಿದ್ಯಾರ್ಥಿಯ ಪೋಷಕರು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ.

'ಸೋಮವಾರ ಎಂದಿನಂತೆಯೇ ಮಕ್ಕಳನ್ನು ಶಾಲೆಗೆ ಕಳುಹಿಸಿ ಪೋಷಕರು ಕೆಲಸಕ್ಕೆ ತೆರಳಿದ್ದರು. ಸೋಮವಾರ ಸಂಜೆ ಅಣ್ಣ–ತಂಗಿ ಮನೆಗೆ ಬಂದಿದ್ದರು. ಅದೇ ವೇಳೆ ತಾಯಿ ಮನೆಗೆ ಬಂದಾಗ, ಪುತ್ರಿ ಅಳುತ್ತಿದ್ದಳು. ಅದನ್ನು ಕಂಡ ತಾಯಿ ಗಾಬರಿಯಿಂದ ವಿಚಾರಿಸಿದ್ದಾರೆ. ಇನ್ನೊಂದು ಕೊಠಡಿಯಲ್ಲಿ ಪುತ್ರ ಅಸ್ವಸ್ಥ ಸ್ಥಿತಿಯಲ್ಲಿ ಬಿದ್ದಿದ್ದ. ತಕ್ಷಣವೇ ಮಗನನ್ನು ಆಸ್ಪತ್ರೆಗೆ ಕರೆದೊಯ್ದುರು. ಪರಿಶೀಲಿಸಿದ ವೈದ್ಯರು, ಮೃತಪಟ್ಟಿರುವುದಾಗಿ ಹೇಳಿದ್ದರು' ಎಂದು ಮೂಲಗಳು ತಿಳಿಸಿವೆ.

'ಮೇಲ್ನೋಟಕ್ಕೆ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಂತೆ ಕಾಣಿಸುತ್ತಿದೆ. ಶಾಲೆಗೆ ತೆರಳಿ ಶಿಕ್ಷಕರನ್ನು ವಿಚಾರಣೆ ನಡೆಸಲಾಗಿದೆ. ಶಾಲೆಯಿಂದ ಯಾವುದೇ ಸಮಸ್ಯೆ ಆಗಿಲ್ಲ. ಆದರೆ, ಮೊಬೈಲ್ ಹೆಚ್ಚು ಬಳಸದಂತೆ ಕೆಲವು ದಿನಗಳ ಹಿಂದೆ ವಿದ್ಯಾರ್ಥಿಗೆ ತಿಳಿಸಿದ್ದಾಗಿ ಶಿಕ್ಷಕರು ತಿಳಿಸಿದ್ದಾರೆ. ತನಿಖೆ ಮುಂದುವರೆದಿದೆ' ಎಂದು ಪೊಲೀಸರು ಹೇಳಿದರು.

PERSONAL

Lost

DOCUMENT LOST

This is to inform the public that I Nalini Mohan residing at "Royal Heritage" Old No 46/B, New No 25, M G Road, Bengaluru - 560001, declare that I had lost the share certificate (folio no. N 000757) (Sh certificate no 352407; distinctive nos. 781731426 - 781732455 bearing 1030 Equity shares) of Cholamandalam Investment and Finance Company Limited. Regarding this a police complaint (No 1441540/2025) dated 22/01/2025 has been lodged. If anybody finds this certificate, please inform the nearby police station or call the below mentioned **mobile no. 7795044709**

DOCUMENT LOST

This is to inform the public that I Nalini Mohan Jt. Holder with Mohan P R residing at "Royal Heritage" Old No 46/B, New No 25, M G Road, Bengaluru - 560001, declare that I had lost the share certificate (folio no. M 003216) (Sh certificate no 352406; distinctive nos. 781729551 - 781731425 bearing 1875 Equity shares) of Cholamandalam Investment and Finance Company Limited. Regarding this a police complaint (No 1441540/2025) dated 22/01/2025 has been lodged. If anybody finds this certificate, please inform the nearby police station or call the below mentioned **mobile no. 7795044709**

DOCUMENT LOST

This is to inform the public that I Vinay Mohan residing at "Royal Heritage" Old No 46/B, New No 25, M G Road, Bengaluru - 560001, declare that I had lost the share certificate (folio no. V 001799) (Sh certificate no 352408; distinctive nos. 781732456 - 781733205 bearing 750 Equity shares) of Cholamandalam Investment and Finance Company Limited. Regarding this a police complaint (No 1441555/2025) dated 22/01/2025 has been lodged. If anybody finds this certificate, please inform the nearby police station or call the below mentioned **mobile no. 7795044709**

Change of Name

I, SARITHA ANAND R/a. #2, 3rd cross, RT street, NMC Lane, Avenue road, Chickpet, Bangalore- 560053 Have Changed My Name From SARITHA ANAND To SARITHA BAI Vide Affidavit Dated 20/01/2025 before Notary Mohammed Hussain K Bangalore

CHANGE OF NAME

I, **SATHYA R / SATHYAVATHI** W/o. Praveen Poojary, residing at No. G-3, VMS Apartment No-93, 2nd Circular Road, Nandini Layout, Bengaluru - 560096, Have changed my name to **SATHYA PRAVEEN** vide affidavit dated 28-05-2025 was sworn before notary K.V. Mani, Advocate & Notary, Reg. No.: 21613, Bengaluru. Henceforth I shall be called as **SATHYA PRAVEEN** only

CHANGE OF NAME

I, **Mala W/o Late Bhimappa Sanjeevappa Hoolikatti,** Residing at KSDB 515, Rajiv Gandhi Nagar, Post Vidyagiri, Dharwad Taluk & Dist, Pincode-580004, have changed my name to **MALA HOOLIKATTI** vide affidavit dated 25-01-2025 before notary Esther Rani, Dharwad.

I, BALAMURALI KRISHNA REDDY DESHANUR S/o. PADMANABHA REDDY DESHANUR resident of No.118, 2nd Cross, Yellakunte, Bommanahalli, HSR Layout, Bengaluru-560068 have changed my name to BALAMURALI KRISHNA REDDY DESHNUR vide affidavit dated 28/01/2025 sworn before notary R.Basavaraja, Bangaluru

I, MOHANA T P, have changed my name to MOHANA R, Vide Affidavit dated 28.01.2025 sworn before advocate and notary M.Rajendra, Bangalore

BUSINESS

Business Offers

Finance

NRI'S INVESTMENT
And Finance Available
On Low Interest
Against
Properties, Land &
Building, Sites, Flats,
Converted &
Agriculture Lands
Call: 7204995189

ಮೇಲ್ಸೇತುವೆ ಕಾಮಗಾರಿ... ಜನರಿಗೆ ಕಿರಿಕಿರಿ

ಮೈಸೂರು ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಳ, ನಾಗರಿಕರಿಗೆ ನಿತ್ಯವೂ ಸಂಕಷ್ಟ, ಸಮಸ್ಯೆ ಪರಿಹರಿಸದ ಎಂಜಿನಿಯರ್‌ಗಳು

• ಆರ್. ಮಂಜುನಾಥ್

ಬೆಂಗಳೂರು: ಮೈಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆಯನ್ನು ತಗ್ಗಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಆರಂಭವಾಗಿರುವ ಮೇಲ್ಸೇತುವೆ ಕಾಮಗಾರಿಗಳು ವರ್ಷಗಳು ಕಳೆದರೂ ಮುಗಿದಿಲ್ಲ. ಈ ಕಾಮಗಾರಿಗಳೇ ಸಂಚಾರ ದಟ್ಟಣೆಯನ್ನು ಹೆಚ್ಚಿಸಿವೆ.

ಮೈಸೂರು ರಸ್ತೆ–ನೈಸ್ ಜಂಕ್ಷನ್ ಸಮೀಪದ ಹೊರವರ್ತುಲ ರಸ್ತೆಯಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ ಆರಂಭವಾಗಿ ನಾಲ್ಕೂವರೆ ವರ್ಷವಾಗಿದೆ. ಹೊರವರ್ತುಲ ರಸ್ತೆಯಲ್ಲಿ ಸಿಗ್ನಲ್‌ರಹಿತ ಸಂಚಾರ ಹಾಗೂ ಹೊಸಕೆರೆಹಳ್ಳಿ ಕೋಡಿರಸ್ತೆ ಹಾಗೂ ಗಿರಿನಗರದ ಕಡೆಗೆ ಮುಕ್ತ ಸಂಚಾರಕ್ಕೆ ಅನುವಾಗುವ ಗ್ರೇಡ್ ಸೆಪರೇಟರ್ ಕಾಮಗಾರಿ 2020ರ ಆಗಸ್ಟ್‌ನಲ್ಲಿ ಆರಂಭವಾಗಿದ್ದು, 15 ತಿಂಗಳಲ್ಲಿ ಮುಗಿಯಬೇಕಿತ್ತು. ಇನ್ನೂ ಒಂದು ವರ್ಷ ಕಾಮಗಾರಿ ಮುಗಿಯದ ಪರಿಸ್ಥಿತಿ ಇದೆ.

ಮುಖ್ಯಮಂತ್ರಿಯವರ ನವ ನಗರೋತ್ಥಾನ ಅನುದಾನದಲ್ಲಿ ಆರಂಭವಾಗಿರುವ 'ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್' ಕಾಮಗಾರಿಯನ್ನು ಪಿಜಿಪಿ ಎಂಜಿನಿಯರ್ಸ್ ಸಂಸ್ಥೆ ನಡೆಸುತ್ತಿದೆ. ನೈಸ್ ಲಿಂಕ್ ರಸ್ತೆಗೆ ಹೊಂದಿಕೊಂಡಿರುವ ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿಯಿಂದ ಸುತ್ತ ಮುತ್ತಲಿನ ಪ್ರದೇಶಗಳಿಗೆ ಸಂಪರ್ಕಕ್ಕೆ ರಸ್ತೆ ಇಲ್ಲದಂತಾಗಿದೆ. ಹೊಸಕೆರೆಹಳ್ಳಿ, ಬಂಗಾರಪ್ಪನಗರ, ಮೂಕಾಂಬಿಕೆನಗರ, ಪ್ರಮೋದ ಲೇಔಟ್, ಗಿರಿನಗರ, ಗಣಪತಿನಗರ, ಆವಲಹಳ್ಳಿ ಪ್ರದೇಶಗಳ ನಿವಾಸಿಗಳಿಗೆ ಗ್ರೇಡ್ ಸೆಪರೇಟರ್ ಕಾಮಗಾರಿ ಪ್ರದೇಶದ ಸುತ್ತ ನಿರ್ಮಿಸಲಾಗಿರುವ ತಡೆಗೋಡೆಯನ್ನು ಏಕಮುಖ ರಸ್ತೆಯಲ್ಲಿ ಅರ್ಧ ಕಿ.ಮೀ. ಸಂಚರಿಸಿ, ಯೂಟರ್ನ್ ಪಡೆದು ಮತ್ತೆ ಅರ್ಧ ಕಿ.ಮೀ. ಸಾಗಬೇಕಾಗಿದೆ.

'ಗ್ರೇಡ್ ಸೆಪರೇಟರ್ ಕಾಮಗಾರಿಯಿಂದ ಉಳಿದಿರುವ ರಸ್ತೆಯ ಅಗಲ ಕಡಿಮೆಯಾಗಿದ್ದು, ಬೆಳಿಗ್ಗೆ ಹಾಗೂ ಸಂಜೆಯ ಸಮಯದಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಲೆಗಳ ವಾಹನಗಳು, ಮಕ್ಕಳನ್ನು ಶಾಲೆಗೆ ಬಿಡಲು ಹೋಗುವ ಪೋಷಕರು, ಕಚೇರಿಗೆ ಹೋಗುವವರರು ಇಲ್ಲಿನ ಅವ್ಯವಸ್ಥೆಯಿಂದ ಕಾಯಬೇಕಾಗುತ್ತದೆ, ಅಲ್ಲದೆ ನಿರ್ದಿಷ್ಟ ಸ್ಥಳ ತಲುಪಲು ವಿಳಂಬ ವಾಗುತ್ತಿದೆ' ಎಂದು ಸ್ಥಳೀಯರಾದ ಗೋಪಾಲರಾವ್, ಜಗದೀಶ್, ಮಂಜುಳಾ ದೂರಿದರು.

ತುಕ್ಕು ಹಿಡಿದ ಪಿಲ್ಲರ್: ಮೈಸೂರು ರಸ್ತೆ ಹಾಗೂ ರಾಜರಾಜೇಶ್ವರಿನಗರಕ್ಕೆ ಸಿಗ್ನಲ್ ಮುಕ್ತ ಸಂಚಾರಕ್ಕಾಗಿ 'ಸಿಗ್ನಲ್ ಫ್ರೀ ರೋಟರಿ' ಕಾಮಗಾರಿ 2022ರ ಜುಲೈನಲ್ಲಿ ಆರಂಭವಾಗಿದೆ. ಆದರೆ, ನಾಲ್ಕೈದು ಪಿಲ್ಲರ್‌ಗಳ ನಿರ್ಮಾಣದ ನಂತರ ಕಾಮಗಾರಿ ಸ್ಥಗಿತಗೊಂಡಿದೆ. ವಿಧಾನಸಭೆ ಚುನಾವಣೆಯ ನಂತರ ಕಾಮಗಾರಿ ಮುಂದುವರಿದಿಲ್ಲ.

'ಸಿಗ್ನಲ್ ಫ್ರೀ ರೋಟರಿ' ಕಾಮಗಾರಿ ಸ್ಥಗಿತದಿಂದ ವರ್ಷಗಳ ಹಿಂದೆ ನಿರ್ಮಿಸಲಾಗಿರುವ ಪಿಲ್ಲರ್‌ಗಳು ತುಕ್ಕು ಹಿಡಿದಿವೆ. ತಡೆಗೋಡೆಯನ್ನು ಬೇಕಾಬಿಟ್ಟಿಯಾಗಿ ತೆರವು ಮಾಡಿದ್ದು, ಉಳಿದಿರುವ ರಸ್ತೆ ಗುಂಡಿಯಮ ವಾಗಿದ್ದು, ದೂಳು ಅತಿ ಹೆಚ್ಚಾಗಿದೆ. ಮೈಸೂರು ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಹೆಚ್ಚಿನ ಸಮಯ ಹಸಿರು ಸಿಗ್ನಲ್ ನೀಡುವುದರಿಂದ ರಾಜರಾಜೇಶ್ವರಿನಗರದ ಕಡೆಯಿಂದ ಬರುವವರಿಗೆ, ಜ್ಞಾನಭಾರತಿ ಕಡೆಯಿಂದ ರಾಜರಾಜೇಶ್ವರಿನಗರದ ಕಡೆಗೆ ಹೋಗುವವರು ವಾಯುಮಾಲಿನ್ಯ ಹಾಗೂ ದೂಳಿನಲ್ಲೇ ಅಧಿಕ ಸಮಯ ನಿಲ್ಲಬೇಕಾಗಿದೆ.

'ನಾಗರಿಕರ ಅನುಕೂಲಕ್ಕಾಗಿ 'ಸಿಗ್ನಲ್ ಫ್ರೀ ರೋಟರಿ' ಕಾಮಗಾರಿ ನಡೆಯಬೇಕಾಗಿತ್ತು. ಆದರೆ, ಎರಡು ವರ್ಷದಿಂದ ಕಾಮಗಾರಿ ಸ್ಥಗಿತಗೊಂಡಿದ್ದು, ಜನರಿಗೆ ಅನನುಕೂಲವೇ ಹೆಚ್ಚಾಗಿದೆ. ಈ ಬಗ್ಗೆ ಎಂಜಿನಿಯರ್‌ಗಳನ್ನು ಕೇಳಿದರೆ, ಜನಪ್ರತಿನಿಧಿಗಳತ್ತ ಕೈತೋರುತ್ತಾರೆ. ಅವರು ಜನಸಾಮಾನ್ಯರ ಸಮಸ್ಯೆಯ ಕುರಿತು ಮಾತು ಕೇಳುವ ತಾಳ್ಮೆಯನ್ನು ಹೊಂದಿಲ್ಲ' ಎಂದು ಹಲಗೆವಡೇರಹಳ್ಳಿಯ ರಾಮಚಂದ್ರ ದೂರಿದರು.



ಮೈಸೂರು ರಸ್ತೆ ಬಳಿಯ ಹೊರವರ್ತುಲ ರಸ್ತೆಯಲ್ಲಿ ಮಂದಗತಿಯಲ್ಲಿ ಸಾಗುತ್ತಿರುವ 'ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್' ಕಾಮಗಾರಿ ಪ್ರಜಾವಾಣಿ ಚಿತ್ರ: ರಂಜು ಪಿ.



ರಾಜರಾಜೇಶ್ವರಿನಗರದ ಮುಖ್ಯದ್ವಾರದ ಬಳಿಯಿರುವ 'ಸಿಗ್ನಲ್ ಫ್ರೀ ರೋಟರಿ' ಕಾಮಗಾರಿ ಸ್ಥಗಿತಗೊಂಡಿದ್ದು, ಪಿಲ್ಲರ್ ತುಕ್ಕು ಹಿಡಿದಿರುವುದು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

'ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್'

₹30 ಕೋಟಿ ಗ್ರೇಡ್ ಸೆಪರೇಟರ್ ವೆಚ್ಚ

2020 ಆಗಸ್ಟ್ 7 ಗುತ್ತಿಗೆದಾರರಿಗೆ ಕಾರ್ಯಾದೇಶ

15 ತಿಂಗಳು ಕಾಮಗಾರಿ ಮುಗಿಸಲು ನೀಡಿದ್ದ ಗಡುವು

ರಾಜರಾಜೇಶ್ವರಿನಗರ 'ಸಿಗ್ನಲ್ ಫ್ರೀ ರೋಟರಿ'

₹80 ಕೋಟಿ ಯೋಜನೆಯ ಒಟ್ಟು ವೆಚ್ಚ

2022 ಜುಲೈ 1 ಕಾಮಗಾರಿಗೆ ಕಾರ್ಯಾದೇಶ ನೀಡಿದ ದಿನ

24 ತಿಂಗಳು ಕಾಮಗಾರಿ ಮುಗಿಸಲು ನೀಡಿದ್ದ ಗಡುವು

ಗುತ್ತಿಗೆದಾರರು; ಕೆಬಿಆರ್ ಇನ್‌ಫ್ರಾಟೆಕ್, ಸಹಕಾರನಗರ

ಪ್ರಹ್ಲಾದ್‌ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ತರಾಟೆ!



ಬಿಬಿಎಂಪಿ ವ್ಯಾಪ್ತಿಯಲ್ಲಿ ಮೇಲ್ಸೇತುವೆ ಸೇರಿದಂತೆ ಹಲವು ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೇಲ್ಸೇತುವೆ, ಗ್ರೇಡ್ ಸೆಪರೇಟರ್, ವೈಟ್ ಟಾಪಿಂಗ್ ಕಾಮಗಾರಿಗಳು ಸೇರಿದಂತೆ ಬೃಹತ್ ಕಾಮಗಾರಿಗಳ ನಿರ್ವಹಣೆ ಜವಾಬ್ದಾರಿ ಹೊಂದಿರುವ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರನ್ನು ತರಾಟೆಗೆ ತೆಗೆದುಕೊಂಡ ಡಿಸಿಎಂ, 'ಪ್ರಹ್ಲಾದ್ ಅವರಿಗೆ ಕಾರ್ಯ ಒತ್ತಡ ಹೆಚ್ಚಾಗಿದೆ. ಅವರ ಬಳಿ ಯೋಜನೆಗಳೂ ಅಧಿಕವಾಗಿವೆ. ಅವರಲ್ಲಿರುವ ಯೋಜನೆಗಳ ಉಸ್ತುವಾರಿಯನ್ನು ಬೇರೆಯವರಿಗೆ ನೀಡಿ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸೂಚಿಸಿದರು' ಎಂದು ಮೂಲಗಳು ತಿಳಿಸಿವೆ.

ಹೊಸಕೆರೆಹಳ್ಳಿ ಹಾಗೂ ರಾಜರಾಜೇಶ್ವರಿ ನಗರ ಮೇಲ್ಸೇತುವೆ ಕಾಮಗಾರಿಗಳು ವಿಳಂಬವಾಗುತ್ತಿರುವುದರ ಕುರಿತ ಮಾಹಿತಿಗಾಗಿ ಬಿ.ಎಸ್. ಪ್ರಹ್ಲಾದ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ, ಅವರು ಪ್ರತಿಕ್ರಿಯಿಸಲಿಲ್ಲ. ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನೂ ಪ್ರಹ್ಲಾದ್ ಹೊಂದಿದ್ದು, ನಗರದಲ್ಲಿ ನಾಲ್ಕೈದು ವರ್ಷಗಳಿಂದ ನಡೆಯುತ್ತಿರುವ ಏಳು ಮೇಲ್ಸೇತುವೆ ಕಾಮಗಾರಿಗಳ ಜವಾಬ್ದಾರಿಯನ್ನೂ ಹೊಂದಿದ್ದಾರೆ.

ಇಂದಿನಿಂದ 'ಕುಷ್ಠರೋಗದ ಕುರಿತು ಜಾಗೃತಿ ಆಂದೋಲನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜನವರಿ 30ರಿಂದ ಫೆಬ್ರುವರಿ 13ರವರೆಗೆ ಕುಷ್ಠರೋಗದ ಕುರಿತು ಜಾಗೃತಿ ಆಂದೋಲನ ನಡೆಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಸಿರಾಜುದ್ದೀನ್ ಮದನಿ ತಿಳಿಸಿದ್ದಾರೆ.

2019ರ ಏಪ್ರಿಲ್‌ನಿಂದ 2024ರ ಡಿಸೆಂಬರ್ ಅಂತ್ಯದವರೆಗೆ 341 ಕುಷ್ಠರೋಗ ಪ್ರಕರಣಗಳು ದಾಖಲಾಗಿವೆ. ಮೈಕ್ರೊ ಬ್ಯಾಕ್ಟೀರಿಯಂ ಲೆಪ್ರೆ ಎಂಬ ರೋಗಾಣುವು ಶರೀರ ಪ್ರವೇಶಿಸಿದಾಗ ಈ ರೋಗ ಉಂಟಾಗುತ್ತದೆ. ಮೂರು ವರ್ಷದೊಳಗೆ ಸ್ಪರ್ಶಜ್ಞಾನ ಕಳೆದುಕೊಂಡ ಮಚ್ಚೆಗಳು ಉದ್ಭವಿಸುವುದು ರೋಗದ ಮುಖ್ಯ ಲಕ್ಷಣ ಎಂದು ಅವರು ಮಾಹಿತಿ ನೀಡಿದ್ದಾರೆ.

2016-17ರ ಸಾಲಿನಿಂದ ಪಾಲಿಕೆ ವ್ಯಾಪ್ತಿಯಲ್ಲಿ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. 144 ಆರೋಗ್ಯ ಕೇಂದ್ರಗಳು, ಐದು ಸಾರ್ವಜನಿಕ ಆಸ್ಪತ್ರೆಗಳು, ಎಂಟು ವೈದ್ಯಕೀಯ ಕಾಲೇಜು/ಆಸ್ಪತ್ರೆಗಳು, ಎರಡು ಸ್ವಯಂಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದ್ದಾರೆ.

ಕುಷ್ಠರೋಗ ನಿರ್ಮೂಲನಕ್ಕೆ ಮುಂದಾಗಿರುವ ಪಾಲಿಕೆಯ ಆರೋಗ್ಯ ವಿಭಾಗ, 'ಒಟ್ಟಾಗಿ ನಾವು ಕುಷ್ಠರೋಗದ ಬಗ್ಗೆ ಜಾಗೃತಿ ಮೂಡಿಸೋಣ, ತಪ್ಪು ಕಲ್ಪನೆಗಳನ್ನು ಹೋಗಲಾಡಿಸೋಣ ಮತ್ತು ಕುಷ್ಠರೋಗದಿಂದ ಯಾರೂ ಬಾಧಿತರಾಗದಂತೆ ನೋಡಿಕೊಳ್ಳೋಣ' ಶೀರ್ಷಿಕೆಯಡಿ ಜಾಗೃತಿ ಆಂದೋಲನ ಹಮ್ಮಿಕೊಂಡಿದೆ.

'ಎಲ್ಲಾ ವೈದ್ಯರು ಹಾಗೂ ಪಾಲಿಕೆಯ ಸಿಬ್ಬಂದಿ, 'ಕುಷ್ಠರೋಗ ಮುಕ್ತ ಪಾಲಿಕೆ' ನಿರ್ಮಾಣದ ಪ್ರತಿಜ್ಞೆ ಸ್ವೀಕರಿಸಲಿದ್ದಾರೆ. ಆಂದೋಲನದ ಮೂಲಕ ಜನರನ್ನು ಸಂಪರ್ಕಿಸಿ, ರೋಗದ ಲಕ್ಷಣ ಹಾಗೂ ಚಿಕಿತ್ಸೆ ಕುರಿತು ಅರಿವು ಮೂಡಿಸಲಾಗುವುದು. ಕುಷ್ಠರೋಗ ಪತ್ತೆ ಕಾರ್ಯ ಸಹ ನಡೆಸಲಾಗುವುದು' ಎಂದು ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಡಾ. ಗಿರೀಶ್ ಹೇಳಿದ್ದಾರೆ.

ಮೂರು ದಿನ ಬೆಸ್ಕಾಂ ಸೇವೆ ಅಲಭ್ಯ

ಬೆಂಗಳೂರು: 'ಬೆಸ್ಕಾಂ'ನ ಗ್ರಾಮಾಂತರ ಪ್ರದೇಶಗಳಲ್ಲಿ (ನಾನ್ ಆರ್‌ಎಪಿಡಿಆರ್‌ಪಿ) ಸಮಗ್ರ ಕಂದಾಯ ನಿರ್ವಹಣಾ ಹೊಸ ತಂತ್ರಾಂಶ ಅಳವಡಿಕೆ ಕಾರ್ಯ ಕೈಗೆತ್ತಿಕೊಂಡ ಕಾರಣದಿಂದ ಜನವರಿ 30ರಿಂದ ಫೆಬ್ರುವರಿ 1ರವರೆಗೆ ಮೂರು ದಿನ ಬಿಲ್ಲಿಂಗ್, ಹೊಸ ಸಂಪರ್ಕ ಹಾಗೂ ತಂತ್ರಾಂಶ ಆಧಾರಿತ ಸೇವೆಗಳು ಲಭ್ಯವಿರುವುದಿಲ್ಲ ಎಂದು ಬೆಸ್ಕಾಂ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ, ಬೆಸ್ಕಾಂ ವ್ಯಾಪ್ತಿಯ ಉಳಿದ ಏಳು ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಕಂದಾಯ ಸಂಗ್ರಹವೊಂದನ್ನು ಬಿಟ್ಟು ತಂತ್ರಾಂಶ ಆಧಾರಿತ ಸೇವೆಗಳಲ್ಲಿ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.




ಪ್ರಶಸ್ತಿ ಪ್ರದಾನ

ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆರ್ಕಿಟೆಕ್ಟ್‌ನ ಕರ್ನಾಟಕ ವಿಭಾಗವು (ಐಐಎ–ಕೆಸಿ) ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಆರ್. ದಿವ್ಯಾ ಯಥಿರಾಜನ್, ಆನಂದ್ ಆರ್. ಕುರುಡಿ, ಆರ್. ಪ್ರಮೋದ್ ಜೈಸ್ವಾಲ್ ಹಾಗೂ ಆರ್. ರಘುನಂದನ್ ಅವರಿಗೆ 'ಐಐಎ–ಕೆಸಿ ವಿನ್ಯಾಸ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಪ್ರಶಸ್ತಿಗಳ ಪ್ರಾಯೋಜಕರೂ ಆಗಿರುವ ಅಲ್ಟ್ರಾ ಟೆಕ್ ಸಂಸ್ಥೆಯ ಜಯಶಂಕರ್ ಕೆಂಟಿಂಕಾರ, ಐಐಎ–ಕೆಸಿ ಅಧ್ಯಕ್ಷ ಆರ್. ಮೋಹನ್ ಬಿ.ಆರ್. ಹಾಗೂ ಉಪಾಧ್ಯಕ್ಷ ಆರ್. ಮುಯಿನ್ ಹ್ಯಾರಿಸ್ ಉಪಸ್ಥಿತರಿದ್ದರು

ನಿಧನ ವಾರ್ತೆ

ಬಿ. ವೆಂಕಟರಮಣ ಬಾಳಿಗಾ



ಮಂಗಳೂರು: ಬೆಂಗಳೂರಿನ ಹುಳಿಮಾವು ಪೈ ಬಡಾವಣೆ ನಿವಾಸಿ ಬಂಟ್ವಾಳ ವೆಂಕಟರಮಣ ಬಾಳಿಗಾ (92) ಅವರು ಮಂಗಳವಾರ (ಜ.28) ಸ್ವಗೃಹದಲ್ಲಿ ನಿಧನರಾದರು.

ಬಂಟ್ವಾಳ ಮೂಲದ ಇವರು ಇಂಡಿಯನ್ ಡ್ರಗ್ಸ್ ಆ್ಯಂಡ್ ಫಾರ್ಮಾ-ಸ್ಯೂಟಿಕಲ್ಸ್ ಕಂಪನಿಯಲ್ಲಿ, ಆ ಬಳಿಕ ಐಡಿಪಿಎಲ್ ಗುರುಗ್ರಾಮದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಅವರಿಗೆ ಮೂವರು ಪುತ್ರರು ಇದ್ದಾರೆ.

ಬಿಡಿಎ ಕಾರ್ಯಾಚರಣೆ: ₹25 ಕೋಟಿ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆವಲಹಳ್ಳಿ ಗ್ರಾಮದಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ, ₹25 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ. ಆವಲಹಳ್ಳಿ ಗ್ರಾಮದ ಸರ್ವೆ ನಂ. 43/1 ಮತ್ತು 43/8ರಲ್ಲಿನ 16,700 ಚದರಡಿ ಪ್ರದೇಶದಲ್ಲಿ ನಿರ್ಮಾಣವಾಗಿದ್ದ ಶೆಡ್ ಮತ್ತು ಕಾಂಪೌಂಡ್ ಅನ್ನು ಬಿಡಿಎ ಕಾರ್ಯಪಡೆಯ ಸಹಯೋಗದಲ್ಲಿ ಸಿಬ್ಬಂದಿ ತೆರವುಗೊಳಿಸಿದರು ಎಂದು ಕಾರ್ಯಪಾಲಕ ಎಂಜಿನಿಯರ್ ಕೃಷ್ಣಕುಮಾರ್ ತಿಳಿಸಿದ್ದಾರೆ.



ನಗರದಲ್ಲಿ ಇಂದು

ವೀರಭದ್ರಸ್ವಾಮಿ ಪ್ರತಿಷ್ಠಾಪನೆ ಮತ್ತು ವಿಮಾನ ಗೋಪುರ, ರಾಜ ಗೋಪುರದ ಮಹಾ ಕುಂಬಾಭಿಷೇಕ: ಮಹಾಕಾಳಿ ಅಲಂಕಾರ, ತೀರ್ಥ ಪ್ರಸಾದ ವಿನಿಯೋಗ, ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಸ್ವಯಂಭು ಕಾಳಿಯಮ್ಮ ದೇವಾಲಯ ಕುಬೇರ ಗಣಪತಿ, ದಕ್ಷಿಣಾಮೂರ್ತಿ ಸಮೇತ, ಶನೈಶ್ವರ ಸ್ವಾಮಿ ದೇವಸ್ಥಾನ, ಕಾಳಿಯಮ್ಮನ ದೇವಾಲಯ ಬೀದಿ, ಹಲಸೂರು ಮಾರುಕಟ್ಟೆ, ಬೆಳಿಗ್ಗೆ 8ರಿಂದ

ಮೀಡಿಯಾಕಾನ್–2025 ಉದ್ಘಾಟನೆ: ದಿವ್ಯಸ್ಪಂದನ (ರಮ್ಯಾ), ಭಾಷಣಕಾರರು: ಕೃಷ್ಣ ಹೆಬ್ಬಾಳೆ, ಶ್ರುತಿ ಹರಿಹರನ್, ಸೌಮ್ಯಾ ರೆಡ್ಡಿ, ಮಿರಿಯಮ್ ಜೋಸೆಫ್, ಅಂಜನಾ ಜಾರ್ಜ್, ಆಯೋಜನೆ ಮತ್ತು ಸ್ಥಳ: ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ, ಲ್ಯಾಂಗ್‌ಫೋರ್ಡ್ ರಸ್ತೆ, ಬೆಳಿಗ್ಗೆ 9.30

ಕ್ಲೈಮೇಟ್ ಎಜುಕೇಷನ್ ಸಮ್ಮಿಟ್: ಉದ್ಘಾಟನೆ: ಈಶ್ವರ ಖಂಡ್ರೆ, ಅತಿಥಿಗಳು: ರಾಜೀವ್ ಗೌಡ, ಉಮಾ ಮಹದೇವನ್, ಆಯೋಜನೆ: ಕ್ಲೈಮೇಟ್ ಎಜುಕೇಟರ್ಸ್ ನೆಟ್‌ವರ್ಕ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 9ರಿಂದ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ–75 ವರ್ಷಾಚರಣೆ ಮತ್ತು ಸರ್ವೋದಯ ದಿನಾಚರಣೆ: ಅತಿಥಿಗಳು: ಎಚ್‌.ಕೆ. ಪಾಟೀಲ, '21ನೇ ಶತಮಾನಕ್ಕೆ ಮಹಾತ್ಮ ಗಾಂಧಿ ಅಂತರರಾಷ್ಟ್ರೀಯ ವಿಚಾರಸಂಕಿರಣದ ಉಪನ್ಯಾಸ ಸಂಚಿಕೆ ಬಿಡುಗಡೆ: ಚಿರಂಜೀವಿ ಸಿಂಘ್, ಬೆಳಗಾವಿ ಕಾಂಗ್ರೆಸ್ ಅಧಿವೇಶನ–1924 ಸಚಿತ್ರ ನಿರೂಪಣಾ ಪುಸ್ತಕ ಬಿಡುಗಡೆ: ಪ್ರತಾಪ್ ಲಿಂಗಯ್ಯ, 'ಗಾಂಧಿ ಮತ್ತು ಸರ್ವೋದಯ' ಉಪನ್ಯಾಸ: ಮೀನಾ ದೇಶಪಾಂಡೆ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಅತಿಥಿಗಳು: ಎಚ್‌.ಎನ್. ಸುರೇಶ್, ಬಸವರಾಜ ಎನ್. ಅಕ್ಕಿ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11



ಚಿರಂಜೀವಿ ಸಿಂಘ್

ಎಚ್‌.ಎನ್. ಕಲಾಕ್ಷೇತ್ರಕ್ಕೆ ರಂಗ ಸ್ವಾಗತ: ಉದ್ಘಾಟನೆ: ಎಚ್‌.ಎನ್. ಕನಸಿನ ಕೂಸು: ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ರಂಗ ಪ್ರಸ್ತುತಿ: ಅಭಿನಯ ತರಂಗ–ಗೌರಿದತ್ತು, ಆದಮ್ಯ–ಮಾಲತೇಶ್ ಬಡಿಗೇರ್, ಅಂತರಂಗ–ಅಂಕಲ್ ಶ್ಯಾಮ್, ಎಚ್‌.ಎನ್. ಅವರ ಮೆಚ್ಚಿನ ಗೀತೆಗಳು: ಪ್ರವೀಣ್ ಮತ್ತು ಪ್ರದೀಪ್, ಕಲಾಗಂಗೋತ್ರಿ–ಬಿ.ವಿ. ರಾಜಾರಾಂ, ನಟರಂಗ–ಪ್ರಭಾಕರ್ ಎಸ್. ಎನ್., ಬೆನಕ–ಟಿ.ಎಸ್. ನಾಗಾಭರಣ, ಬಿಂಬ ವಿಜಯನಗರ–ಶೋಭಾ ವೆಂಕಟೇಶ್, ಎಚ್‌.ಎನ್. ಮತ್ತು ಎಚ್‌.ಎನ್. ಕಲಾಕ್ಷೇತ್ರದ ಕುರಿತು ಅನಿಸಿಕೆ: ಕೆ.ವಿ. ನಾಗರಾಜಮೂರ್ತಿ, ಅರುಂಧತಿನಾಗ್, ಟಿ.ಎನ್. ಸೀತಾರಾಂ, ಕೆ.ವೈ. ನಾರಾಯಣಸ್ವಾಮಿ, ಬಿ. ಸುರೇಶ್, ಗಣೇಶ್ ಶೆಣೈ, ಎಂ.ಕೆ. ಸುಂದರ್‌ರಾಜ್, ಹೋರಾಟದ ಹಾಡುಗಳು: ಪಿಚ್ಚಳ್ಳಿ ಶ್ರೀನಿವಾಸ್, ವೇದಿಕೆ ಸಮಾರಂಭ: 'ಮುಖ್ಯಮಂತ್ರಿ' ಚಂದ್ರು, ಎಚ್. ಎನ್. ಸುಬ್ರಹ್ಮಣ್ಯ, ವೆಂಕಟಶಿವಾ ರೆಡ್ಡಿ, ಶ್ರೀನಿವಾಸ್ ಜಿ. ಕಪ್ಪಣ್ಣ, ಆಯೋಜನೆ: ನಟರಂಗ–50 ಮತ್ತು ಎಚ್‌.ಎನ್. ಅಭಿಮಾನಿ ಬೆಂಗಳೂರು ರಂಗ ತಂಡಗಳು, ಸ್ಥಳ: ಎಚ್‌.ಎನ್. ಕಲಾಕ್ಷೇತ್ರ, ಜಯನಗರ ನ್ಯಾಷನಲ್ ಕಾಲೇಜಿನ ಆವರಣ, ಮಧ್ಯಾಹ್ನ 3ರಿಂದ

ಮಧ್ವ-ಪುರಂದರ ನಮನ: ದಾಸವಾಣಿ ಗಾಯನ: ಸುಮಲತಾ ಮಂಜುನಾಥ್, ಸಂಧ್ಯಾ ಶ್ರೀನಾಥ್, ಕೀ–ಬೋರ್ಡ್: ಟಿ.ಎಸ್. ರಮೇಶ್, ತಬಲಾ: ಶ್ರೀನಿವಾಸ ಕಾಖಂಡಕಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ ಐದನೇ ಬಡಾವಣೆ, ಸಂಜೆ 5.30

ಆರಾಧನಾ ಸಂಗೀತೋತ್ಸವ: ಗಾಯನ: ಪೂರ್ಣಿಮಾ ಅರವಿಂದ್, ಪಿಟೀಲು: ಸಿ.ವಿ. ಶ್ರುತಿ, ಮೃದಂಗ: ವಾಸುದೇವ್, ಖಂಜೀರಾ: ಸುನಾದ್ ಆನೂರ್, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ದಿ ಬ್ಲೈಂಡ್, ಜೆ.ಪಿ. ನಗರ, ಸಂಜೆ 5.30

'ಬೇಂದ್ರೆ–ಭಾವಸಂಗಮ': ಅತಿಥಿ: ರೇಖಾ ಶಾಸ್ತ್ರಿ, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

'ರಾಘವಾಂಕನ ಹರಿಶ್ಚಂದ್ರ ಕಾವ್ಯ–ಚಂದ್ರಮತಿ ವಿಲಾಪ ಪ್ರಸಂಗ' ಉಪನ್ಯಾಸ: ತಮಿಳ್ ಸೆಲ್ವಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ವಿಭಾಗಗಳು	ಹುದ್ದೆಗಳು	ನೈರುತ್ಯ ರೈಲ್ವೆ
ಪಾಯಿಂಟ್ಸ್‌ಮನ್-ಬಿ	5,058	165
ಅಸಿಸ್ಟೆಂಟ್ (ಟ್ರ್ಯಾಕ್ ಮಷಿನ್)	799	0
ಅಸಿಸ್ಟೆಂಟ್ (ಬ್ರಿಡ್ಜ್)	301	1
ಟ್ರ್ಯಾಕ್ ಮೇಂಟೇನರ್	13,187	226
ಅಸಿಸ್ಟೆಂಟ್ ಪಿ-ವೇ	247	1
ಅಸಿಸ್ಟೆಂಟ್ (C&W)	2,587	13
ಅಸಿಸ್ಟೆಂಟ್– TRD	1,381	10
ಅಸಿಸ್ಟೆಂಟ್ (S&T)	2,012	11
ಅಸಿಸ್ಟೆಂಟ್ ಲೋಕೋ ಶೆಡ್ (ಡೀಸೆಲ್)	420	9
ಅಸಿಸ್ಟೆಂಟ್ ಲೋಕೋ ಶೆಡ್ (ಎಲೆಕ್ಟ್ರಿಕಲ್)	950	5
ಅಸಿಸ್ಟೆಂಟ್ ಆಪರೇಷನ್ಸ್ (ವಿದ್ಯುತ್)	754	9
ಅಸಿಸ್ಟೆಂಟ್– TL & AC	1,041	12
ಅಸಿಸ್ಟೆಂಟ್ TL & AC (ವರ್ಕ್‌ಶಾಪ್)	624	34
ಅಸಿಸ್ಟೆಂಟ್ (ಮೆಕ್ಯಾನಿಕಲ್ ವರ್ಕ್‌ಶಾಪ್)	3,077	0

ರೈಲ್ವೆಯಲ್ಲಿ ಡಿ ಗ್ರೂಪ್ ಹುದ್ದೆಗಳಿಗೆ ನೇಮಕಾತಿ



ಮಂಜುನಾಥ ಭದ್ರಶೆಟ್ಟಿ

ಭಾರತೀಯ ರೈಲ್ವೆಯ ವಿವಿಧ ರೈಲ್ವೆ ವಲಯಗಳಲ್ಲಿ ಖಾಲಿ ಇರುವ ಲೆವೆಲ್-1 (ಡಿ-ಗ್ರೂಪ್) ಹುದ್ದೆಗಳ ಭರ್ತಿಗೆ ರೈಲ್ವೆ ನೇಮಕಾತಿ ಮಂಡಳಿಗಳಿಂದ ಆನ್‌ಲೈನ್ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ.

ಒಟ್ಟು ಹುದ್ದೆಗಳು 32,438. 10ನೇ ತರಗತಿ ತೇರ್ಗಡೆ ಹೊಂದಿದವರು ಅಥವಾ ಐಟಿಐ ಪಾಸಾದವರು ಅಥವಾ ಎನ್‌ಸಿವಿಟಿಯಿಂದ (National Council for Vocational Education and Training) ನ್ಯಾಷನಲ್ ಅಪ್ರೆಂಟಿಸ್ ತರಬೇತಿ ಪಡೆದ 18ರಿಂದ 36ರ ವಯೋಮಾನದ ಒಳಗಿರುವ ಅರ್ಹ ಪುರುಷ, ಮಹಿಳೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಬಹುದು. ಮೀಸಲು ವರ್ಗಗಳಿಗೆ ವಯೋಮಾನದಲ್ಲಿ ಸಡಿಲಿಕೆ ಇದೆ.

ಅರ್ಜಿ ಶುಲ್ಕ ಸಾಮಾನ್ಯ, ಒಬಿಸಿ ವರ್ಗದವರಿಗೆ ₹500, ಎಸ್.ಸಿ/ ಎಸ್‌ಟಿ ಇತರೆ, ಇಡಬ್ಲ್ಯೂಎಸ್, ಮಾಜಿ ಸೈನಿಕರಿಗೆ, ಲಿಂಗತ್ವ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ₹250. ಆನ್‌ಲೈನ್ ಅರ್ಜಿ ಸಲ್ಲಿಸಲು ಕಡೆಯ ದಿನ ಇದೇ ಫೆಬ್ರುವರಿ 22.

ಪರೀಕ್ಷಾ ಅವಧಿ	ಪ್ರಶ್ನೆಗಳು	ಅಂಕಗಳು
90 ನಿಮಿಷ	ಸಾಮಾನ್ಯ ವಿಜ್ಞಾನ	25
	ಗಣಿತ	25
	ಸಾಮಾನ್ಯ ಬುದ್ಧಿಮತ್ತೆ	30
	ಸಾಮಾನ್ಯ ಜ್ಞಾನ	20
	ಅಂಕಗಳು	100

ರೈಲ್ವೆಯ ಲೆವೆಲ್-1ರ ಅಂದರೆ ಡಿ- ಗ್ರೂಪ್ ವಿಭಾಗದ 14 ವಿವಿಧ ಬಗೆಯ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಈ ಹುದ್ದೆಗಳು ಕೇಂದ್ರದ 7ನೇ ವೇತನ ಆಯೋಗದ ಲೆವೆಲ್ 1ರ ಅಡಿ ಬರುತ್ತವೆ.

ಅರ್ಜಿ ಸಲ್ಲಿಕೆ ಯಶಸ್ವಿಯಾದರೆ, ಆ ಅಭ್ಯರ್ಥಿಗಳಿಗೆ ನಾಲ್ಕು ಹಂತಗಳಲ್ಲಿ ನೇಮಕಾತಿ ನಡೆಯಲಿದೆ. ಮೊದಲಿಗೆ ಕಂಪ್ಯೂಟರ್ (ಸಿಬಿಟಿ) ಆಧಾರಿತ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದೆ.

ಸಿಬಿಟಿ ಪರೀಕ್ಷೆಯಲ್ಲಿ ಮೆರಿಟ್ ಗಳಿಸಿದವರಿಗೆ (1:3) ದೈಹಿಕ ಅರ್ಹತೆ ಮತ್ತು ದೈಹಿಕ ಸಹಿಷ್ಣುತೆ ಪರೀಕ್ಷೆ (ಇಟಿ-ಪಿಎಸ್‌ಟಿ) ನಡೆಯಲಿದೆ. ದೈಹಿಕ ಪರೀಕ್ಷೆ ಪೂರ್ಣಗೊಳಿಸಿದವರಿಗೆ ವೈದ್ಯಕೀಯ (ಎಂಇ) ಪರೀಕ್ಷೆ ಇರಲಿದೆ. ಅದಾದ ಬಳಿಕ ಕೊನೆಯ ಹಂತ (ಡಿವಿ) ದಾಖಲೆಗಳ ತಪಾಸಣೆ. ಸಿಬಿಟಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರತಿ ಮೂರು ತಪ್ಪು ಉತ್ತರಗಳಿಗೆ 1 ನೆಗೆಟಿವ್ ಮಾರ್ಕಿಂಗ್ ಇರುತ್ತದೆ.

ಸ್ಪರ್ಧಾತ್ಮಕ ಸಿಬಿಟಿ ಪರೀಕ್ಷೆಯು 100 ಅಂಕಗಳಿಗೆ ಒಂದೇ ಹಂತದಲ್ಲಿ ನಡೆಯಲಿದೆ. ಬಹುಆಯ್ಕೆಯ 100 ಪ್ರಶ್ನೆಗಳಿರುತ್ತವೆ. ಉತ್ತರಿಸುವ ಅವಧಿ 90 ನಿಮಿಷ. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಆದ್ಯತೆಯ ಅನುಸಾರ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

ಭಾರತೀಯ ರೈಲ್ವೆಯ 17 ವಲಯಗಳಲ್ಲಿ ಬೆಂಗಳೂರು ಸೇರಿದಂತೆ ಒಟ್ಟು 21 ರೈಲ್ವೆ ನೇಮಕಾತಿ ಮಂಡಳಿಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ವ್ಯಾಪ್ತಿಯಲ್ಲಿ ಇರುವ ನೈರುತ್ಯ ರೈಲ್ವೆ ಹಾಗೂ ರೈಲ್ ವೀಲ್ ಫ್ಯಾಕ್ಟರಿಗೆ ಸಂಬಂಧಿಸಿದಂತೆ 503 ಗ್ರೂಪ್- ಡಿ ಹುದ್ದೆಗಳಿವೆ. ವಿವರವಾದ ಅಧಿಸೂಚನೆ ಹಾಗೂ ಅರ್ಜಿ ಸಲ್ಲಿಸಲು ವೆಬ್‌ಸೈಟ್ www.rrbbnc.gov.in. ಪರಿಶೀಲಿಸಬೇಕು.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಭಾರತದ ಕೆಳಗಿನ ಯಾವ ರಾಜ್ಯಗಳ ಸಾಮಾಜಿಕ ಲೆಕ್ಕ ಪರಿಶೋಧನೆಯಲ್ಲಿ ಶೂನ್ಯ ಭ್ರಷ್ಟಾಚಾರ ಮತ್ತು ಶೂನ್ಯ ವಸೂಲಾತಿ ಎಂದು ವರದಿಯಾಗಿದೆ?

1. ಗೋವಾ
2. ಮೇಘಾಲಯ
3. ಗುಜರಾತ್
4. ಕರ್ನಾಟಕ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 2 ಮತ್ತು 3
ಸಿ. 3 ಮತ್ತು 4 ಡಿ. 4 ಮಾತ್ರ

ಉತ್ತರ : ಎ

2. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಯಾವ ಸೆಕ್ಷನ್ ಅನ್ವಯ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಿರ್ವಹಿಸಲಾಗುತ್ತದೆ?

ಎ. ಸೆಕ್ಷನ್ 17
ಬಿ. ಸೆಕ್ಷನ್ 18
ಸಿ. ಸೆಕ್ಷನ್ 19
ಡಿ. ಸೆಕ್ಷನ್ 20

ಉತ್ತರ : ಎ

3. ಅರ್ಜೆಂಟೀನಾದ ಕೆಳಗಿನ ಯಾವ ಪ್ರದೇಶವನ್ನು ಕೃಷಿ ಚಟುವಟಿಕೆಯ ಹೃದಯಭಾಗ ಎಂದು ಕರೆಯಲಾಗುತ್ತದೆ?

ಎ. ಪಂಪಸ್
ಬಿ. ದ ಆಂಡೀಸ್
ಸಿ. ಪಟಗೋನಿಯ
ಡಿ. ಸೆಟಗೋನಿಯ

ಉತ್ತರ : ಎ

4. ಭಾರತ ಮತ್ತು ಅರ್ಜೆಂಟೀನಾ ರಾಷ್ಟ್ರಗಳು ಕೆಳಗಿನ ಯಾವ ವಲಯದ ಒಪ್ಪಂದಕ್ಕೆ ಸಹಿ ಹಾಕಿವೆ?

ಎ. ಮುಕ್ತ ವ್ಯಾಪಾರ ಒಪ್ಪಂದ
ಬಿ. ಸಾಂಸ್ಕೃತಿಕ ವಿನಿಮಯ ಒಪ್ಪಂದ
ಸಿ. ಸಾಮಾಜಿಕ ಭದ್ರತಾ ಒಪ್ಪಂದ
ಡಿ. ಮಹಿಳಾ ಹಕ್ಕುಗಳ ಸಂರಕ್ಷಣಾ ಒಪ್ಪಂದ

ಉತ್ತರ : ಸಿ

5. ಕೆಳಗಿನ ಯಾವ ಉಪಕ್ರಮಗಳನ್ನು ಮಿಥೇನ್ ಹೊರಸೂಸುವಿಕೆ ತಗ್ಗಿಸಲು ತೆಗೆದುಕೊಂಡಿರುವ ಅಂತರರಾಷ್ಟ್ರೀಯ ಉಪಕ್ರಮಗಳು ಎಂದು ಪರಿಗಣಿಸಬಹುದು?

1. ಮಿಥೇನ್ ಅಲರ್ಟ್ ಅಂಡ್ ರೆಸ್ಪಾನ್ಸ್ ಸಿಸ್ಟಮ್
2. ಗ್ಲೋಬಲ್ ಮಿಥೇನ್ ಫ್ಲೆಡ್ಜ್
3. ಗ್ಲೋಬಲ್ ಮಿಥೇನ್ ಇನಿಷಿಯೇಟಿವ್
4. ಇಂಟರ್ ನ್ಯಾಷನಲ್ ಮಿಥೇನ್ ಆಕ್ಟಿವಿಟಿ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 1 ಮತ್ತು 2
ಸಿ. 2 ಮತ್ತು 4 ಡಿ. 3 ಮತ್ತು 4

ಉತ್ತರ : ಎ

6. ಹರಿತ್ ಧಾರಾಗೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆ ಸರಿಯಾದ ವಿವರಣೆಯನ್ನು ನೀಡುತ್ತದೆ?

ಎ. ವಯೋವೃದ್ಧರಿಗೆ ಇತ್ತೀಚೆಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ಕಾರ್ಯಕ್ರಮ
ಬಿ. ಅಂಗವಿಕಲರಿಗೆ ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದಿರುವ ನೂತನ ಕಾರ್ಯಕ್ರಮ
ಸಿ. ಭಾರತೀಯ ಕೃಷಿ ಸಂಶೋಧನಾ ಮಂಡಳಿ ಅಭಿವೃದ್ಧಿಪಡಿಸಿರುವ ಜಾನುವಾರು ಮೇವು
ಡಿ. ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ನೋಂದಣಿಗೆ ಅಭಿವೃದ್ಧಿಪಡಿಸಿರುವ ಆನ್‌ಲೈನ್ ಪೋರ್ಟಲ್

ಉತ್ತರ : ಸಿ

7. ಬಿಹಾರ ಸರ್ಕಾರ ಬಿಡುಗಡೆ ಮಾಡಿರುವ ಜಾತಿ ಸಮೀಕ್ಷೆ ವರದಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ವರದಿಯ ಅನ್ವಯ ತೀವ್ರ ಸ್ವರೂಪದಲ್ಲಿ ಹಿಂದುಳಿದ ವರ್ಗಗಳ ಪ್ರಮಾಣ ಹೆಚ್ಚಳವಾಗಿದೆ
2. ವರದಿಯನ್ವಯ ಇತರೆ ಹಿಂದುಳಿದ ವರ್ಗಗಳ ಪ್ರಮಾಣ ಎರಡನೇ ಸ್ಥಾನದಲ್ಲಿದೆ
3. ಬೌದ್ಧರು, ಕ್ರೈಸ್ತರು ಮತ್ತು ಜೈನ ಧರ್ಮದವರ ಜನಸಂಖ್ಯೆ ಪ್ರಮಾಣ ಶೇ ಒಂದಕ್ಕಿಂತ ಕಡಿಮೆ ಇದೆ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2 ಮತ್ತು 3 ಬಿ. 2 ಮತ್ತು 3
ಸಿ. 1 ಮತ್ತು 2 ಡಿ. 3 ಮಾತ್ರ

ಉತ್ತರ : ಎ

8. ಇತ್ತೀಚೆಗೆ ಕೆಳಗಿನ ಯಾವ ರಾಜ್ಯ ಜಾತಿ ಸಮೀಕ್ಷೆಯ ವರದಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿದೆ?

ಎ. ಉತ್ತರ ಪ್ರದೇಶ
ಬಿ. ಮಧ್ಯಪ್ರದೇಶ
ಸಿ. ಅರುಣಾಚಲ ಪ್ರದೇಶ
ಡಿ. ಬಿಹಾರ

ಉತ್ತರ : ಡಿ

9. ಉತ್ತರ ಅಮೆರಿಕದ ಪ್ರಮುಖ ಕೈಗಾರಿಕಾ ಕೇಂದ್ರವಾದ ನ್ಯೂ ಇಂಗ್ಲೆಂಡ್ ರೀಜನ್ ನಲ್ಲಿ ಕೆಳಗಿನ ಯಾವ ಉತ್ಪನ್ನಗಳು ಹೆಚ್ಚಾಗಿ ತಯಾರಾಗುತ್ತವೆ?

1. ಲೋಹದ ಕೈಗಾರಿಕೆಗಳು
2. ಜವಳಿ ಉತ್ಪನ್ನಗಳು
3. ವಿದ್ಯುನ್ಮಾನ ಯಂತ್ರೋಪಕರಣ ಕೈಗಾರಿಕೆಗಳು
4. ಎಂಜಿನಿಯರಿಂಗ್ ಉತ್ಪನ್ನಗಳ ಕೈಗಾರಿಕೆಗಳು

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1, 2, 3 ಮತ್ತು 4 ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮಾತ್ರ

ಉತ್ತರ : ಎ

10. ಪೋ ಕಣಿವೆ ಪ್ರದೇಶವು ಕೆಳಗಿನ ಯಾವ ಯುರೋಪಿನ ರಾಷ್ಟ್ರದಲ್ಲಿ ಕಂಡುಬರುತ್ತದೆ?

ಎ. ಫ್ರಾನ್ಸ್
ಬಿ. ಇಂಗ್ಲೆಂಡ್
ಸಿ. ಇಟಲಿ
ಡಿ. ಸ್ವೀಡನ್

ಉತ್ತರ : ಸಿ

11. ಕಿಲಿಮಂಜಾರೋ ಪರ್ವತ ಶ್ರೇಣಿ ಕೆಳಗಿನ ಯಾವ ರಾಷ್ಟ್ರಗಳಲ್ಲಿ ಕಂಡುಬರುತ್ತದೆ?

ಎ. ತಂಜಾನಿಯ
ಬಿ. ಕೀನ್ಯಾ
ಸಿ. ದಕ್ಷಿಣ ಆಫ್ರಿಕಾ
ಡಿ. ಉಗಾಂಡ

ಉತ್ತರ : ಎ

12. ಆಫ್ರಿಕಾದಲ್ಲಿ ಕಂಡುಬರುವ ಅಟ್ಲಾಸ್ ಪರ್ವತಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಗಳನ್ನು ಗುರುತಿಸಿ?

1. ಆಫ್ರಿಕಾ ಖಂಡದ ಈಶಾನ್ಯ ಭಾಗದಿಂದ ನೈರುತ್ಯ ಭಾಗದವರೆಗೂ ಈ ಪರ್ವತಗಳು ಆವೃತವಾಗಿವೆ
2. ಮೊರಾಕೊ, ಅಲ್ಜೀರಿಯಾ ಮತ್ತು ಟ್ಯುನಿಷಿಯಾ ರಾಷ್ಟ್ರಗಳಲ್ಲಿ ಅಟ್ಲಾಸ್ ಪರ್ವತ ಶ್ರೇಣಿಯನ್ನು ಕಾಣಬಹುದು

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

13. 'ದ ಗ್ರೀನ್ ವಾಯೇಜ್ 2050'ರ ಒಪ್ಪಂದವನ್ನು ಕೆಳಗಿನ ಯಾವ ರಾಷ್ಟ್ರ ಅಂತರರಾಷ್ಟ್ರೀಯ ಸಮುದ್ರಯಾನ ಸಂಘಟನೆಯೊಂದಿಗೆ ಸಹಿ ಹಾಕಿದೆ?

ಎ. ನಾರ್ವೆ
ಬಿ.. ಐರ್ಲೆಂಡ್
ಸಿ. ಇಂಗ್ಲೆಂಡ್
ಡಿ. ಅಮೆರಿಕ

ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

10) Read the following conversation and change the underlined sentence into reported speech :

Kusuma **:** Hello Nethra, where are you going ?

Nethra **:** Hi, *I am moving to my native place today.*

Nethra told Kusuma ....

Ans. :. Nethra told Kusuma that she was moving to her native place that day

11) The following paragraph has *two* errors. Edit the paragraph and rewrite it in the answer-book


Dr. Sarabhai realise the importance of industries in India. He set up Sarabhai chemicals, a pharmaceutical industri at Ahmedabad.

a) Spelling mistake to be corrected
b) Verbal mistake to be corrected.

Ans. **:**

Dr. Sarabhai realised the importance of industry in India. He set up Sarabhai chemicals, a pharmaceutical industri at Ahmedabad

XI. Study the picture given below. Write a description or an account of what the picture suggests to you in a paragraph:



41. The above pictures represents over traffic. The number of vehicles increased

The increase in vehicles is a major issue in cities like Bengaluru. The rapid urbanization in India has led to a significant increase in the number of motor vehicles. As the number of vehicles increases, so does the congestion, and vehicles are becoming the main source of air pollution in urban India.

It is very difficult or horrible to travel. Where Pot holes in the road, Authorities should repair the Pot holes now & then. Over speeding should be checked to avoid accidents. If the authorities built the fly overs, it will help the riders and travellers. All people should aware of all these anti should Co-operate with the authorities

XII. Read the following passage and answer the questions that follow:

42. There seems to be a general opinion in this country that Sardar Patel was slightly of a harsh and rough temperament. Men call him the 'Iron man Of India.' He was, no doubt, an Iron man in the sense that .one could rely on him for strict and efficient administration. But as a man, to those who had the good fortune of coming into close contact with him, he was kind and considerate. At times, he even became emotional, where his friends and followers were concerned. However, it goes without saying that the Sardar had the great skill for organizing affairs. He knew the way of picking people and putting them in their proper places. Once he judged a man and found him correct, he trusted him fully and got him to do anything he wanted.

A. What lessons do you learn from the life of the Sardar Patel?

Ans:- The lessons we learn from the life of Sardar Patel were:(i) The Strict and efficient administration.
(ii) The Great skill for Organizing affairs.
(iii) The way of picking people and putting them in their proper places.
(iv) Judging a man and found him correct, trust him fully and got him to do anything he wanted.

43. B. What kind of a man war Sardar Patel in his private life?

Ans:- Sardar Patel was kind and considerate. At times, he even became emotional, where his friends and followers were concerned in his private life.

XII Answer the following question in about 8-10 sentences:

44. According to the poet, his grandmother was genius, Substantiate this Statement.

Ans:- The tree may be high or spreading, She would have to climb. Even at the age of 62 she climbed a tree, she had the capacity or climbing the tree very quickly. She has this skill. She is fond of climbing a tree since her childhood. She had this gift and enjoying a lot. She feels happy to climb a tree. She had more pleasure in a tree than in a lift.

OR

The pathetic figure of Jazz player is lifted by his music. Justify.

Ans:- He wanted to tell that he was a Black Man. He had been sent here to preach the Black Gospel of Jazz. He was preaching it with words by loud musical sound. When he started to preach, he was transformed into a Bird. That Bird gathers its wings and flies high, high and higher until it flies away. Otherwise he come back to find himself as a Black man again.

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC -BIOLOGY

REVISION : MODEL QUESTIONS

1. Select the correct sequence of events in microsporogenesis

a) Sporogenous tissue → Microspore mother cell →Microspore tetrad →Microspores
b) Microspores →Microspore mother cell →Microspore tetrad → Sporogenous tissue
c) Sporogenous tissue → Microspore tetrad →Microspores → Microspore mother cell
d) Microspores → Sporogenous tissue →Microspore tetrad → Microspore mother cell

Ans:- (a) Sporogenous tissue →Microspore mother cell →Microspore tetrad →Microspores

2(A). Aids spreads due to..............

A) Homosexuality B) Immoral way of life
C) Infected needles and syringes.
D) All the above **Ans:-** D

2(B). Statement I: The process of release of sperms from the seminiferous tubule is called spermatogenesis.

Statement II: The spermatids are transformed into spermatozoa by the process called spermiogensis.

Choose the correct answer from the options given below:

a) Both statement I and statement II are correct
b) Both statement I and statement II are incorrect
c) Statement I is correct but statement II is incorrect
d) Statement I is incorrect but statement II is correct

Ans:- (d) Statement I is incorrect but statement II is correct

3. The function of myometrium layer present in the uterine wall is to

a) Undergo cyclical changes during menstrual cycle.
b) Exhibit strong uterine contraction during parturition.
c) Give protection to the uterus.
d) Help in the implantation process.

Ans:- (b) Exhibit strong uterine contraction during parturition.

4. The ________ hormone is secreted by the ovary in the later phase of pregnancy.

a) Androgens b) Estrogens
c) Relaxin d) Progestogens

Ans:-(c) Relaxin

5. Sperms produced by the seminiferous tubules are transported through accessory ducts. Which duct should be tied and cut for male sterilization?

a) Vas deferens b) Vasa efferentia
c) Rete testis d) Epididymis

Ans:-(a) Vas deferens

6. Reasons for human population explosion are given below:

i) Rapid decline in maternal mortality rate.
ii) Rapid decline in infant mortality rate.
iii) Rapid increase in death rate.
iv) Increase in the number of people in reproducible age.

Select the correct answer statements from the options given below:

a) i), ii) and iii) only
b) i) and ii) only
c) i), ii) and iv) only
d) iii) and iv) only

Ans:- (c) i), ii) and iv) only

7. In a dihybrid cross in pea plants, Mendel got 9:3:3:1 phenotypic ratio. It denotes that

a) The alleles of two genes are interacting with each other.
b) It is a polygenic inheritance.
c) It is a multiple allelic inheritance.
d) The alleles of two genes are segregating independently.

Ans:- (d) The alleles of two genes are segregating independently.

8. A DNA segment has a total of 1000 nucleotides, out of which 240 of them are adenine containing nucleotides. How many pyrimidines bases this DNA segement possesses?

a) 480 b) 500
c) 760 d) 260

Ans:- (b) 500

9. $(p + q)^2 = p^2 + 2pq + q^2$ represents an equation used in:

a) Population genetics
b) Mendelian genetics
c) Molecular genetics
d) Biometrics

Ans:- (a) Population genetics

10. A farmer working in a field was bitten by poisonous snake. Doctor gave him an antivenom treatment that contain preformed antibodies. This type of immunisation is known as

a) Autoimmunity
b) Passive immunisation
c) Innate immunity
d) Active immunisation

Ans:- (b) Passive immunisation

17. Treatment of snake bite by antivenine is

A) Artificial acquired active immunity
,B) Artificial acquired passive immunity
C) Natural acquired passive immunity
D) Special natural immunity. Ans:-B

ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ, ಅನುಭವ ಕೇಂದ್ರ ಉದ್ಘಾಟನೆ

ಟೋಯಿಂಗ್ ಜಾರಿಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಂತ್ರಜ್ಞಾನ ಬಳಸಿಕೊಂಡು ನಗರದಲ್ಲಿ ಸಂಚಾರ ಸುಧಾರಣೆಗೆ ಹಲವು ಕ್ರಮ ಕೈಗೊಳ್ಳಲಾಗಿದೆ. ಕೆಲವು ರಸ್ತೆಗಳಲ್ಲಿ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿಗೆ ತರಲು ನಗರದ ಪೊಲೀಸರು ಚಿಂತನೆ ನಡೆಸಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಇನ್‌ಫೆಂಟ್ರಿ ರಸ್ತೆಯ ಸಂಚಾರ ನಿರ್ವಹಣಾ ಕೇಂದ್ರದಲ್ಲಿ (ಟಿಎಂಸಿ) ಬುಧವಾರ 'ನಗರ ಚಲನಶೀಲತೆ ಸವಾಲುಗಳು ಮತ್ತು ಪೊಲೀಸರ ಪಾತ್ರ' ವಿಷಯದ ಮೇಲೆ ಪೊಲೀಸರು–ಸಂಪಾದಕರ ಜತೆಗೆ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

'ದೆಹಲಿ ಬಿಟ್ಟರೆ ಬೆಂಗಳೂರಿನಲ್ಲೇ ಹೆಚ್ಚಿನ ಸಂಚಾರ ಪೊಲೀಸರು ಕಾರ್ಯ-ನಿರ್ವಹಿಸುತ್ತಿದ್ದಾರೆ. ಇರುವ ವ್ಯವಸ್ಥೆಯಲ್ಲೇ ಸಂಚಾರ ಸುಧಾರಣೆಗೆ ಹಲವು ಕ್ರಮ ಕೈಗೊಳ್ಳಲಾಗಿದೆ. ಕಳೆದ ವರ್ಷ ಐದು ಸಂಚಾರ ಪೊಲೀಸ್ ಠಾಣೆ ಪ್ರಾರಂಭಿಸಲಾಗಿತ್ತು. ಅಗತ್ಯ ಬಿದ್ದರೆ ಇನ್ನಷ್ಟು ಸಂಚಾರ ಪೊಲೀಸ್ ಠಾಣೆ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

'ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಹೆಚ್ಚಿನ ಮೇಲ್ಸೇತುವೆ ನಿರ್ಮಾಣ ಮಾಡಲಾಗಿತ್ತು. ಅದಾದ ಬಳಿಕ ಮೇಲ್ಸೇತುವೆ ನಿರ್ಮಾಣ ಕಾರ್ಯ ಅಷ್ಟಾಗಿ ನಡೆದಿಲ್ಲ. ನಗರದಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, ಇನ್ನಷ್ಟು ಮೂಲಸೌಕರ್ಯ ಅಭಿವೃದ್ಧಿ ಕೆಲಸಗಳು ನಡೆಯಬೇಕಿವೆ. ಒಂದು ಮನೆಯಲ್ಲಿ ನಾಲ್ಕು ವಾಹನಗಳಿವೆ. ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಂಡಿಲ್ಲ. ಮೂಲ ಸೌಕರ್ಯಗಳು ಪೂರ್ಣ ಪ್ರಮಾಣದಲ್ಲಿ ಆಗಬೇಕಿದ್ದರೆ ಇನ್ನಷ್ಟು ಸಮಯ ಬೇಕಿದೆ' ಎಂದು ಹೇಳಿದರು.

'ಮಾರ್ಚ್ 3ರಂದು ರಾಜ್ಯ ಬಜೆಟ್ ಮಂಡನೆ ಆಗಲಿದೆ. ಸುಧಾರಣಾ ಕ್ರಮಕ್ಕೆ ಹೆಚ್ಚಿನ ಅನುದಾನ ಬೇಕಿದೆ. ಈ ಬಾರಿಯ ಬಜೆಟ್‌ನಲ್ಲಿ ಪೊಲೀಸ್ ಇಲಾಖೆಗೆ ಹೆಚ್ಚಿನ ಅನುದಾನ ಮೀಸಲಿಡುವಂತೆ ಕೋರಲಾಗುವುದು' ಎಂದು ಹೇಳಿದರು.

ಬೆಂಗಳೂರಿನ ಹಲವು ರಸ್ತೆಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿರುವುದು ಕಂಡುಬಂದಿದೆ. ಕಳೆದ ವರ್ಷ 85 ಲಕ್ಷ ವಾಹನಗಳ ಮಾಲೀಕರು, ಚಾಲಕರಿಂದ ₹89 ಕೋಟಿ ದಂಡ ಸಂಗ್ರಹಿಸಲಾಗಿದೆ. ಸಂಚಾರ ನಿಯಮ ಉಲ್ಲಂಘಿಸಿದವರಿಗೆ ದಂಡ ಹಾಕುವ ಪ್ರಕ್ರಿಯೆ ಮುಂದುವರೆಯಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.


ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರವನ್ನು ಗೃಹ ಸಚಿವ ಜಿ.ಪರಮೇಶ್ವರ ಅವರು ವೀಕ್ಷಿಸಿದರು

ನಗರದಲ್ಲಿ ಸಂಚಾರ ಸುಧಾರಣೆಗೆ ಜನರು ಸಹಕಾರ ನೀಡಬೇಕು. ಆಗ ಮಾತ್ರ ಸಂಚಾರ ಪೊಲೀಸರ ಯೋಜನೆಗಳು ಯಶಸ್ವಿಯಾಗಲು ಸಾಧ್ಯ
ಜಿ.ಪರಮೇಶ್ವರ, ಗೃಹ ಸಚಿವ

'ಸರ್ಜಾಪುರ, ಹೆಬ್ಬಾಳ ರಸ್ತೆಯಲ್ಲಿ ವಿಪರೀತ ದಟ್ಟಣೆ ಇದೆ. ನಿಗದಿತ ಸಮಯಕ್ಕೆ ಸರಿಯಾಗಿ ಸ್ಥಳಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ' ಎಂಬ ಪತ್ರಕರ್ತರೊಬ್ಬರ ಅಹವಾಲಿಗೆ ಉತ್ತರಿಸಿದ ಗೃಹ ಸಚಿವ, 'ಬೆಳಿಗ್ಗೆ ಹೆಚ್ಚಿನ ದಟ್ಟಣೆ ಉಂಟಾಗುತ್ತಿದೆ. ಹಗಲು ವೇಳೆ ನಗರದೊಳಕ್ಕೆ ಕಾಂಕ್ರೀಟ್ ಮಿಕ್ಸರ್ ವಾಹನಗಳ ಓಡಾಟಕ್ಕೆ ಕಡಿವಾಣ ಹಾಕಲಾಗುವುದು' ಎಂದು ಹೇಳಿದರು.

ಇದೇ ವೇಳೆ ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರವನ್ನು ಪರಮೇಶ್ವರ ಅವರು ಉದ್ಘಾಟಿಸಿದರು.

ಈ ಸಂಗ್ರಹಾಲಯವು ನಗರದ ಸಂಚಾರ ನಿರ್ವಹಣೆಯ ಇತಿಹಾಸವನ್ನು ಪ್ರದರ್ಶಿಸುತ್ತಿದೆ. ಅಲ್ಲದೇ ಐತಿಹಾಸಿಕ ಛಾಯಾಚಿತ್ರಗಳು, ದಾಖಲೆಗಳು, ಹಳೆಯ ಉಪಕರಣಗಳು ಹಾಗೂ ಸಮವಸ್ತ್ರಗಳು ಇವೆ.

ಬುಲ್ಡೋಜರ್ಸ್ ತಂಡ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೆಲೆಬ್ರಿಟಿ ಕ್ರಿಕೆಟ್ ಲೀಗ್ (ಸಿಸಿಎಲ್) 11ನೇ ವರ್ಷದ ಟೂರ್ನಿಗೆ ಸಿದ್ಧತೆ ಆರಂಭವಾಗಿದ್ದು, ಕರ್ನಾಟಕ ಬುಲ್ಡೋಜರ್ಸ್ ತಂಡವನ್ನು ಪ್ರಕಟಿಸಲಾಗಿದೆ. ಫೆಬ್ರುವರಿ 8ರಂದು ಆರಂಭವಾಗುವ ಈ ಬಾರಿಯ ಲೀಗ್‌ನಲ್ಲಿ ಏಳು ತಂಡಗಳು ಕಣದಲ್ಲಿವೆ.

ಕಳೆದ ಬಾರಿ ರನ್ನರ್ ಅಪ್ ಆಗಿದ್ದ ಕರ್ನಾಟಕ ಬುಲ್ಡೋಜರ್ಸ್ ತಂಡವನ್ನು ಈ ಬಾರಿಯೂ ಸುದೀಪ್ ಮುನ್ನಡೆ-ಸಲಿದ್ದು, ಉದ್ಯಮಿ ಅಶೋಕ್ ಖೇಣಿ ತಂಡದ ಮಾಲೀಕರಾಗಿದ್ದಾರೆ. ಕಳೆದ ಬಾರಿ ಟೂರ್ನಿ ತಪ್ಪಿಸಿಕೊಂಡಿದ್ದ ಗಣೇಶ್ ಈ ಬಾರಿ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ಲೀಗ್‌ನಲ್ಲಿ ಭಾಗವಹಿಸಲಿರುವ ಇತರ ತಂಡಗಳು ಎಂದರೆ– ಚೆನ್ನೈ ರೈನೋಸ್, ಬೆಂಗಾಲ್ ಟೈಗರ್ಸ್, ಪಂಜಾಬ್ ಡಿ ಶೇರ್, ಮುಂಬೈ ಹೀರೋಸ್, ಭೋಜ್‌ಪುರಿ ದಬಾಂಗ್ಸ್, ತೆಲುಗು ವಾರಿಯರ್ಸ್.

ಬೆಂಗಳೂರಿನಲ್ಲಿ ಫೆ. 8ರಂದು ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಚೆನ್ನೈ ರೈನೋಸ್ ಮತ್ತು ಬೆಂಗಾಲ್ ಟೈಗರ್ಸ್ ಮುಖಾಮುಖಿಯಾಗಲಿದ್ದು, ಅದೇ ದಿನ ನಡೆಯುವ ಎರಡನೇ ಪಂದ್ಯದಲ್ಲಿ ಕರ್ನಾಟಕ ಬುಲ್ಡೋಜರ್ಸ್ ಮತ್ತು ತೆಲುಗು ವಾರಿಯರ್ಸ್ ಸೆಣಸಾಡಲಿವೆ.

ಕರ್ನಾಟಕ ಬುಲ್ಡೋಜರ್ಸ್ ತಂಡ: ಸುದೀಪ್, ಗಣೇಶ್, ಕಾರ್ತಿಕ್ ಜಯರಾಮ್, ಡಾರ್ಲಿಂಗ್ ಕೃಷ್ಣ, ಸುನಿಲ್ ರಾವ್, ರಾಜೀವ್ ಹನು, ಚಂದನ್ ಕುಮಾರ್, ಪ್ರತಾಪ್ ನಾರಾಯಣ್, ನಿರೂಪ್ ಭಂಡಾರಿ, ಅನೂಪ್ ಭಂಡಾರಿ, ಕರಣ್ ಆರ್ಯನ್, ಮಂಜುನಾಥ್ ಗೌಡ, ಸಾಗರ್ ಗೌಡ, ಅಲಕಾನಂದ, ತ್ರಿವಿಕ್ರಮ್.

ಸೆಲೆಬ್ರಿಟಿ ಕ್ರಿಕೆಟ್ ಲೀಗ್


ಉದ್ಯಮಿ ಅಶೋಕ್ ಖೇಣಿ ಮತ್ತು ನಟ ಸುದೀಪ್ ಅವರು ಬೆಂಗಳೂರಿನಲ್ಲಿ ತಂಡದ ಜರ್ಸಿ ಬಿಡುಗಡೆ ಮಾಡಿದರು

ಕಾರಿನಿಂದ ಡಿಕ್ಕಿ ಹೊಡೆಸಿ ಕೊಲೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಸವಾರನ ಮೇಲೆ ನಡುರಸ್ತೆಯಲ್ಲಿ ಹಲ್ಲೆ ನಡೆಸಿ, ಕಾರಿನಿಂದ ಗುದ್ದಿಸಿ ಕೊಲೆಗೆ ಯತ್ನಿಸಿರುವ ಘಟನೆ ಸುಬ್ರಮಣ್ಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮಲ್ಲೇಶ್ವರದ ಮಿಲ್ಕ್ ಕಾಲೊನಿ ನಿವಾಸಿ ಎನ್. ಭರತ್(25) ಹಲ್ಲೆಗೆ ಒಳಗಾದವರು.

ಜ.8ರ ಮುಂಜಾನೆ ಸುಮಾರು 1.30ಕ್ಕೆ ಮಲ್ಲೇಶ್ವರದ 17ನೇ ಅಡ್ಡರಸ್ತೆಯ ಜಿಯೊ ಮೆಸ್ಟ್ರಿ ಗ್ಯಾಸ್ಟ್ರೊ ಪಬ್ ಎದುರು ಘಟನೆ ನಡೆದಿದೆ. ಹಲ್ಲೆಯ ದೃಶ್ಯ ಘಟನಾ ಸ್ಥಳ ಸಮೀಪದ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಭರತ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಪತ್ತೆಗೆ ಪೊಲೀಸರು ಶೋಧ ಮುಂದುವರೆಸಿದ್ದಾರೆ. ಕಾರಿಗೆ ಅಡ್ಡ ಬಂದಿದ್ದಕ್ಕೆ ಚಾಲಕ ಸೇರಿದಂತೆ ಮೂವರು ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರು ಹೇಳಿದರು.

ಸೌಹಾರ್ದ ಸಂಕಲ್ಪ ಪ್ರತಿಜ್ಞೆ ಸ್ವೀಕಾರ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಹಾರ್ದ ಕರ್ನಾಟಕ ಸಂಘಟನೆಯು ಮಹಾತ್ಮ ಗಾಂಧೀಜಿ ಅವರ ಹುತಾತ್ಮ ದಿನವಾದ ಜನವರಿ 30ರಂದು ಸಂಜೆ 5.30ಕ್ಕೆ 'ಸೌಹಾರ್ದ ಸಂಕಲ್ಪ ಪ್ರತಿಜ್ಞೆ ಸ್ವೀಕಾರ' ಕಾರ್ಯಕ್ರಮವನ್ನು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದೆ.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ವಿದ್ವಾಂಸ ಜಿ. ರಾಮಕೃಷ್ಣ, ಸಾಹಿತಿಗಳಾದ ಕೆ. ಮರುಳಸಿದ್ಧಪ್ಪ, ಎಲ್. ಹನುಮಂತಯ್ಯ, ಬಂಜಗೆರೆ ಜಯಪ್ರಕಾಶ್, ಮೂಡ್ನಾಕೂಡು ಚಿನ್ನಸ್ವಾಮಿ, ಎಸ್.ಜಿ. ಸಿದ್ಧರಾಮಯ್ಯ, ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್, ನಿವೃತ್ತ ಐಪಿಎಸ್ ಅಧಿಕಾರಿ ನಿಸಾರ್ ಅಹಮದ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸಂಚಾಲಕ ಮಾವಳ್ಳಿ ಶಂಕರ್ ಪಾಲ್ಗೊಳ್ಳಲಿದ್ದಾರೆ.

ಸಂಗೀತ ನಿರ್ದೇಶಕಿ ಶಮಿತಾ ಮಲ್ನಾಡ್ ಅವರು ಸೌಹಾರ್ದ ಸಂಕಲ್ಪ ಪ್ರತಿಜ್ಞೆಯನ್ನು ಬೋಧಿಸಲಿದ್ದಾರೆ ಎಂದು ಸೌಹಾರ್ದ ಕರ್ನಾಟಕದ ರಾಜ್ಯ ಸಂಯೋಜಕ ಎಸ್.ವೈ. ಗುರುಶಾಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಮೀನು ಸುಪರ್ದಿಗೆ ಪಡೆಯಲು ಸೂಚನೆ

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಬೆಂಗಳೂರು: ಡಾ.ಎಚ್. ನರಸಿಂಹಯ್ಯ ಅಂತರ ರಾಷ್ಟ್ರೀಯ ವಿಜ್ಞಾನ ಕೇಂದ್ರದ ಸ್ಥಾಪನೆಗೆ ಈಗಾಗಲೇ 132 ಎಕರೆ ಜಾಗ ಹಂಚಿಕೆಯಾಗಿದೆ. ಈ ಜಾಗವನ್ನು ಆದಷ್ಟು ಬೇಗನೆ ಇಲಾಖೆ ಸುಪರ್ದಿಗೆ ಪಡೆಯಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಮುಖ್ಯಮಂತ್ರಿಯವರ ಗೃಹಕಚೇರಿ 'ಕೃಷ್ಣಾ'ದಲ್ಲಿ ಬುಧವಾರ ನಡೆದ ವಿಜ್ಞಾನ–ತಂತ್ರಜ್ಞಾನ ಇಲಾಖೆಯ ಪ್ರಗತಿ ಪರಿ ಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಬೆಂಗಳೂರು ನಗರದಲ್ಲಿ ವಿಜ್ಞಾನ ನಗರ ಸ್ಥಾಪನೆಗೆ ಹಂಚಿಕೆ ಮಾಡಲಾದ 25 ಎಕರೆ ಭೂಮಿಯನ್ನು ಇಲಾಖೆಗೆ ಪಡೆಯಲು ಕ್ರಮ ಕೈಗೊಳ್ಳಬೇಕು. ರಾಮನಗರದಲ್ಲಿ ವಿಜ್ಞಾನ ಕೇಂದ್ರ ಸ್ಥಾಪನೆಗೆ ಅಗತ್ಯವಿರುವ ಜಮೀನು ಪಡೆಯಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಒಟ್ಟು 9 ತಾರಾಲಯಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದ್ದು, 5 ತಾರಾಲಯಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಬೆಂಗಳೂರಿನಲ್ಲಿ ಒಂದು ತಿಂಗಳು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಉತ್ಸವ ಆಯೋಜನೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ವಿದ್ಯಾರ್ಥಿ ಗಳಿಗೆ ಆಕಾಶ ಕಾಯಗಳ ಬಗ್ಗೆ ಆಸಕ್ತಿ ಮೂಡಿಸಲು 833 ವಸತಿಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಿಗೆ ದೂರದರ್ಶಕ ಒದಗಿಸ-ಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

'ನಮ್ಮವರ ರಕ್ಷಣೆಗೆ ಸರ್ವ ಪ್ರಯತ್ನ'

ಬೆಂಗಳೂರು: 'ಪ್ರಯಾಗ್‌ರಾಜ್‌ನ ಮಹಾಕುಂಭ-ಮೇಳದಲ್ಲಿ ಕಾಲ್ತುಳಿತದಿಂದ ಗಾಯಗೊಂಡವರನ್ನು ಕ್ಷೇಮವಾಗಿ ಕರೆ ತರಲು ಅಧಿಕಾರಿಗಳನ್ನು ನಿಯೋಜಿಸಿದ್ದು, ನಮ್ಮವರ ರಕ್ಷಣೆಗೆ ಸರ್ಕಾರ ಎಲ್ಲ ರೀತಿಯ ಪ್ರಯತ್ನ ನಡೆಸುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಕುಂಭಮೇಳದಲ್ಲಿ ಪಾಲ್ಗೊಂಡಿರುವ ಕನ್ನಡಿಗರು ಜಾಗರೂಕತೆಯಿಂದ ಇರಬೇಕು ಎಂದು ಅವರು 'ಎಕ್ಸ್' ಮೂಲಕ ಮನವಿ ಮಾಡಿದ್ದಾರೆ. ಮುಂಜಾನೆ ಸಂಭವಿಸಿದ ಕಾಲ್ತುಳಿತದಲ್ಲಿ ಹಲವರು ಸಾವಿಗೀಡಾದ ಸುದ್ದಿ ತಿಳಿದು ದುಃಖವಾಯಿತು. ಘಟನೆಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ.

ಬೇಡಿಕೆಗಳ ಈಡೇರಿಕೆಗೆ ಅಂಗನವಾಡಿ ಕಾರ್ಯಕರ್ತೆಯರ ಆಗ್ರಹ

ಮೂರನೇ ದಿನಕ್ಕೆ ಕಾಲಿಟ್ಟ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ಆರಂಭಿಸಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕೊರೆಯುವ ಚಳಿಯಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಹೋರಾಟ ಮುಂದುವರಿಸಿದ್ದಾರೆ. ಮುಷ್ಕರ ಮೂರನೇ ದಿನಕ್ಕೆ ಕಾಲಿಟ್ಟಿದೆ.

ಮಂಗಳವಾರದಿಂದ ಹೋರಾಟ ಆರಂಭವಾಗಿದ್ದು, ಎರಡನೇ ದಿನವಾದ ಬುಧವಾರವೂ ಅಹೋರಾತ್ರಿ ಮುಷ್ಕರ ಮುಂದುವರಿಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸರ್ಕಾರದ ವಿರುದ್ಧ ಘೋಷಣಾ ಫಲಕ ಪ್ರದರ್ಶಿಸಿ-ದರು. ಘೋಷಣೆಗಳು, ಹೋರಾಟದ ಹಾಡಿನೊಂದಿಗೆ ತಮ್ಮ ಬೇಡಿಕೆ ಈಡೇರಿಕೆಗಾಗಿ ಪಟ್ಟು ಹಿಡಿದಿದ್ದಾರೆ.

'ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ತಿಂಗಳಿಗೆ ₹25 ಸಾವಿರ ಹಾಗೂ ಅಂಗನವಾಡಿ ಸಹಾಯಕಿಯರಿಗೆ ₹12 ಸಾವಿರ ವೇತನ ನಿಗದಿಪಡಿಸಬೇಕು. ಕಾರ್ಯಕರ್ತೆಯರನ್ನು 'ಸಿ' ದರ್ಜೆ ಹಾಗೂ ಸಹಾಯಕಿಯರನ್ನು 'ಡಿ' ದರ್ಜೆಯ ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಸಮಗ್ರ ಶಿಶು ಅಭಿವೃದ್ಧಿ (ಐಸಿಡಿಎಸ್) ಯೋಜನೆ ಜಾರಿಯಾಗಿ 50 ವರ್ಷವಾದರೂ ಅಂಗನವಾಡಿ ಕಾರ್ಯಕರ್ತೆಯರಿಗೆ ಅಗತ್ಯ ಸೌಲಭ್ಯಗಳು ಸಿಗುತ್ತಿಲ್ಲ' ಎಂದು ಪ್ರತಿಭಟನಕಾರರು ಬೇಸರ ವ್ಯಕ್ತಪಡಿಸಿದರು.

ಮೂಲ ಸೌಕರ್ಯದ ಕೊರತೆ: 'ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿರುವ ಸಾವಿರಾರು ಅಂಗನ ವಾಡಿ ಕಾರ್ಯಕರ್ತೆಯರು ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಸ್ವಾತಂತ್ರ್ಯ ಉದ್ಯಾನ ಹಾಗೂ ಸುತ್ತಮುತ್ತ ಮೂಲ ಸೌಕರ್ಯಗಳ ಕೊರತೆ ಇದ್ದು, ಪ್ರತಿಭಟನಾನಿರತ ಮಹಿಳೆಯರು ಪರದಾಡುತ್ತಿದ್ದಾರೆ. ಕಾರ್ಯಕರ್ತೆಯರು ಉದ್ಯಾನದಲ್ಲಿಯೇ ಉಳಿದುಕೊಂಡಿದ್ದೇವೆ. ಆದರೆ, ನಮಗೆ ಕುಡಿಯುವ ನೀರು, ಶೌಚಾಲಯ ಸಮಸ್ಯೆ ಉಂಟಾಗಿದೆ. ತಾತ್ಕಾಲಿಕ ಶೌಚಾಲಯಗಳ ವ್ಯವಸ್ಥೆ ಮಾಡದ ಕಾರಣದಿಂದ ಹಣ ನೀಡಿ ಶೌಚಾಲಯಗಳನ್ನು ಬಳಸುವ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಸಂಘದ ಅಧ್ಯಕ್ಷೆ ಬಿ. ಪ್ರೇಮಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.


ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳದಲ್ಲಿ ಬುಧವಾರ ರಾತ್ರಿ ತಾಯಿಯ ಬಳಿ ಮಗುವೊಂದು ಆಟವಾಡುತ್ತಿತ್ತು ಚಿತ್ರ: ಎಂ.ಎಸ್.ಮಂಜುನಾಥ್

'ಬೇಡಿಕೆ ಈಡೇರುವ ತನಕ ಹೋರಾಟ'

'ಗುರುವಾರ ಸಚಿವ ಸಂಪುಟ ಸಭೆ ನಡೆಯಲಿದೆ. ಮುಷ್ಕರ ಹಿಂಪಡೆದು ಮನೆ ಕಡೆಗೆ ಹೊರಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ' ಎಂದು ಸಂಘದ ಅಧ್ಯಕ್ಷೆ ಬಿ. ಪ್ರೇಮಾ ತಿಳಿಸಿದರು.

'ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಲು ಬುಧವಾರ ಸಂಜೆ ಮುಖ್ಯಮಂತ್ರಿ ಯವರನ್ನು ಭೇಟಿಮಾಡಿದ್ದೆವು. ಸಿದ್ದರಾಮಯ್ಯ ಅವರು ನಮ್ಮ ಬೇಡಿಕೆಗಳಿಗೆ ಸ್ಪಂದಿಸದೇ, 'ಮುಂದೆ ನೋಡೋಣ' ಎಂದು ಹೇಳಿದರು. ಆದ್ದರಿಂದ ಬೇಡಿಕೆಗಳನ್ನು ಈಡೇ-ರಿಸುವವರೆಗೂ ನಾವು ಇಲ್ಲಿಂದ ಹೋಗಲ್ಲ' ಎಂದು ಹೇಳಿದರು.

ಮಂತ್ರಿ ಮಾಲ್ ಪಕ್ಕದ ಜಕ್ಕರಾಯನ ಕೆರೆ ಮೈದಾನದಲ್ಲಿ ನಡೆದ ಅಗ್ನಿ ಅವಘಡ

148 ವಾಹನಗಳು ಬೆಂಕಿಗೆ ಆಹುತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನ ಹಾಗೂ ಸಂಚಾರ ನಿಯಮ ಉಲ್ಲಂಘನೆ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿಕೊಂಡ ವಾಹನಗಳನ್ನು ನಿಲುಗಡೆ ಮಾಡಿದ್ದ ಶ್ರೀರಾಮಪುರದ ಜಕ್ಕರಾಯನ ಕೆರೆ ಮೈದಾನದಲ್ಲಿ ಬುಧವಾರ ಬೆಳಿಗ್ಗೆ ಸಂಭವಿಸಿದ ಅಗ್ನಿ ದುರಂತದಲ್ಲಿ 148 ವಾಹನಗಳು ಬೆಂಕಿಗೆ ಆಹುತಿಯಾಗಿವೆ.

ಬೆಳಿಗ್ಗೆ 11ರ ಸುಮಾರಿಗೆ ಸಣ್ಣದಾಗಿ ಕಾಣಿಸಿಕೊಂಡ ಬೆಂಕಿ ವ್ಯಾಪಿಸುತ್ತಲೇ ಹೋದ ಪರಿಣಾಮ 131 ದ್ವಿಚಕ್ರ ವಾಹನಗಳು, ನಾಲ್ಕು ಚಕ್ರದ 14 ವಾಹನಗಳು ಹಾಗೂ ಮೂರು ಆಟೊಗಳು ಭಸ್ಮವಾಗಿವೆ. ಸದ್ಯ 148 ವಾಹನಗಳು ಸುಟ್ಟು ಕರಕಲಾಗಿರುವ ಮಾಹಿತಿ ಸಿಕ್ಕಿದೆ ಎಂದು ಪೊಲೀಸರು ಹೇಳಿದರು.

ಮಾಹಿತಿ ತಿಳಿದು ತಕ್ಷಣವೇ ನಾಲ್ಕು ವಾಹನ ಸಹಿತ ಸ್ಥಳಕ್ಕೆ ತೆರಳಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಿಯಂತ್ರಿಸಲು ಯಶಸ್ವಿಯಾದರು.

‘ಬುಧವಾರ ಬೆಳಿಗ್ಗೆ ಪ್ರಖರ ಬಿಸಿಲಿನ ಜತೆಗೆ ಗಾಳಿ ಬೀಸುತ್ತಿತ್ತು. ಇದರಿಂದ ಬೆಂಕಿ ವ್ಯಾಪಿಸುತ್ತಲೇ ಸಾಗಿತ್ತು. ಹಳೆಯ ವಾಹನಗಳನ್ನು ನಿಲುಗಡೆ ಮಾಡಲಾಗಿದ್ದ ಸ್ಥಳದಲ್ಲಿ ಗಿಡಗಳು ಬೆಳೆದಿದ್ದವು. ಇದರಿಂದ ಬೆಂಕಿ ಪ್ರಖರವಾಗಿ ಉರಿಯುತ್ತಿತ್ತು. ನಿರಂತರ ಕಾರ್ಯಾಚರಣೆಯಿಂದ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಯಿತು. ನಾಲ್ಕು ತಾಸು ಕಾರ್ಯಾಚರಣೆ ನಡೆಸಲಾಯಿತು’ ಎಂದು ಅಗ್ನಿಶಾಮಕ ದಳದ ಅಧಿಕಾರಿಗಳು ತಿಳಿಸಿದ್ದಾರೆ.



ನಗರದ ಶ್ರೀರಾಮಪುರ ಪೊಲೀಸ್ ಠಾಣಾ ವ್ಯಾಪ್ತಿಯ ಜಕ್ಕರಾಯನ ಕೆರೆಯ ಮೈದಾನದಲ್ಲಿ ಬುಧವಾರ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದರು —ಪ್ರಜಾವಾಣಿ ಚಿತ್ರ

ಘಟನೆಗೆ ಕುರಿತು ತನಿಖೆ ನಡೆದಿದೆ. ಮೈದಾನದಲ್ಲಿ ಹಾವು ಕಾಣಿಸಿಕೊಳ್ಳುತ್ತಿವೆ ಎಂದು ಸ್ಥಳೀಯರು ಹಿಂದೆ ದೂರು ನೀಡಿದ್ದಾಗ ಮೈದಾನವನ್ನು ಸ್ವಚ್ಛ ಮಾಡಲಾಗಿತ್ತು

ಸೈದುಲ್ ಅದಾವತ್
ಡಿಸಿಪಿ, ಉತ್ತರ ವಿಭಾಗ

ನಗರದ ಸುಮಾರು 70 ಪೊಲೀಸ್ ಠಾಣೆಗಳ ಪೊಲೀಸರು ವಿವಿಧ ಪ್ರಕರಣಗಳಲ್ಲಿ ಜಪ್ತಿ ಮಾಡಿದ ವಾಹನಗಳನ್ನು ಜಕ್ಕರಾಯನಕೆರೆ ಮೈದಾನದಲ್ಲಿ ನಿಲುಗಡೆ ಮಾಡುತ್ತಾರೆ. ಈ ಮೈದಾನದಲ್ಲಿ ವಿವಿಧ ಮಾದರಿಯ ಸುಮಾರು 500ಕ್ಕೂ ಹೆಚ್ಚು ವಾಹನಗಳನ್ನು ನಿಲುಗಡೆ ಮಾಡಲಾಗಿತ್ತು. ಮೈದಾನದ ಒಂದು ಬದಿಯಲ್ಲಿ ಕಾಣಿಸಿಕೊಂಡ ಬೆಂಕಿ ವಾಹನಗಳಿಗೆ ತಗುಲಿ ಅವಘಡ ಸಂಭವಿಸಿದೆ.

ಘಟನೆ ನಡೆದ ಪ್ರದೇಶಕ್ಕೆ ಹೊಂದಿಕೊಂಡಂತೆ ಕೆಲವು ಮನೆಗಳಿವೆ. ಒಂದು ಬದಿಯಲ್ಲಿ ಮೆಟ್ರೊ ಹಸಿರು ಮಾರ್ಗ ಇದೆ. ಇನ್ನೊಂದು ಬದಿಯಲ್ಲಿ ರೈಲ್ವೆ ಹಳಿ ಇದೆ.

ಘಟನಾ ಸ್ಥಳಕ್ಕೆ ಉತ್ತರ ವಿಭಾಗದ ಡಿಸಿಪಿ ಸೈದುಲ್ ಅದಾವತ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶ್ರೀರಾಮಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

ಕಿಡಿಗೇಡಿಗಳ ಕೃತ್ಯ ಶಂಕೆ

ವಾಹನ ನಿಲುಗಡೆ ಮಾಡಿದ್ದ ಸ್ಥಳದಲ್ಲಿ ಗಿಡಗಳು ಬೆಳೆದಿವೆ. ಸುತ್ತಲೂ ಬೇಲಿ ನಿರ್ಮಿಸಿದ್ದರೂ ಕಿಡಿಗೇಡಿಗಳು ಆ ಸ್ಥಳಕ್ಕೆ ಹೋಗುತ್ತಾರೆ. ಕಿಡಿಗೇಡಿಗಳು ಬೀಡಿ ಅಥವಾ ಸಿಗರೇಟ್ ಸೇದಿ ಎಸೆದ ಪರಿಣಾಮ ಬೆಂಕಿ ಅವಘಡ ಸಂಭವಿಸಿರುವ ಶಂಕೆ ವ್ಯಕ್ತವಾಗಿದೆ.

ವೇಶ್ಯಾವಾಟಿಕೆ: ಹಲವೆಡೆ ಸಿಸಿಬಿ ದಾಳಿ

ಐಷಾರಾಮಿ ಹೋಟೆಲ್, ಅಪಾರ್ಟ್‌ಮೆಂಟ್‌ನಲ್ಲಿ ನಡೆಯುತ್ತಿದ್ದ ಅಕ್ರಮ ಚಟುವಟಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಐಷಾರಾಮಿ ಹೋಟೆಲ್, ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳ ಮೇಲೆ ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ಹಾಗೂ ಸಿಬ್ಬಂದಿ ದಾಳಿ ನಡೆಸಿ, ಹೊರ ರಾಜ್ಯ ಹಾಗೂ ವಿದೇಶದ ಮಹಿಳೆಯರನ್ನು ರಕ್ಷಿಸಿದ್ದಾರೆ. ದಂಧೆ ನಡೆಸುತ್ತಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಹೊರ ರಾಜ್ಯ ಹಾಗೂ ವಿದೇಶಗಳಿಂದ ಮಾನವ ಕಳ್ಳ ಸಾಗಣೆ ಮೂಲಕ ಮಹಿಳೆಯರನ್ನು ಕರೆತಂದು ಕೆ.ಆರ್.ಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರತಿಷ್ಠಿತ ಹೋಟೆಲ್ ಒಂದರಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ನಾಲ್ವರು ಮಹಿಳೆಯರನ್ನು ರಕ್ಷಿಸಿದ್ದಾರೆ.

ಉದ್ಯೋಗ ಕೊಡಿಸುವುದಾಗಿ ಆಮಿಷವೊಡ್ಡಿ ಯುವತಿಯರನ್ನು ಕರೆಸಿಕೊಂಡು ಸಂಪಿಗೆಹಳ್ಳಿಯ ಅಪಾರ್ಟ್‌ಮೆಂಟ್‌ನಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದ ಆರೋಪಿಯನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ಇಬ್ಬರು ಮಹಿಳೆಯರನ್ನು ರಕ್ಷಿಸಲಾಗಿದೆ.

ಉದ್ಯೋಗ ಕೊಡಿಸುವ ನೆಪದಲ್ಲಿ ವಿದೇಶದ ಇಬ್ಬರು ಮಹಿಳೆಯರನ್ನು ಮಾನವ ಕಳ್ಳ ಸಾಗಣೆ ಮೂಲಕ ಕರೆತಂದು ರಾಮಮೂರ್ತಿನಗರ ಹಾಗೂ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯಲ್ಲಿ ಕೂಡಿಹಾಕಿ ವೇಶ್ಯಾವಾಟಿಕೆ ದಂಧೆಗೆ ದೂಡಲಾಗಿತ್ತು. ಇಬ್ಬರು ಮಹಿಳೆಯರು ಹಾಗೂ ಮಗುವನ್ನು ರಕ್ಷಣೆ ಮಾಡಲಾಗಿದೆ. ರಕ್ಷಿಸಿದ ಮಹಿಳೆಯರನ್ನು ತುಮಕೂರಿನಲ್ಲಿ ಇರುವ ವಲಸಿಗರ ಬಂಧನ ಕೇಂದ್ರದಲ್ಲಿ ಇರಿಸಲಾಗಿತ್ತು. ಅವರನ್ನು ಚೆನ್ನೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವಲಸೆ ವಿಭಾಗದ ಅಧಿಕಾರಿಗಳ ವಶಕ್ಕೆ ನೀಡಲಾಗಿದೆ. ಅಲ್ಲಿನ ಅಧಿಕಾರಿಗಳು ಮಹಿಳೆಯರನ್ನು ಸಂಬಂಧಪಟ್ಟ ದೇಶಕ್ಕೆ ವಾಪಸ್ ಕಳುಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶ್ರೀನಗರದ ಮನೆಯೊಂದರಲ್ಲಿ ವೇಶ್ಯಾವಾಟಿಕೆ ದಂಧೆ ನಡೆಯುತ್ತಿರುವ ಖಚಿತ ಮಾಹಿತಿ ಸಿಕ್ಕಿತ್ತು. ಮನೆಯ ಮೇಲೆ ದಾಳಿ ನಡೆಸಿ, ವಿದೇಶಿ ಮಹಿಳೆಯನ್ನು ರಕ್ಷಿಸಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಅಕ್ರಮ ವಲಸಿಗರ ಬಂಧನ: ಬಂಡೆಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಐಡಿಐ ಲೇಔಟ್‌ನಲ್ಲಿ ನೆಲಸಿದ್ದ ನಾಲ್ವರು ಅಕ್ರಮ ವಲಸಿಗರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳು ಮಧ್ಯವರ್ತಿಗಳ ಮೂಲಕ ಪಾನ್‌ಕಾರ್ಡ್ ಸೇರಿದಂತೆ ಅಗತ್ಯ ದಾಖಲೆಗಳನ್ನು ಪಡೆದು ಕೊಂಡಿದ್ದರು ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ರಸ್ತೆಯಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ

ಬೆಂಗಳೂರು: ರಸ್ತೆಯಲ್ಲಿ ನಡೆದು ತೆರಳುವ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪಿಯನ್ನು ಬನಶಂಕರಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.



ಇಸ್ಲಾಂವುದ್ದೀನ್

ಅಸ್ಸಾಂನ ಇಸ್ಲಾಂವುದ್ದೀನ್ (31) ಬಂಧಿತ ಆರೋಪಿ. 36 ವರ್ಷದ ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

‘ದೂರುದಾರ ಮಹಿಳೆಯು ಜನವರಿ 23ರಂದು ಬೆಳಿಗ್ಗೆ 8.30ರ ಸುಮಾರಿಗೆ ಬನಶಂಕರಿ ಎರಡನೇ ಹಂತದ ರಸ್ತೆಯೊಂದರಲ್ಲಿ ನಡೆದು ತೆರಳುತ್ತಿದ್ದರು. ಒಂಟಿಯಾಗಿ ತೆರಳುತ್ತಿದ್ದ ಮಹಿಳೆಯನ್ನು ಗಮನಿಸಿದ ಆರೋಪಿ, ಮಹಿಳೆಯ ಹಿಂಭಾಗಕ್ಕೆ ಹೊಡೆದು ಪರಾರಿಯಾಗಿದ್ದ’ ಎಂದು ಹೇಳಿದರು.

‘ಮಹಿಳೆ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯನ್ನು ಬರೆದು-ಕೊಂಡಿದ್ದರು. ಅದನ್ನು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು. ‘ಆರೋಪಿ ಇದೇ ರೀತಿ ಹಲವು ಕಡೆ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಅಪಘಾತ: ಸ್ಥಳದಲ್ಲೇ ಯುವತಿ ಸಾವು

ಬೆಂಗಳೂರು: ಬನಶಂಕರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ದೇವೇಗೌಡ ಪೆಟ್ರೋಲ್ ಬಂಕ್‌ನ ಜಂಕ್ಷನ್ ಬಳಿ ಚಲಿಸುತ್ತಿದ್ದ ಬಿಎಂಟಿಸಿ ಬಸ್ ಹತ್ತಲು ಯತ್ನಿಸಿ, ಆಯತಪ್ಪಿ ಬಿದ್ದ ಯುವತಿ ಮೇಲೆ ಬಸ್‌ನ ಚಕ್ರ ಹರಿದು ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬುಧವಾರ ಬೆಳಿಗ್ಗೆ ಘಟನೆ ನಡೆದಿದೆ. ಆಂಧ್ರಪ್ರದೇಶದ ಅನಂತಪುರದ ಮೋನಿಕಾ(20) ಮೃತಪಟ್ಟವರು.

ಮೋನಿಕಾ ಅವರು ಬೊಮ್ಮನಹಳ್ಳಿಯ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸದ ಸ್ಥಳಕ್ಕೆ ನಿತ್ಯ ಬಿಎಂಟಿಸಿ ಬಸ್‌ನಲ್ಲಿ ತೆರಳುತ್ತಿದ್ದರು. ಜಂಕ್ಷನ್‌ನಲ್ಲಿ ಚಲಿಸುತ್ತಿದ್ದ ಬಿಎಂಟಿಸಿ ಬಸ್ ಹತ್ತಲು ಯತ್ನಿಸಿದಾಗ ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಬಸ್‌ನ ಹಿಂಬದಿ ಚಕ್ರಗಳು ಮೋನಿಕಾ ಮೇಲೆ ಹರಿದ ಪರಿಣಾಮ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಕೆರೆ ಅಭಿವೃದ್ಧಿಗೆ ಮಳೆಗಾಲದ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆರೆ ಒತ್ತುವರಿಯನ್ನು ತೆರವು ಮಾಡಿ, ಮಳೆಗಾಲ ಆರಂಭಕ್ಕೂ ಮುನ್ನ ಅವುಗಳನ್ನು ಅಭಿವೃದ್ಧಿ ಮಾಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮುಖ್ಯಮಂತ್ರಿ ಗೃಹಕಚೇರಿ ಕೃಷ್ಣಾದಲ್ಲಿ ಬುಧವಾರ ನಡೆದ ಸಭೆಯಲ್ಲಿ ರಾಜ್ಯದ ಕೆರೆಗಳ ಸ್ಥಿತಿಗತಿಯ ಬಗ್ಗೆ ಸಿದ್ದರಾಮಯ್ಯ ಮಾಹಿತಿ ಪಡೆದುಕೊಂಡರು. ಕೆರೆಗಳ ಸರ್ವೆ ಕಾರ್ಯ, ಒತ್ತುವರಿ ತೆರವು ಮತ್ತು ಜೀರ್ಣೋದ್ಧಾರ ಕೆಲಸಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೆರೆ ಒತ್ತುವರಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಒತ್ತುವರಿದಾರರ ವಿರುದ್ಧ ಕ್ರಮ ತೆಗೆದು ಕೊಳ್ಳಬೇಕು. ಈ ಹೊಣೆ ನಿಭಾಯಿಸದಿದ್ದರೆ ಅದನ್ನೂ ಗಂಭೀರವಾಗಿ ಪರಿಗಣಿಸಬೇಕು. ಕಂದಾಯ ಇಲಾಖೆಯು 30,000 ಕೆರೆಗಳ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಿದ್ದು, ಉಳಿದ 10,754 ಕೆರೆಗಳ ಸರ್ವೆಯನ್ನು ಆರು ತಿಂಗಳ ಒಳಗೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಎಸ್‌ಟಿಪಿಗೆ ಅನುಮೋದಿಸಲು ಸೂಚನೆ: ಬೆಂಗಳೂರಿನಲ್ಲಿ ಹೊಸದಾಗಿ 583 ಎಂಎಲ್‌ಡಿ ನೀರನ್ನು ಸಂಸ್ಕರಿಸಲು ಹೊಸ ಎಸ್‌ಟಿಪಿಗಳನ್ನು ನಿರ್ಮಿಸುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿ ಎಂದು ಹಣಕಾಸು ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು.

ಸಣ್ಣ ನೀರಾವರಿ ಇಲಾಖೆಯ ಪ್ರಗತಿಯನ್ನು ಪರಿಶೀಲಿಸಿದ ಅವರು, ಕೆಸಿ ವ್ಯಾಲಿ, ವೃಷಭಾವತಿ, ಹೊಸಕೋಟೆ, ಆನೆಕಲ್ ಯೋಜನೆಗಳ ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಕೆರೆಗಳನ್ನು ತುಂಬಿಸಲು ಅಗತ್ಯವಿರುವ ನೀರನ್ನು ಒದಗಿಸಲು ಬೆಂಗಳೂರು ಜಲಮಂಡಳಿ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಅಗತ್ಯವಿರುವ ಅನುದಾನ ಒದಗಿಸಲಾಗುವುದು ಎಂದರು.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇಲಾಖೆಗೆ ₹1,577 ಕೋಟಿ ಅನುದಾನ ಬಿಡುಗಡೆಯಾಗಿದ್ದು, ₹ 1468.17 ಕೋಟಿ ವೆಚ್ಚ ಮಾಡಲಾಗಿದೆ. ಹೊಸದಾಗಿ 9449 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಸೃಷ್ಟಿಸಲಾಗಿದೆ. ಕೆ.ಸಿ ವ್ಯಾಲಿ 1ನೇ ಹಂತದಲ್ಲಿ ₹1,342 ಕೋಟಿ ವೆಚ್ಚ ಮಾಡಿದ್ದು, 145 ಕೆರೆಗಳಿಗೆ ನೀರು ತುಂಬಿಸಲಾಗಿದೆ. 2ನೇ ಹಂತದಲ್ಲಿ ₹446 ಕೋಟಿ ವೆಚ್ಚದಲ್ಲಿ 272 ಕೆರೆಗಳನ್ನು ತುಂಬಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸಾಕ್ಷ್ಯಚಿತ್ರ ನಿರ್ದೇಶಕ ಸುಹೇಲ್ ಬ್ಯಾನರ್ಜಿ ಹೇಳಿಕೆ

ಹಲವು ಕಥೆ ಹೇಳುವ ‘ಸೈಕಲ್ ಮಹೇಶ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾಲದಲ್ಲಿ ವಲಸೆ ಕಾರ್ಮಿಕನೊಬ್ಬ ಸೈಕಲ್‌ನಲ್ಲಿ ಸತತ ಏಳು ದಿನ 1,700 ಕಿಲೋಮೀಟರ್ ಸಂಚರಿಸಿದ ಕಥೆಯನ್ನು ಇಟ್ಟುಕೊಂಡು ನಿರ್ಮಿಸಿರುವ ‘ಸೈಕಲ್ ಮಹೇಶ್’ ಚಿತ್ರವು ಹಲವು ಕಥೆಗಳನ್ನು ಹೇಳುತ್ತದೆ ಎಂದು ಸಾಕ್ಷ್ಯಚಿತ್ರ ನಿರ್ದೇಶಕ ಸುಹೇಲ್ ಬ್ಯಾನರ್ಜಿ ತಿಳಿಸಿದರು.

ಗೌರಿ ಲಂಕೇಶ್ ಅವರ ಜನ್ಮ ದಿನ ‘ಗೌರಿ ದಿನ’ ಕಾರ್ಯಕ್ರಮದ ಪ್ರಯುಕ್ತ ಗೌರಿ ಸ್ಮಾರಕ ಟ್ರಸ್ಟ್ ಬುಧವಾರ ನಗರದಲ್ಲಿ ಹಮ್ಮಿಕೊಂಡಿದ್ದ ‘ಸೈಕಲ್ ಮಹೇಶ್’ ಸಾಕ್ಷ್ಯಚಿತ್ರ ಪ್ರದರ್ಶನದ ಬಳಿಕ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದೇಶದಾದ್ಯಂತ ಲಾಕ್‌ಡೌನ್ ಮಾಡಿದಾಗ ವಲಸೆ ಕಾರ್ಮಿಕರು ಕೆಲಸ ಇಲ್ಲದೇ, ಊರಿಗೂ ಮರಳಲಾರದೇ ಸಂಕಷ್ಟಕ್ಕೆ ಸಿಲುಕಿದ್ದರು. ಹಲವರು ನಡೆದುಕೊಂಡೇ ಹೊರಟಿದ್ದರು. ಮಹೇಶ್ ಎಂಬ ಯುವ ಕಾರ್ಮಿಕನೊಬ್ಬ ಸೈಕಲ್‌ನಲ್ಲಿ ತನ್ನೂರಿಗೆ ಹೊರಟು ಏಳು ದಿನಗಳಲ್ಲಿ ತಲುಪಿದ. ಅದು ಮಾಧ್ಯಮಗಳಲ್ಲಿ ಆಗ ದೊಡ್ಡ ಸುದ್ದಿಯಾಗಿತ್ತು. ಈ ನಿಜ ಘಟನೆಯನ್ನು ಇಟ್ಟುಕೊಂಡು ಕಥೆ ಹೆಣೆಯಲಾಗಿದೆ. ನಾವು ಇಲ್ಲಿ ಆಡಳಿತದ ವೈಫಲ್ಯವನ್ನು ತೋರಿಸದೇ ಇದ್ದರೂ ಕಥೆಯೇ ಅದನ್ನು ಹೇಳುತ್ತದೆ’ ಎಂದು ಹೇಳಿದರು.



ಗೌರಿ ದಿನದ ಪ್ರಯುಕ್ತ ಗೌರಿ ಸ್ಮಾರಕ ಟ್ರಸ್ಟ್ ಬುಧವಾರ ನಗರದಲ್ಲಿ ಹಮ್ಮಿಕೊಂಡಿದ್ದ ‘ಸೈಕಲ್ ಮಹೇಶ್’ ಸಾಕ್ಷ್ಯಚಿತ್ರದ ಬಗೆಗಿನ ಸಂವಾದದಲ್ಲಿ ಸಾಕ್ಷ್ಯಚಿತ್ರ ನಿರ್ದೇಶಕ ಸುಹೇಲ್ ಬ್ಯಾನರ್ಜಿ ಮಾತನಾಡಿದರು. ಚಳವಳಿಗಾರ ವಿ.ಎಸ್. ಶ್ರೀಧರ್, ಗೌರಿ ಸ್ಮಾರಕ ಟ್ರಸ್ಟ್ ಅಧ್ಯಕ್ಷೆ ತೀಸ್ತಾ ಸೆಟಲ್ವಾಡ್, ಉಪಾಧ್ಯಕ್ಷೆ ಕವಿತಾ ಲಂಕೇಶ್, ಸಂಭಾಷಣೆಗಾರ್ತಿ ಗುರ್ಲೀನ್ ಜಡ್ಜ್ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಭಾರತೀಯ ಸಿನಿಮಾ ಮಾಧ್ಯಮವು ಕಾರ್ಮಿಕ ವರ್ಗವನ್ನು ಅಲಕ್ಷಿಸಿದೆ. ಸಣ್ಣ ಚಿತ್ರಗಳ ಮೂಲಕ ಕಾರ್ಮಿಕರ ಸಂಕಷ್ಟ, ಹೋರಾಟವನ್ನು ತೋರಿಸುವ ಪ್ರಯತ್ನ ಇದು ಎಂದರು.

ಅಂತರರಾಷ್ಟ್ರೀಯ ಡಾಕ್ಯುಮೆಂಟರಿ ಚಲನಚಿತ್ರೋತ್ಸವದಲ್ಲಿ ಪ್ರಥಮ ಸ್ಥಾನ ಪಡೆದ ಈ ಚಿತ್ರವು 60 ನಿಮಿಷದ್ದಾಗಿದೆ. ಒಡಿಶಾ, ಮರಾಠಿ ಮತ್ತು ಹಿಂದಿ ಮಿಶ್ರಿತ ಭಾಷೆಯಲ್ಲಿರುವ ಚಿತ್ರವು ಮಹೇಶನ ಪ್ರಯಾಣದ ವೇಳೆ ದಾರಿ ತಪ್ಪುವುದು, ಸೈಕಲ್ ಹಾಳಾಗುವುದು, ಗುಡ್ಡ ಏರುವುದು, ರಾತ್ರಿ ಪ್ರಯಾಣ, ಸ್ನೇಹಿತರೊಂದಿಗೆ ಚರ್ಚೆಗಳನ್ನು ಕಟ್ಟಿಕೊಡುತ್ತದೆ.

ಸಂವಾದ ಕಾರ್ಯಕ್ರಮದಲ್ಲಿ ಚಳವಳಿಗಾರ ವಿ.ಎಸ್. ಶ್ರೀಧರ್, ಗೌರಿ ಸ್ಮಾರಕ ಟ್ರಸ್ಟ್ ಅಧ್ಯಕ್ಷೆ ತೀಸ್ತಾ ಸೆಟಲ್ವಾಡ್, ಉಪಾಧ್ಯಕ್ಷೆ ಕವಿತಾ ಲಂಕೇಶ್, ಕಾರ್ಯದರ್ಶಿ ಪ್ರದೀಪ್, ಸಂಭಾಷಣೆಗಾರ್ತಿ ಗುರ್ಲೀನ್ ಜಡ್ಜ್ ಉಪಸ್ಥಿತರಿದ್ದರು.

ತೋವಿನಕೆರೆ ಸಮೀಪದ ಕುರಂಕೋಟೆಯಲ್ಲಿ ಅಜ್ಜಿ ಮಾಡಿದ ಸಾಲಕ್ಕೆ ಮೊಮ್ಮಗಳಿಗೆ ಶಿಕ್ಷೆ

ಊರು ತೊರೆದರೂ ತಪ್ಪದ ಕಾಟ

ಪ್ರಜಾವಾಣಿ ವಾರ್ತೆ



ಕೊರಟಗೆರೆ ತಾಲ್ಲೂಕಿನ ಕುರಂಕೋಟೆ ಗ್ರಾಮದ ವಿನುತಾ ಎಂಬುವರ ಮನೆ ಗೋಡೆ ಮೇಲೆ ಬರೆದ ಬರಹ

ತೋವಿನಕೆರೆ (ತುಮಕೂರು): ಮೈಕ್ರೊ ಫೈನಾನ್ಸ್ ಸಿಬ್ಬಂದಿ ಕಿರುಕುಳಕ್ಕೆ ಬೇಸತ್ತು ಎರಡು ವರ್ಷಗಳ ಹಿಂದೆ ಕುರಂಕೋಟೆ ಗ್ರಾಮದ ಕುಟುಂಬವೊಂದು ಊರು ತೊರೆದರೂ ಸಿಬ್ಬಂದಿಯ ಕಾಟ ಮಾತ್ರ ಇನ್ನೂ ತಪ್ಪಿಲ್ಲ.

ಇಬ್ಬರು ಅಂಗವಿಕಲ ಮಕ್ಕಳನ್ನು ಕರೆದುಕೊಂಡು ವಿನುತಾ ಮಾರುತಿ ಎಂಬುವರು ಊರು ತೊರೆದಿದ್ದಾರೆ. ಅಜ್ಜಿ ಮಾಡಿದ ಸಾಲ ತೀರಿಸಲಾಗದೆ ವಿನುತಾ ಮನೆಗೆ ಬೀಗ ಹಾಕಿಕೊಂಡು ಊರು ತೊರೆದಿದ್ದರು.

ಮೈಕ್ರೊ ಫೈನಾನ್ಸ್ ಸಿಬ್ಬಂದಿ ಈಗ ವಿನುತಾ ಅವರ ಮನೆಯ ಗೋಡೆಗಳ ಮೇಲೆ ಕಪ್ಪು ಬಣ್ಣದಿಂದ 'ಈ ಸ್ವತ್ತು ಫೈವ್‌ಸ್ಟಾರ್ ಫೈನಾನ್ಸ್ ಸಂಸ್ಥೆಗೆ ಅಡಮಾನ ಇಡಲಾಗಿದೆ' ಎಂದು ಬರೆದಿದ್ದಾರೆ. ಈ ಹಿಂದೆಯೂ ಗೋಡೆ ಮೇಲೆ ಹೀಗೆ ಬರೆದಿದ್ದರು. ಆಗ ಬಣ್ಣ ಹೊಡೆಸಲಾಗಿತ್ತು.

'₹2.50 ಲಕ್ಷ ಸಾಲ ಪಡೆಯಲಾಗಿತ್ತು. ಅದಕ್ಕೆ ಪ್ರತಿಯಾಗಿ ಈಗಾಗಲೇ ₹4.70 ಲಕ್ಷ ಪಾವತಿಸಲಾಗಿದೆ. ಫೈನಾನ್ಸ್ ಸಿಬ್ಬಂದಿ ಈಗಲೂ ಪದೇ ಪದೇ ಕರೆ ಮಾಡಿ ಬಾಕಿ ಹಣ ಕಟ್ಟುವಂತೆ ಹಿಂಸೆ ನೀಡುತ್ತಿದ್ದಾರೆ. ಊರು ಬಿಟ್ಟ ಮೇಲೂ ಮಾನ ಹರಾಜು ಹಾಕುವ ಕೆಲಸ ಮಾಡುತ್ತಿದ್ದಾರೆ. ನೆಮ್ಮದಿಯಿಂದ ಇರಲು ಬಿಡುತ್ತಿಲ್ಲ' ಎಂದು ವಿನುತಾ ಬೇಸರ ವ್ಯಕ್ತಪಡಿಸಿದರು.

ಆತ್ಮಹತ್ಯೆಗೆ ಯತ್ನ

ಕೊರಟಗೆರೆ(ತುಮಕೂರು): ಮೈಕ್ರೊ ಫೈನಾನ್ಸ್ ಸಿಬ್ಬಂದಿ ಕಿರುಕುಳಕ್ಕೆ ಬೇಸತ್ತ ತಾಲ್ಲೂಕಿನ ಅಲ್ಲಾಳಸಂದ್ರ ಹನುಮಂತಪುರದ ಮಂಗಳಮ್ಮ(45) ಎಂಬುವರು ಬುಧವಾರ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಮೈಕ್ರೊ ಫೈನಾನ್ಸ್ ಸಿಬ್ಬಂದಿ ಎರಡು ದಿನಗಳಿಂದ ಮನೆ ಮುಂದೆ ಬಂದು ಗಲಾಟೆ ಮಾಡುತ್ತಿದ್ದರು. ಬುಧವಾರ ಗ್ರಾಮೀಣ ಕೂಟದ ಸಿಬ್ಬಂದಿ ಬಂದು ಕಂತಿನ ಹಣ ಕೇಳಿದ್ದಾರೆ. ಮಂಗಳಮ್ಮ 'ಇವತ್ತು ಹಣ ಇಲ್ಲ, ಕಟ್ಟಲು ಆಗಲ್ಲ' ಎಂದು ಹೇಳಿದ್ದಾರೆ. ಹಣ ಕೊಡುವ ತನಕ ಇಲ್ಲಿಂದ ಹೋಗಲ್ಲ ಎಂದು ಸಿಬ್ಬಂದಿ ಮನೆ ಮುಂಭಾಗ ಕುಳಿತಿದ್ದರು. ಇದರಿಂದ ಬೇಸತ್ತು ರಕ್ತದೊತ್ತಡದ ಮಾತ್ರೆಗಳನ್ನು ಸೇವಿಸಿದ್ದಾರೆ. ಕೂಡಲೇ ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರಿದಿದೆ.

ಹೋಟೆಲ್ ಆರಂಭಿಸುವ ಉದ್ದೇಶದಿಂದ ಒಂದು ವರ್ಷದ ಹಿಂದೆ ಮಂಗಳಮ್ಮ ಕುಟುಂಬ ಗ್ರಾಮೀಣ ಕೂಟದಲ್ಲಿ ₹2 ಲಕ್ಷ, ಎಲ್ ಆ್ಯಂಡ್ ಟಿಯಲ್ಲಿ ₹70 ಸಾವಿರ, ಆಶೀರ್ವಾದ ಸಂಸ್ಥೆಯಲ್ಲಿ ₹80 ಸಾವಿರ ಸಾಲ ಪಡೆದಿತ್ತು. ಹೋಟೆಲ್‌ನಿಂದ ನಷ್ಟ ಅನುಭವಿಸಿದ ಬಳಿಕ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಈ ಮಧ್ಯೆ ಸಾಲ ಮರುಪಾವತಿಸುವಂತೆ ಮೈಕ್ರೊ ಫೈನಾನ್ಸ್ ಸಿಬ್ಬಂದಿಯಿಂದ ಒತ್ತಡ ಹೆಚ್ಚಾಗಿದೆ. ಪತ್ನಿ ಬಸವರಾಜು, ಪುತ್ರ ಪುನೀತ್ ಸಾಲ ತೀರಿಸಲು ಪರದಾಡುತ್ತಿದ್ದಾರೆ. ಇಡೀ ಕುಟುಂಬ ದಿನಗೂಲಿ ನಂಬಿ ಜೀವನ ಸಾಗಿಸುತ್ತಿದೆ. ಗ್ರಾಮೀಣ ಕೂಟದಲ್ಲಿ ಪಡೆದ ಸಾಲಕ್ಕೆ 40 ಕಂತು ಕಟ್ಟಿದ್ದರು. ಇನ್ನೂ 42 ಕಂತು ಹಣ ಕಟ್ಟುವುದು ಬಾಕಿ ಇತ್ತು ಎಂದು ಸಂಬಂಧಿಕರು ತಿಳಿಸಿದ್ದಾರೆ.

ವಿಷ ಸೇವನೆ; ಮಹಿಳೆ ಸಾವು


ಪ್ರೇಮಾ

ಹಲಗೂರು (ಮಂಡ್ಯ ಜಿಲ್ಲೆ): ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿ, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹಲಗೂರು ಸಮೀಪದ ಕೊನ್ನಾಪುರದ ಅಂದಾನಯ್ಯ ಅವರ ಪತ್ನಿ ಪ್ರೇಮಾ (59) ಬುಧವಾರ ಮೃತಪಟ್ಟರು.

ಮಳವಳ್ಳಿ ಟಿಎಪಿಸಿಎಂಎಸ್‌ನಲ್ಲಿ ದಿನಗೂಲಿ ನೌಕರರಾಗಿದ್ದ ಅವರು, ಮನೆ ನಿರ್ಮಿಸಲು ಮೈಕ್ರೊ ಫೈನಾನ್ಸ್ ಕಂಪನಿಯೊಂದರಲ್ಲಿ ₹6 ಲಕ್ಷ ಸಾಲ ಪಡೆದಿದ್ದರು. ಮರುಪಾವತಿ ವಿಳಂಬದ ಕಾರಣ ನ್ಯಾಯಾಲಯದ ಆದೇಶದ ಮೇರೆಗೆ ವಾರದ ಹಿಂದೆ ಕಂಪನಿ ಸಿಬ್ಬಂದಿ, ಪೊಲೀಸ್ ಭದ್ರತೆಯಲ್ಲಿ ಮನೆಯನ್ನು ಮುಟ್ಟುಗೋಲು ಹಾಕಿಕೊಂಡಿದ್ದರು.

ಸಂಬಂಧಿಕರ ಮನೆಯಲ್ಲಿ ಉಳಿದುಕೊಂಡಿದ್ದ ಪ್ರೇಮಾ ಮಂಗಳವಾರ ವಿಷ ಸೇವಿಸಿದ್ದರು. ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ವರ ಬಂಧನ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ಮಲ್ಕುಂಡಿ ಗ್ರಾಮದ ಕೃಷ್ಣಮೂರ್ತಿ ಅವರ ಆತ್ಮಹತ್ಯೆ ಪ್ರಕರಣ ಸಂಬಂಧ ಹುಲ್ಲಹಳ್ಳಿ ಠಾಣೆ ಪೊಲೀಸರು ಮೈಕ್ರೊ ಫೈನಾನ್ಸ್ ಕಂಪನಿಗಳ ನಾಲ್ವರು ಸಿಬ್ಬಂದಿಯನ್ನು ಮಂಗಳವಾರ ಬಂಧಿಸಿದ್ದಾರೆ.

ಬಿಎಸ್‌ಎಸ್ ಫೈನಾನ್ಸ್‌ನ ಕಲೆಕ್ಷನ್ ಆಫೀಸರ್ ಆಕಾಶ್, ಗ್ರಾಮೀಣ ಕೂಟದ ಫೈನಾನ್ಸ್‌ನ ಕಲೆಕ್ಷನ್ ಆಫೀಸರ್ ಸಿದ್ದರಾಜು, ಉಜ್ಜೀವನ್ ಫೈನಾನ್ಸ್‌ನ ಕಸ್ಟಮರ್ ರಿಲೇಷನ್ ಆಫೀಸರ್ ಲೋಕೇಶ್ ಹಾಗೂ ಐಡಿಎಫ್‌ಸಿ ಫೈನಾನ್ಸ್‌ನ ಗ್ರೂಪ್ ರಿಲೇಷನ್ ಮ್ಯಾನೇಜರ್ ಸಿದ್ದರಾಜು ಬಂಧಿತರು.

ಕೃಷ್ಣಮೂರ್ತಿ ಅವರು ಜ.27ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. 'ಮೈಕ್ರೊ ಫೈನಾನ್ಸ್ ಕಂಪನಿಗಳ ಕಿರುಕುಳದಿಂದಲೇ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಮೃತರ ಪತ್ನಿ ಲತಾ ಹುಲ್ಲಹಳ್ಳಿ ಠಾಣೆಯಲ್ಲಿ ದೂರು ದಾಖಲಿಸಿದ್ದರು.


ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಸದಸ್ಯರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಮೈಕ್ರೊ ಫೈನಾನ್ಸ್: ಕಡಿವಾಣ ಹಾಕಿ

ನಬಾರ್ಡ್ ನೀತಿ ಖಂಡಿಸಿ ರಾಜ್ಯ ರೈತಸಂಘದಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರಿಗೆ ನೀಡುವ ಸಾಲದ ಪ್ರಮಾಣ ಕಡಿತ ಮಾಡಿರುವ ನಬಾರ್ಡ್ ನೀತಿ ಖಂಡಿಸಿ ಹಾಗೂ ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿ ತಡೆಗಟ್ಟುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ರೈತರ ಸಂಘದ ಸದಸ್ಯರು, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ರೈತ ಸಂಘದ ಸದಸ್ಯರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.

'ರೈತರಿಗೆ ಮಾರಕವಾಗಿರುವ ನೂತನ ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ತಕ್ಷಣ ಹಿಂಪಡೆಯಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಮೈಕ್ರೊ ಫೈನ್ಸಾನ್ ಕಂಪನಿಗಳ ಸಿಬ್ಬಂದಿ ರೈತ ಮಹಿಳೆಯರಿಗೆ ನೀಡುತ್ತಿರುವ ಕಿರುಕುಳಕ್ಕೆ ಕಡಿವಾಣ ಹಾಕಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಕೃಷಿ ಕ್ಷೇತ್ರವನ್ನು ಸದೃಢಗೊಳಿಸುವ ಉದ್ದೇಶದಿಂದ ಆರ್ಥಿಕ ನೆರವು ನೀಡಲು ನಬಾರ್ಡ್ ಸ್ಥಾಪನೆ ಮಾಡಲಾಗಿದೆ. ಆದರೆ, ಕೃಷಿಗೆ ನೀಡುತ್ತಿದ್ದ ಅಲ್ಪಾವಧಿ ಸಾಲದ ಮೊತ್ತವನ್ನು ಕಡಿತಗೊಳಿಸಲಾಗಿದೆ. ಇದರಿಂದ, ರೈತರಿಗೆ ಆರ್ಥಿಕ ತೊಂದರೆ ಆಗುತ್ತಿದೆ. ಕೂಡಲೇ ಕೇಂದ್ರ ಸರ್ಕಾರ ನಬಾರ್ಡ್‌ಗೆ ನೀಡುವ ಅನುದಾನವನ್ನು ಹೆಚ್ಚಿಸಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಹಾವಳಿ ಮತ್ತು ಕಿರುಕುಳದಿಂದ ಗ್ರಾಮೀಣ ಪ್ರದೇಶದ ಮಹಿಳೆಯರು, ದುಡಿಯುವ ವರ್ಗದ ಜನ ಸಂಕಷ್ಟಕ್ಕೀಡಾಗಿದ್ದಾರೆ. ಮೈಕ್ರೊ ಫೈನಾನ್ಸ್ ಸಂಸ್ಥೆಗಳು ನಡೆಸುತ್ತಿರುವ ದೌರ್ಜನ್ಯಕ್ಕೆ ಕಡಿವಾಣ ಹಾಕಬೇಕು' ಎಂದರು.

ಸ್ಥಳಕ್ಕೆ ಬಂದ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಪ್ರತಿಭಟನಕಾರರಿಂದ ಮನವಿ ಪತ್ರ ಸ್ವೀಕರಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ, ರೈತ ಸಂಘದ ಗೌರವ ಅಧ್ಯಕ್ಷ ಚಾಮರಸ ಮಾಲಿಪಾಟೀಲ, ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ, ಎ.ಎಂ. ಮಹೇಶ್‌ಪ್ರಭು, ಪ್ರಧಾನ ಕಾರ್ಯದರ್ಶಿ ಎನ್. ವಸಂತಕುಮಾರ್, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಉಪಸ್ಥಿತರಿದ್ದರು.

ಪ್ರತಿಭಟನೆಯಲ್ಲಿ ಕೈಗೊಂಡ ನಿರ್ಣಯಗಳು

- ರೈತರಿಗೆ ಸಾಲ ಮಂಜೂರಾತಿಗೆ ಸಿಬಿಲ್ ಅಂಕಗಳನ್ನು ಮಾನದಂಡವಾಗಿ ಪರಿಗಣಿಸುವುದನ್ನು ಕೈಬಿಡಬೇಕು.
- ಕೇಂದ್ರ ಸಚಿವರು ಹಾಗೂ ಸಂಸದರು ನಬಾರ್ಡ್ ಮೂಲಕ ನೀಡುತ್ತಿದ್ದ ಸಾಲದ ಮೊತ್ತವನ್ನು ಕಡಿತಗೊಳಿಸಿರುವ ವಿರುದ್ಧ ಸಂಸತ್ತಿನಲ್ಲಿ ಧ್ವನಿ ಎತ್ತಬೇಕು.
- ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿ, ಕಿರುಕುಳ ನಿಯಂತ್ರಿಸಲು ಕಾನೂನು ರೂಪಿಸಿದರೆ ಸಾಲದು. ರಾಜ್ಯ ಸರ್ಕಾರ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಸಾಲ ವಸೂಲಿ ಹೆಸರಿನಲ್ಲಿ ನೀಡುವ ಕಿರುಕುಳ ತಪ್ಪಿಸಲು ಎಲ್ಲ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಹಾಯವಾಣಿ ಪ್ರಾರಂಭಿಸಬೇಕು.
- ಋಣಮುಕ್ತ ಕಾಯ್ದೆಗೆ ಜೀವತುಂಬಿ ಕೇರಳ ಮಾದರಿಯಲ್ಲಿ ಜನಸ್ನೇಹಿ ಸರಳ ಸಾಲದ ನೀತಿಯನ್ನು ರೂಪಿಸಬೇಕು.

ರಾಜ್ಯದಲ್ಲಿ ಮೈಕ್ರೊ ಫೈನಾನ್ಸ್ ಕಂಪನಿ ಪ್ರಕರಣಗಳು ಹಾಗೂ ಅದರಿಂದ ಸಂಭವಿಸುತ್ತಿರುವ ಸಾವುಗಳು ಸರ್ಕಾರಿ ಕಾರ್ಯಕ್ರಮಗಳ ವೈಫಲ್ಯಕ್ಕೆ ಸಾಕ್ಷಿಯಾಗಿವೆ

ಎಚ್‌.ಡಿ. ಕುಮಾರಸ್ವಾಮಿ
ಕೇಂದ್ರ ಸಚಿವ

ಅಮೃತ ಮಹಲ್ ತಳಿಗೆ ದಾಖಲೆ ಬೆಲೆ

₹3.76 ಲಕ್ಷಕ್ಕೆ ಮಾರಾಟವಾದ ಕೆಂಪಲಕ್ಕಿ–ಕಾಟಿ ಜೋಡಿ ಹೋರಿ ಕರುಗಳು


ಚಿಕ್ಕಮಗಳೂರು ಜಿಲ್ಲೆಯ ಬೀರೂರಿನಲ್ಲಿ ನಡೆದ ಅಮೃತ ಮಹಲ್ ಹೋರಿ ಕರುಗಳ ಹರಾಜು ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಬೆಲೆಗೆ ಹರಾಜಾದ ಕರುಗಳು

ಪ್ರಜಾವಾಣಿ ವಾರ್ತೆ


ಚಿಕ್ಕಮಗಳೂರು: ಅಮೃತ ಮಹಲ್ ತಳಿಯ ಕೆಂಪಲಕ್ಕಿ–ಕಾಟಿ ಜೋಡಿ ಹೋರಿ ಕರುಗಳು ₹3.76 ಲಕ್ಷಕ್ಕೆ ಹರಾಜಾದವು.

ಅಮೃತ ಮಹಲ್ ಹೋರಿ ಕರುಗಳ ಹರಾಜು ಪ್ರಕ್ರಿಯೆ ಬೀರೂರಿನ ಅಮೃತ ಮಹಲ್ ತಳಿ ಸಂವರ್ಧನಾ ಕೇಂದ್ರದಲ್ಲಿ ಬುಧವಾರ ನಡೆಯಿತು. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ರೈತರು ಜಮಾಯಿಸಿದ್ದರು.

ಮೊದಲಿಗೆ ಹರಾಜಿಗೆ ಬರುವ ಪೂಜಾ ಕರುಗಳಿಗೆ ಇನ್ನಿಲ್ಲದ ಬೇಡಿಕೆ ಇರುತ್ತದೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಶಿಗ್ಗೇಹಟ್ಟಿ ಗ್ರಾಮದ ಶಂಕರಪ್ಪ ಅವರು ₹3,76,500 ತನಕ ಹರಾಜು ಕೂಗುವ ಮೂಲಕ ಹೋರಿ ಕರುಗಳನ್ನು ತಮ್ಮದಾಗಿಸಿಕೊಂಡರು.

ಇದೇ ಮೊದಲ ಬಾರಿಗೆ ಅಮೃತ ಮಹಲ್ ಹೋರಿ ಕರುಗಳು ಇಷ್ಟು ದೊಡ್ಡ ಮೊತ್ತಕ್ಕೆ ಹರಾಜಾಗುವ ಮೂಲಕ ದಾಖಲೆ ನಿರ್ಮಿಸಿದವು. ಒಟ್ಟು 172 ಹೋರಿ ಕರುಗಳು(86 ಜೋಡಿ) ಮತ್ತು 7 ಬೀಜದ ಹೋರಿಗಳ ಹರಾಜಿನ ಮೂಲಕ ₹1.11 ಕೋಟಿ ಮೊತ್ತ ಸಂಗ್ರಹವಾಗಿದ್ದು, ಇದು ಕೂಡ ದಾಖಲೆ ಎಂದು ಪಶುಪಾಲನ ಇಲಾಖೆಯ ಅಧಿಕಾರಿಗಳು ಹೇಳಿದರು.

ಕಾರಿನಲ್ಲಿ ₹1.14 ಕೋಟಿ ಪತ್ತೆ



ಕಾರವಾರ: ಅಂಕೋಲಾ ತಾಲ್ಲೂಕಿನ ರಾಮನಗುಳಿ ಸಮೀಪ ರಾಷ್ಟ್ರೀಯ ಹೆದ್ದಾರಿ-63 ಪಕ್ಕದ ನಿರ್ಜನ ಸ್ಥಳದಲ್ಲಿ ವಾರಸುದಾರರು ಇಲ್ಲದ ಕಾರಿನಲ್ಲಿ ₹1.14 ಕೋಟಿ ನಗದು ಪತ್ತೆಯಾಗಿದೆ.

'ಮಂಗಳವಾರ ನಸುಕಿನಿಂದ ಕಾರು ನಿಂತಿರುವ ಬಗ್ಗೆ ಗ್ರಾಮಸ್ಥರು ನೀಡಿದ ಮಾಹಿತಿ ಆಧರಿಸಿ ಪರಿಶೀಲಿಸಿದಾಗ, ಕಾರಿನ ನೋಂದಣಿ ಸಂಖ್ಯೆ ನಕಲಿ ಎಂಬುದು ಗೊತ್ತಾಯಿತು. ಬೇರೊಂದು ಕಾರಿನ ನಂಬರ್ ಪ್ಲೇಟ್ ಅಳವಡಿಸಲಾಗಿದೆ. ಇನ್ನಷ್ಟು ಪರಿಶೀಲನೆ ನಡೆಸಿದಾಗ, ₹ 1.14 ಕೋಟಿ ಸಿಕ್ಕಿತು. ಹಣ ಸಹಿತ ಕಾರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಅಂಕೋಲಾ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಕಾರಿನ ಕಿಟಕಿ ಗಾಜು ಒಡೆದಿದ್ದವು. ಸೀಟುಗಳು ಹರಿದಿದ್ದವು. ಹಿಂಬದಿಯ ಸೀಟಿನಡಿ ಕಬ್ಬಿಣದ ಪೆಟ್ಟಿಗೆ ಅಳವಡಿಸಿದ್ದು, ಅದರಲ್ಲಿ ₹500, ₹200, ₹100 ಮುಖಬೆಲೆಯ ನೋಟುಗಳನ್ನು ಇರಿಸಲಾಗಿತ್ತು. ಕಾರನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಮಂಗಳೂರು ಮೂಲದ ಉದ್ಯಮಿಯೊಬ್ಬರ ಹೆಸರಿನಲ್ಲಿ ನೋಂದಣಿಯಾದ ವಾಹನ ಎಂಬುದು ಗೊತ್ತಾಗಿದೆ. ಹವಾಲಾ ದಂಧೆಯಲ್ಲಿ ತೊಡಗಿದವರು ಹಣ ಸಾಗಿಸುತ್ತಿರುವ ಶಂಕೆ ಇದೆ. ತನಿಖೆ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದ್ದಾರೆ.

ಸಾಲ ಬಾಧೆ: ಯುವ ರೈತ ಆತ್ಮಹತ್ಯೆ


ಸಂಜಯ್

ಮಳವಳ್ಳಿ(ಮಂಡ್ಯ): ತಾಲ್ಲೂಕಿನ ಕಿರುಗಾವಲು ಹೋಬಳಿಯ ದುಗ್ಗನಹಳ್ಳಿಯಲ್ಲಿ ಸಾಲದ ಬಾಧೆಯಿಂದ ಯುವ ರೈತ ಸಂಜಯ್ (34) ನೇಣು ಹಾಕಿಕೊಂಡು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಂದೆ ವೆಂಕಟಶೆಟ್ಟಿ ಹೆಸರಿನಲ್ಲಿದ್ದ 30 ಗುಂಟೆ ಜಮೀನಿನಲ್ಲಿ ಅವರು ಕೃಷಿ ಮಾಡುತ್ತಿದ್ದರು.

'ಎರಡು ವರ್ಷಗಳ ಹಿಂದೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ₹50 ಸಾವಿರ, ಪತ್ನಿ ಸೌಮ್ಯಾ ಹೆಸರಿನಲ್ಲಿ ಮೈಕ್ರೋ ಫೈನಾನ್ಸ್‌ನಲ್ಲಿ ₹50 ಸಾವಿರ ಸಾಲ ಪಡೆದು ಕೃಷಿಗೆ ಬಳಸಿದ್ದ. ಆರು ತಿಂಗಳ ಹಿಂದೆ 2 ಕೊಳವೆಬಾವಿ ಕೊರೆಯಿಸಿದರೂ ನೀರು ದೊರಕದೆ ನೊಂದಿದ್ದ' ಎಂದು ಅವರ ತಂದೆ ವೆಂಕಟಶೆಟ್ಟಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪ್ರಕರಣ ದಾಖಲಾಗಿದೆ.

ಸಾಲ: ಕಾರ್ಮಿಕ ಆತ್ಮಹತ್ಯೆ

ಆಲೂರು (ಹಾಸನ ಜಿಲ್ಲೆ): ಸಾಲದ ಚಿಂತೆಯಿಂದ ತಾಲ್ಲೂಕಿನ ತಿಮ್ಮನಹಳ್ಳಿಯ ಕಾರ್ಮಿಕ ಹೇಮಂತ್ (52) ಬುಧವಾರ ಮನೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡರು.

ಪತ್ನಿಯ ಹೆಸರಿನಲ್ಲಿ 15 ಗುಂಟೆ ಜಮೀನಿದ್ದು, ಹೆಚ್ಚಿನ ಆದಾಯ ದೊರಕದೆ ಕೂಲಿಗೆ ಹೋಗುತ್ತಿದ್ದರು. ಪತ್ನಿ 2 ಸಂಘಗಳಲ್ಲಿ ಹಾಗೂ ಕೆಲವರಿಂದ ಕೈಸಾಲ ಪಡೆದಿದ್ದರು. ಕೂಲಿಯೂ ಸಿಗದೇ ಸಾಲ ತೀರಿಸುವುದು ಹೇಗೆಂಬ ಕೊರಗಿನಲ್ಲಿ ಬೆಳಿಗ್ಗೆ ವಿಷ ಸೇವಿಸಿದ್ದರು. ನಂತರ ಅವರನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. 'ಸಾಲ ತೀರಿಸಲಾಗದ ಕೊರಗಿನಿಂದ ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪುತ್ರ ಮಂಜುನಾಥ್ ಆಲೂರು ಠಾಣೆಗೆ ದೂರು ನೀಡಿದ್ದಾರೆ.

'ಜೈಲಿಗೆ ಕಳುಹಿಸಿದರೆ ಸರಿ ಹೋಗುತ್ತೆ...'

ಒಂದನೇ ಪುಟದಿಂದ...

ಆಗ ನ್ಯಾಯಮೂರ್ತಿ ಸೋಮಶೇಖರ್, 'ಕೆ. ವಾಸುದೇವನ್ v/s ಟಿ.ಆರ್.ಧನಂಜಯ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಂತೆ ನ್ಯಾಯಾಂಗ ನಿಂದನೆ ಮೊಕದ್ದಮೆಗಳಲ್ಲಿ ಆಡಳಿತಾಂಗಕ್ಕೆ ಕಿಂಚಿತ್ತೂ ಕರುಣೆ ತೋರಬಾರದು ಎಂದಿದೆ. ನಿಮ್ಮ ವಿರುದ್ಧ ಈಗಲೇ ನ್ಯಾಯಾಂಗ ನಿಂದನೆಯ ದೋಷಾರೋಪ ನಿಗದಿಗೊಳಿಸುವ ಪ್ರಕ್ರಿಯೆಗೆ ತಿದಿ ಒತ್ತುತ್ತೇನೆ, ಎಚ್ಚರವಿರಲಿ. ನೀವು ನೆಪ ಹೇಳಿ ತಪ್ಪಿಸಿಕೊಳ್ಳಲು ಛಾನ್ಸೇ ಇಲ್ಲ. ವ್ಯವಸ್ಥೆ ನೋಡಿ ಜನ ನಗ್ತಾ ಇದ್ದಾರೆ ಗೊತ್ತಾ? ನೀವೆಲ್ಲಾ ಕೋರ್ಟ್ ಆದೇಶಗಳನ್ನು ಪಾಲನೆ ಮಾಡುವತನಕ ನಿಮ್ಮ ಸಂಬಳ ಕಟ್ ಮಾಡಿದರೆ ಗೊತ್ತಾಗುತ್ತದೆ' ಎಂದು ಹರಿಹಾಯ್ದರು.

ಮಧ್ಯೆ ಮಧ್ಯೆ ಕಠಾರಿಯಾ ಅವರು ಶಾಂತಚಿತ್ತರಾಗಿ ನ್ಯಾಯಪೀಠಕ್ಕೆ ತಮ್ಮ ವಿವರಣೆ ನೀಡಲು ಮುಂದಾದಾಗಲೆಲ್ಲಾ ನ್ಯಾ.ಸೋಮಶೇಖರ್, 'ಬ್ಯುರೋಕ್ರಾಟ್‌ಗಳಿಗೆ ನ್ಯಾಯಾಂಗದ ಭಾಷೆಯೇ ಅರ್ಥವಾಗುತ್ತಿಲ್ಲ. ನೋಡಿ ನೀವು ಹೇಳಿದ್ದನ್ನೆಲ್ಲಾ ನಾನು ಬರೆದುಕೊಳ್ತೇನೆ. ಸತ್ಯ ಹೇಳಿದ್ರೂ ಸರಿ, ಸುಳ್ಳು ಹೇಳಿದ್ರೂ ಸರಿ. ನಾನು ನಿಮ್ಮೆಲ್ಲರ ನಾಡಿಮಿಡಿತ ಅರ್ಥ ಮಾಡಿಕೊಳ್ಳಬಲ್ಲೆ. ಈ ಬೆಂಚ್ ಅಷ್ಟು ಸುಲಭದ್ದಲ್ಲ. ನೆನಪಿರಲಿ. ಅವಕಾಶ ಸಿಕ್ರೆ ನಿಮ್ಮನ್ನೆಲ್ಲಾ ಫಿಕ್ಸ್ ಮಾಡಿಬಿಡ್ತೀನಿ' ಎಂದು ಅಬ್ಬರಿಸಿದರು.

ಒಂದು ಹಂತದಲ್ಲಿ ಕಠಾರಿಯಾ, 'ಸರ್, ವ್ಯವಸ್ಥೆ ತುಂಬಾ ಕೆಟ್ಟದಾಗಿದೆ. ಆದರೂ, ಸರ್ಕಾರ ತನ್ನೆಲ್ಲಾ ಪ್ರಯತ್ನ ಮಾಡುತ್ತಿದೆ. ಕಳೆದ ಒಂದು ವರ್ಷದಲ್ಲಿ ನಾವು 14 ಎಕರೆಗೂ ಹೆಚ್ಚು ಅಕ್ರಮಿತ ಸರ್ಕಾರಿ ಭೂಮಿಯನ್ನು ವಶಕ್ಕೆ ಪಡೆದಿದ್ದೇವೆ. ಸಮಗ್ರ ಮತ್ತು ನಿಷ್ಪಕ್ಷಪಾತ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಎಸ್‌ಐಟಿ ರಚನೆ ಮಾಡಿದ್ದೇವೆ. ಭ್ರಷ್ಟಾಚಾರ ನಿರ್ಮೂಲನೆಗೆ ಶ್ರಮಿಸುತ್ತಿದ್ದೇವೆ' ಎಂದರು.

ಇದಕ್ಕೆ ದನಿಗೂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು, 'ಹೌದು ಸ್ವಾಮಿ. ಇವರು ಕಂದಾಯ ಇಲಾಖೆಯ ಸುಧಾರಣೆಗೆಂದೇ ಇ-ಖಾತಾ ವ್ಯವಸ್ಥೆ ರೂಪಿಸಿದ್ದಾರೆ' ಎಂದರು. ಈ ಮಾತಿಗೆ ಕನಲಿ ಕೆಂಡವಾದ ನ್ಯಾ.ಸೋಮಶೇಖರ್, 'ಇ-ಖಾತಾ ಎಂಬುದೇ ಭ್ರಷ್ಟಾಚಾರದ ಆಗರ. ನಮ್ಮಲ್ಲಿ ಮಾನಸಿಕ ಭ್ರಷ್ಟಾಚಾರ, ಪೂರ್ವಗ್ರಹಪೀಡಿತ ಭಾವನೆಗಳ ಭ್ರಷ್ಟಾಚಾರ, ಹಣದ ಭ್ರಷ್ಟಾಚಾರ... ಎಂಬೆಲ್ಲಾ ಶ್ರೇಣೀಕೃತ ವ್ಯವಸ್ಥೆಯಿದೆ. ಮೊದಲು ಪೂರ್ವಗ್ರಹಪೀಡಿತ ಭಾವನೆಗಳ ಭ್ರಷ್ಟ ಪರಿಧಿಯಿಂದ ಹೊರಬನ್ನಿ' ಎಂದರು.

'ಹೈಕೋರ್ಟ್ ಆದೇಶದ ಅನುಪಾಲನೆಗೆ 3 ತಿಂಗಳಾದರೂ ಕಾಲಾವಕಾಶ ನೀಡಬೇಕು' ಎಂದು ಕಿರಣ್ ಕೋರಿದರು. ಆದರೆ, ನ್ಯಾ.ಸೋಮಶೇಖರ್ ರೋಣ ಮನವಿಯನ್ನು ತಳ್ಳಿ ಹಾಕಿದರು.

ವಿಚಾರಣೆಯನ್ನು ಫೆಬ್ರುವರಿ 21ಕ್ಕೆ ಮುಂದೂಡಲಾಗಿದೆ.

'ಸಿಂಡಿಕೇಟ್‌ನಲ್ಲಿ ಚರ್ಚಿಸಿ ಕ್ರಮ'


ತ್ಯಾಗರಾಜ

ಬೆಳಗಾವಿ: 'ಇಲ್ಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ (ಆರ್‌ಸಿಯು) ಫೆಬ್ರುವರಿ 7ರಂದು ನಡೆಯಲಿರುವ ಸಿಂಡಿಕೇಟ್ ಸಮಿತಿ ಸಭೆಯಲ್ಲಿ ಪ್ರಶ್ನೆಪತ್ರಿಕೆಗಳಲ್ಲಿನ ದೋಷದ ಕುರಿತಾಗಿ ಚರ್ಚಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರೊ. ಸಿ.ಎಂ.ತ್ಯಾಗರಾಜ ಹೇಳಿದರು.

'ಬಿ.ಎ ಪ್ರಥಮ ಮತ್ತು ಐದನೇ ಸೆಮಿಸ್ಟರ್‌ನ ಎರಡು ವಿಷಯಗಳ ಪ್ರಶ್ನೆಪತ್ರಿಕೆಗಳಲ್ಲಿ ಆಗಿರುವ ದೋಷದ ಕುರಿತು ತನಿಖೆ ನಡೆಸುವಂತೆ ಮೌಲ್ಯಮಾಪನ ಕುಲಸಚಿವರಿಗೆ ಸೂಚನೆ ಕೊಟ್ಟಿದ್ದೇನೆ. ಇನ್ಮುಂದೆ ಪ್ರತಿ ವಿಷಯದ ಪ್ರಶ್ನೆ ಪತ್ರಿಕೆಯನ್ನು ದೋಷ ರಹಿತವಾಗಿ ಸಿದ್ಧಪಡಿಸಲು ಕ್ರಮವಹಿಸಲಾಗುವುದು. ಪರೀಕ್ಷಾ ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸುವವರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು' ಎಂದು ಅವರು ತಿಳಿಸಿದರು.

'ಆರ್‌ಸಿಯು: ಪ್ರಶ್ನೆಪತ್ರಿಕೆಗಳಲ್ಲೇ ಹಲವು ದೋಷ' ಎಂಬ ವಿಶೇಷ ವರದಿ ಜನವರಿ 28ರ 'ಪ್ರಜಾವಾಣಿ' ಸಂಚಿಕೆಯಲ್ಲಿ ಪ್ರಕಟವಾಗಿತ್ತು.

ಅಗತ್ಯ ಔಷಧ ಖರೀದಿ ಆರಂಭ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಹುಬ್ಬಳ್ಳಿ: ರಾಜ್ಯ ಔಷಧ ಉಗ್ರಾಣದಲ್ಲಿ ಖಾಲಿಯಾಗಿರುವ ಜ್ವರ ನಿಯಂತ್ರಿಸುವ 'ಪ್ಯಾರಾಸಿಟಮೋಲ್' ಮಾತ್ರೆ ಹಾಗೂ 'ಐ.ವಿ. ದ್ರಾವಣ' ಖರೀದಿಗೆ ಸರ್ಕಾರ ಆದೇಶಿಸಿದ್ದು, ಉಗ್ರಾಣಗಳಿಗೆ ಪೂರೈಕೆ ಮಾಡುವ ಪ್ರಕ್ರಿಯೆ ಆರಂಭವಾಗಿದೆ.

'ಪ್ಯಾರಾಸಿಟಮೋಲ್ 500 ಎಂಜಿ ಮಾತ್ರೆ ಉಗ್ರಾಣಗಳಿಗೆ ಪೂರೈಸುವ ಪ್ರಕ್ರಿಯೆ ನಡೆದಿದೆ. ಅಗತ್ಯ ಔಷಧಗಳು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇರುವ ಜಿಲ್ಲಾ ಉಗ್ರಾಣಗಳಿಂದ, ಕೊರತೆಯಿರುವ ಉಗ್ರಾಣಗಳಿಗೆ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. ವೈದ್ಯರು ಔಷಧಗಳನ್ನು ಹೊರಗಡೆಯಿಂದ ಬರೆದುಕೊಡುವುದನ್ನು ನಿಯಂತ್ರಿಸಲು, ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವ ಅನುದಾನ ಬಳಸಿಕೊಂಡು ಔಷಧ ಖರೀದಿಸಲು ಸೂಚಿಸಲಾಗಿದೆ' ಎಂದು ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಕನಗವಲ್ಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


'ರಾಜ್ಯದ ವಿವಿಧೆಡೆ ಇರುವ ಉಗ್ರಾಣಗಳಲ್ಲಿ 4.24 ಲಕ್ಷ ವಿವಿಧ ಬಗೆಯ ಔಷಧಗಳು ಲಭ್ಯವಿದೆ. ಧಾರವಾಡ ಜಿಲ್ಲೆಯಲ್ಲಿ ಇರುವ ಔಷಧಗಳ ಕೊರತೆ ನಿವಾರಿಸಲು, ಔಷಧಗಳು ಲಭ್ಯವಿರುವ ಉಗ್ರಾಣಗಳಿಂದ ಅಂತರ ವರ್ಗಾವಣೆ ಮೂಲಕ ಪಡೆಯಲು ತಿಳಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಐ.ವಿ. ದ್ರಾವಣ ಖರೀದಿ ಆದೇಶ ಪೂರ್ಣಗೊಳಿಸಲಾಗಿದ್ದು, ಔಷಧ ಉಗ್ರಾಣಗಳಿಗೆ ಪೂರೈಸಲಾಗುತ್ತಿದೆ. ಹೆಚ್ಚುವರಿ ಸಂಗ್ರಹಕ್ಕಾಗಿ ಹೊಸ ಟೆಂಡರ್ ಕರೆಯಲಾಗಿದೆ. ಬೇಡಿಕೆ ಮೇರೆಗೆ ಅಗತ್ಯ ಔಷಧಗಳನ್ನು ಆರೋಗ್ಯ ಸಂಸ್ಥೆಗಳಿಗೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದ್ದಾರೆ.

'ಉಗ್ರಾಣದಲ್ಲೇ ಔಷಧ ಅಲಭ್ಯ' ಎಂಬ ವಿಶೇಷ ವರದಿ ಜನವರಿ 29ರ 'ಪ್ರಜಾವಾಣಿ' ಸಂಚಿಕೆಯಲ್ಲಿ ಪ್ರಕಟ ಆಗಿತ್ತು.

ಆರೈಕೆ ಮತ್ತು ಪುನರ್ವಸತಿಯ ಪ್ರತೀಕ

ಆನಂದಾಸ್ ಸೇವಾ ಸದನ ಟ್ರಸ್ಟ್


ಡಾ. ಸಿ.ಎಂ. ರಾವ್ ಅವರು 'ಅತ್ಯುತ್ತಮ ಪ್ಯಾಲಿಯೇಟಿವ್ ಕೇರ್ ಮತ್ತು ಜೀವನಾಂತ್ಯ ಆರೈಕಾ ಸೇವೆ'ಗಳಿಗೆ 2024ರ ಅಂತರರಾಷ್ಟ್ರೀಯ ಐಕಾನ್ ಪ್ರಶಸ್ತಿಯನ್ನು ಗ್ರಾಹಕ ಹಕ್ಕುಗಳ ಜಾಗತಿಕ ಚೇಂಬರ್, ಸಂಸ್ಥಾಪಕ ಅಧ್ಯಕ್ಷ ಜಾರ್ಜ್ ಕೊಚುಪುರಕಲ್ ಹಾಗೂ ಕೇಂದ್ರ ಸಚಿವ ಆಲ್ಫೋನ್ಸ್ ಜೋಸೆಫ್ ಕಣ್ಣಂತನಮ್ ಅವರಿಂದ ಸ್ವೀಕರಿಸಿದರು. ಎಲ್‌ಎಕೆಟಿಸಿಟಿ ಕಮೀಷನರ್ ಡಾ. ಸೆನೊರಿಟಾ ಐಸಾಕ್ (ಎಡ), ಸಿಕ್ಕಿಂ ಐಸಿಎಫ್‌ಎಐ ವಿವಿ ಉಪಕುಲಪತಿ ಡಾ. ಜಗನ್ನಾಥ್ ಪಟ್ನಾಯಕ್ (ಬಲ) ಉಪಸ್ಥಿತರಿದ್ದರು.

ಬೆಂಗಳೂರು ಮಹಾನಗರದ 'ಆನಂದಾಸ್ ಸೇವಾ ಸದನ ಟ್ರಸ್ಟ್', ಡಾ. ಸಿ.ಎಂ. ರಾವ್ ಮತ್ತು ಅವರ ಗೆಳತಿ ಶ್ರೀಮತಿ ಉಮಾ ಸಿ.ಎಸ್. ಅವರ ನೇತೃತ್ವದಲ್ಲಿ ನಡೆಯುತ್ತಿರುವ ಒಂದು ದತ್ತಿ ಸಂಸ್ಥೆ. 2019ರಲ್ಲಿ ಸ್ಥಾಪಿತವಾದ ಟ್ರಸ್ಟ್ ರಾಜರಾಜೇಶ್ವರಿನಗರ ಹಾಗೂ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಾಮಾಜಿಕ ಸೇವೆ ಮತ್ತು ಸಮುದಾಯದ ಏಳಿಗೆಯನ್ನು ಮೂಲ ಮಂತ್ರವಾಗಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ.

ಹಿರಿಯ ನಾಗರಿಕರಿಗೆ ಉತ್ತಮ ಗುಣಮಟ್ಟದ ಆರೈಕೆ, ಪುನರ್ವಸತಿ, ಬದುಕಿಗೆ ನೆರವು ಹಾಗೂ ಶಾಂತಿ ಕೇಂದ್ರಗಳನ್ನು ಒದಗಿಸಲು ಮುಡಿಪಾಗಿರುವ ಆನಂದಾಸ್ ಸೇವಾ ಸದನ ಟ್ರಸ್ಟ್, ಪ್ರಸ್ತುತ ಬೆಂಗಳೂರು ನಗರದಲ್ಲಿ ನಾಲ್ಕು ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.



ಈ ನಾಲ್ಕು ಘಟಕಗಳಲ್ಲಿರುವ ವಯೋವೃದ್ಧರು ಮತ್ತು ಅನಾರೋಗ್ಯ ಅಥವಾ ಗಾಯದಿಂದ ಚೇತರಿಸಿಕೊಳ್ಳುತ್ತಿರುವವರು ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸಲು ಟ್ರಸ್ಟ್ ಸಮರ್ಪಿಸಿಕೊಂಡಿದೆ. ಆರೈಕೆಯಲ್ಲಿ ವಿಶೇಷವಾದ ಕರುಣೆ, ಸಹಾನುಭೂತಿ ಮತ್ತು ಶ್ರೇಷ್ಠತೆ ಬಗ್ಗೆ ಹೆಚ್ಚಿನ ಒತ್ತು ನೀಡುತ್ತಲಿದೆ.

ಟ್ರಸ್ಟ್‌ನ ಯೋಜನೆಗಳು:

- ವೃದ್ಧಾಪ್ಯ ಗೃಹ ಮತ್ತು ಪುನರ್ವಸತಿ (GHR) ಕೇಂದ್ರಗಳು ಪ್ರಮುಖ ಯೋಜನೆಗಳಲ್ಲಿ ಒಂದಾಗಿದೆ.
- ಜಿಎಚ್‌ಆರ್ ಕೇಂದ್ರಗಳು ISO 9001:2015 ಗುಣಮಟ್ಟದ ನಿರ್ವಹಣಾ ವ್ಯವಸ್ಥೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ.
- ಆರೈಕೆ, ಸೇವೆ ಒದಗಿಸುವಲ್ಲಿ ಉನ್ನತ ಮಟ್ಟವನ್ನು ಅಳವಡಿಸಿಕೊಂಡಿರುವುದನ್ನು ಕೇಂದ್ರಗಳು ಖಚಿತಪಡಿಸುತ್ತವೆ.
- ವೈದ್ಯಕೀಯ ಪುನರ್ವಸತಿ, ಚಿಕಿತ್ಸಕ ಕಾರ್ಯಕ್ರಮಗಳು ಮತ್ತು ಆಸ್ಪತ್ರೆಯಿಂದ ಡಿಸ್ಚಾರ್ಜಾಗಿ ಮನೆಗೆ ಬರುವ ವ್ಯಕ್ತಿಗಳಿಗೆ ಪರಿವರ್ತನೆಗೆ ಪೂರಕವಾದ ತಾತ್ಕಾಲಿಕ ಸಹಾಯವನ್ನು ಒಳಗೊಂಡ ಸಮಗ್ರ ಸೇವಾ ವ್ಯಾಪ್ತಿಯನ್ನು ಜಿಎಚ್‌ಆರ್ ಕೇಂದ್ರಗಳು ಒದಗಿಸುತ್ತವೆ.
- ಈ ಕೇಂದ್ರಗಳು ರೋಗ ನಿಯಂತ್ರಣ ಮಟ್ಟಕ್ಕೆ ತಕ್ಕಂತೆ ವಿನ್ಯಾಸಗೊಳಿಸಲಾಗಿದ್ದು, ಅವುಗಳ ಸಾಮರ್ಥ್ಯ ಗರಿಷ್ಠಗೊಳಿಸಲು, ದೋಷಗಳನ್ನು ಕನಿಷ್ಠಗೊಳಿಸಲು ಹಾಗೂ ರೋಗಿಗಳ ಚೇತರಿಕೆಯನ್ನು ಉತ್ತೇಜಿಸುವತ್ತ ಕೇಂದ್ರೀಕೃತವಾಗಿವೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ದೂರದೃಷ್ಟಿ ನಾಯಕತ್ವ: ಡಾ. ರಾವ್ ಅವರ ದೂರದೃಷ್ಟಿ ನಾಯಕತ್ವವು, ವಿಶೇಷವಾಗಿ ಜೀವನಾಂತ್ಯದವರೆಗೆ ಆರೈಕೆ ಮತ್ತು ಉಪಶಮನ (ಪ್ಯಾಲಿಯೇಟಿವ್) ಸೇವೆಗಳಲ್ಲಿ ತೊಡಗಿಸಿಕೊಳ್ಳುವುದಲ್ಲದೆ, ದೈಹಿಕ ಪುನರ್ವಸತಿಯನ್ನೂ ಮೀರಿ ಭಾವನಾತ್ಮಕ ಮತ್ತು ಮಾನಸಿಕ ಬೆಂಬಲಕ್ಕೆ ಸಹಾಯಕವಾಗಿದೆ. ಟ್ರಸ್ಟ್ ಅಳವಡಿಸಿಕೊಂಡಿರುವ ಸಮಗ್ರ ವಿಧಾನ ಶಾರೀರಿಕ ಪುನರ್ವಸತಿಗಿಂತ ಭಾವನಾತ್ಮಕ ಮತ್ತು ಮಾನಸಿಕ ಬೆಂಬಲ ಒಳಗೊಂಡಂತೆ ನಿರಾಶ್ರಿತರಲ್ಲಿ ಭರವಸೆ ಮೂಡಿಸುವ ಸಬಲೀಕರಣದ ವಾತಾವರಣವನ್ನು ಪ್ರೋತ್ಸಾಹಿಸುತ್ತದೆ.

ಸಂದಿರುವ ಪ್ರಶಸ್ತಿ, ಪುರಸ್ಕಾರಗಳು: ಎಪಿಜೆ ಅಬ್ದುಲ್ ಕಲಾಂ ಪ್ರಶಸ್ತಿ, ಭಾರತ ಗೌರವ ರತ್ನ ಶ್ರೀ ಸಮ್ಮಾನ್ (ಕಾರ್ಪೊರೇಟ್ ಅಫೈರ್ಸ್ ಸಚಿವಾಲಯ, ಭಾರತ ಸರ್ಕಾರ), ಉತ್ತಮ ರೋಗಿ ಆರೈಕೆಗಾಗಿ 'ರಾಷ್ಟ್ರೀಯ ಶ್ರೇಷ್ಠತೆ ಪ್ರಶಸ್ತಿಗಳು ಮತ್ತು ಪ್ಯಾಲಿಯೇಟಿವ್ ಮತ್ತು ಜೀವನಾಂತ್ಯ ಆರೈಕಾ ಸೇವೆ'ಗಳ ಅಂತರರಾಷ್ಟ್ರೀಯ ಪ್ರಶಸ್ತಿ.

ಮುಂದಿನ ಯೋಜನೆ: ಟ್ರಸ್ಟ್ 50 ಹಾಸಿಗೆಯ ಪ್ಯಾಲಿಯೇಟಿವ್ ಕೇರ್ ಸೆಂಟರ್ ಅಭಿವೃದ್ಧಿ ಹಾಗೂ ವೈದ್ಯಕೀಯ ಸಲಕರಣೆಗಳನ್ನು ಅಳವಡಿಕೆ ಯೋಜನೆ ಹಾಕಿಕೊಂಡಿದೆ. ಈ ಶ್ರೇಷ್ಠ ಉದ್ದೇಶಕ್ಕೆ ಬೆಂಬಲ ನೀಡುವ ದಾನಿಗಳಿಗೆ 80G ಅಡಿ ತೆರಿಗೆ ರಿಯಾಯಿತಿ ದೊರೆಯಲಿದೆ.

ಇನ್ನೂ ವೃದ್ಧರ ವೈದ್ಯಕೀಯ ಆರೈಕೆಯಲ್ಲಿ ನಿರತರಾಗಿರುವ ಡಾ. ನಿತೇಶ್ ಕುಮಾರ್ ಡಿ ಅವರ ಅತಿದೊಡ್ಡ ಬೆಂಬಲ ಟ್ರಸ್ಟ್‌ನ ಉದ್ದೇಶ, ಪರಿಣಾಮ ಮತ್ತು ಸಮರ್ಪಣಾಶಕ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತಲಿದೆ.

ಫೋನ್: 7676289023, 6362563616, 7090695002
www.anandassevasadana.com


ವಿಜಯೇಂದ್ರ ಬಣದ ಮೇಲುಗೈ

23 ಸಂಘಟನಾತ್ಮಕ ಜಿಲ್ಲಾ ಅಧ್ಯಕ್ಷರ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ 39 ಸಂಘಟನಾತ್ಮಕ ಜಿಲ್ಲೆಗಳ ಪೈಕಿ 23 ಸಂಘಟನಾತ್ಮಕ ಜಿಲ್ಲೆಗಳ ಅಧ್ಯಕ್ಷರ ಪಟ್ಟಿ ಪ್ರಕಟವಾಗಿದ್ದು, ಈ ಪೈಕಿ ಆರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಈ ಹಿಂದೆ ಅಧ್ಯಕ್ಷರಾಗಿದ್ದವರನ್ನೇ ಮುಂದುವರಿಸಲಾಗಿದೆ.

ಇವರಲ್ಲಿ ಬಹುತೇಕರು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಆಯ್ಕೆಯವರೇ ಆಗಿದ್ದಾರೆ. ಕೆಲವರು ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಬೆಂಬಲಿಗರು. ಬಹುಪಾಲು ಎಲ್ಲರೂ ಬಿಜೆಪಿ ಮೂಲದವರೇ ಆಗಿದ್ದಾರೆ. ಕೋಲಾರ, ಚಿಕ್ಕಬಳ್ಳಾಪುರ, ಕೊಪ್ಪಳ,



ಬಿ.ವೈ. ವಿಜಯೇಂದ್ರ

ವಿಜಯನಗರ, ಕಲಬುರಗಿ (ಗ್ರಾಮಾಂತರ) ಮತ್ತು ಯಾದಗಿರಿ ಜಿಲ್ಲಾಧ್ಯಕ್ಷರ ಸ್ಥಾನ ಹೊಸಬರಿಗೆ ಲಭಿಸಿದೆ.



ಇನ್ನೂ 16 ಸಂಘಟನಾ ಜಿಲ್ಲೆಗಳ ಅಧ್ಯಕ್ಷರ ಸ್ಥಾನಗಳಿಗೆ ಆಯ್ಕೆ ಆಗಬೇಕಿದೆ. ಈ ಜಿಲ್ಲೆಗಳ ಪೈಕಿ ಕೆಲವು ಜಿಲ್ಲೆಗಳಲ್ಲಿ ವಿಜಯೇಂದ್ರ ಅವರ ಬಗ್ಗೆ ಅಪಸ್ವರ ಇದೆ. ಹೀಗಾಗಿ ಅಲ್ಲಿನ ಅಧ್ಯಕ್ಷರ ಆಯ್ಕೆಯನ್ನು ಪ್ರಕಟಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಘಟಕದ ಅಧ್ಯಕ್ಷರನ್ನು ಆಯ್ಕೆ ಮಾಡಲು ಶೇ 50ರಷ್ಟು ಜಿಲ್ಲಾ ಅಧ್ಯಕ್ಷರ ಆಯ್ಕೆಗೆ ಒಮ್ಮತದ ಒಪ್ಪಿಗೆ ಇದ್ದರೂ ಸಾಕಾಗುತ್ತದೆ. ಈಗ ಆಯ್ಕೆ ಮಾಡಿರುವ ಪಟ್ಟಿಯಿಂದ ವಿಜಯೇಂದ್ರ ಅಧ್ಯಕ್ಷರಾಗಿ ಮುಂದುವರಿಯಲು ಯಾವುದೇ ತೊಡಕು ಆಗುವುದಿಲ್ಲ. ಬಹುತೇಕರು ಹಿಂದಿನ ಬಾರಿ ವಿಜಯೇಂದ್ರ ಅವರಿಂದಲೇ ನೇಮಕಗೊಂಡವರು ಎಂದೂ ಮೂಲಗಳು ಹೇಳಿವೆ.



ಬೂತ್ ಮಟ್ಟ, ಮಂಡಲ ಅಧ್ಯಕ್ಷರು ಮತ್ತು ಜಿಲ್ಲಾ ಅಧ್ಯಕ್ಷರ ಚುನಾವಣೆವರೆಗೆ ಸಹಮತದ ಪ್ರಕ್ರಿಯೆ ನಡೆದಿದೆ. ಉಳಿದ 16 ಜಿಲ್ಲೆಗಳ ಪ್ರಕ್ರಿಯೆ ಮುಂದುವರಿದಿದೆ

ಪಿ.ರಾಜೀವ್
ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಈ ಬಾರಿ 45ರಿಂದ 60 ವರ್ಷ ಒಳಗಿನ ವಯೋಮಿತಿಯವರಿಗೆ ನೀಡಲಾಗಿದೆ. ಸಾಮಾಜಿಕ ನ್ಯಾಯ ಮತ್ತು ಸೋಷಿಯಲ್ ಎಂಜಿನಿಯರಿಂಗ್‌ಗೆ ಆದ್ಯತೆ ನೀಡಿ, ಸಣ್ಣಪುಟ್ಟ ಜಾತಿಗಳವರಿಗೆ ಆದ್ಯತೆ ನೀಡಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ತಾವು ಹೇಳಿದವರನ್ನು ಆಯ್ಕೆ ಮಾಡಲಿಲ್ಲ ಎಂಬ ಕಾರಣಕ್ಕೆ ಡಾ.ಕೆ.ಸುಧಾಕರ್ ಅವರು ಪಕ್ಷದ ಅಧ್ಯಕ್ಷರ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಅಧ್ಯಕ್ಷರ ಆಯ್ಕೆ ಪಟ್ಟಿಯನ್ನು ಚುನಾವಣಾಧಿಕಾರಿ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಬಿಡುಗಡೆಗೊಳಿಸಿದ್ದಾರೆ.

ಅಧ್ಯಕ್ಷರ ಪಟ್ಟಿ

ಸಂಘಟನಾತ್ಮಕ ಜಿಲ್ಲೆ	ಹೆಸರು
ಮೈಸೂರು ನಗರ	ಎಲ್.ನಾಗೇಂದ್ರ
ಚಾಮರಾಜನಗರ	ಸಿ.ಎಸ್.ನಿರಂಜನಕುಮಾರ್
ದಕ್ಷಿಣಕನ್ನಡ	ಸತೀಶ್ ಕುಂಪಲ
ಚಿಕ್ಕಮಗಳೂರು	ದೇವರಾಜ ಶೆಟ್ಟಿ
ಶಿವಮೊಗ್ಗ	ಎನ್.ಕೆ.ಜಗದೀಶ್
ಉತ್ತರಕನ್ನಡ	ನಾರಾಯಣ ಶ್ರೀನಿವಾಸ್ ಹೆಗಡೆ
ಹುಬ್ಬಳ್ಳಿ–ಧಾರವಾಡ	ತಿಪ್ಪಣ್ಣ ಮಜ್ಜಗಿ
ಧಾರವಾಡ ಗ್ರಾಮಾಂತರ	ನಿಂಗಪ್ಪ ಡಿ ಸುತಗಟ್ಟಿ
ಬೆಳಗಾವಿ ನಗರ	ಗೀತಾ ಸುತಾರ
ಬೆಳಗಾವಿ ಗ್ರಾಮಾಂತರ	ಸುಭಾಷ್ ದುಂಡಪ್ಪ ಪಾಟೀಲ
ಚಿಕ್ಕೋಡಿ	ಸತೀಶ್ ಅಪ್ಪಾಜಿಗೋಳ್
ಬೀದರ್	ಸೋಮನಾಥ್ ಪಾಟೀಲ
ಕಲಬುರಗಿ	ಚಂದ್ರಕಾಂತ್ ಬಿ.ಪಾಟೀಲ
ಕಲಬುರಗಿ ಗ್ರಾಮಾಂತರ	ಅಶೋಕ ಬಗಲಿ
ಯಾದಗಿರಿ	ಬಸವರಾಜಪ್ಪಗೌಡ ವಿ
ಕೊಪ್ಪಳ	ದಡೇಸಗೂರು ಬಸವರಾಜ್
ಬಳ್ಳಾರಿ	ಅನಿಲ್ ಕುಮಾರ್ ಮೋಕಾ
ವಿಜಯನಗರ	ಸಂಜೀವ್ ರೆಡ್ಡಿ
ಚಿಕ್ಕಬಳ್ಳಾಪುರ	ಬಿ.ಸಂದೀಪ್
ಕೋಲಾರ	ಓಂ ಶಕ್ತಿ ಛಲಪತಿ
ಬೆಂಗಳೂರು ಉತ್ತರ	ಎಸ್.ಹರೀಶ್
ಬೆಂಗಳೂರು ಕೇಂದ್ರ	ಎ.ಆರ್.ಸಪ್ತಗಿರಿಗೌಡ
ಬೆಂಗಳೂರು ದಕ್ಷಿಣ	ಸಿ.ಕೆ.ರಾಮಮೂರ್ತಿ

ಸಿ.ಎಂ ಬದಲಾವಣೆ: ನಿಲ್ಲದ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕಮಾಂಡ್ ಹಲವು ಬಾರಿ ಕಟ್ಟುನಿಟ್ಟಿನ ಸೂಚನೆ ನೀಡಿದರೂ ಮುಖ್ಯಮಂತ್ರಿ ಬದಲಾವಣೆ ವಿಚಾರದ ಚರ್ಚೆ ಕಾಂಗ್ರೆಸ್ ವಲಯದಲ್ಲಿ ಮುಂದುವರಿದಿದೆ.

ಸುದ್ದಿಗಾರರ ಪ್ರಶ್ನೆಗೆ ಗುರುವಾರ ಉತ್ತರಿಸಿದ ಗೃಹ ಸಚಿವ ಜಿ. ಪರಮೇಶ್ವರ, ‘ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಶಾಸಕರ ಅಭಿಪ್ರಾಯ ಮುಖ್ಯ. ಅಭಿಪ್ರಾಯ ಸಂಗ್ರಹಿಸಿದ ನಂತರ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರವೇ ಅಂತಿಮ’ ಎಂದರು.

‘ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲು ಶಾಸಕರ ಬೆಂಬಲ ಇರಬೇಕು ಎಂದೇನೂ ಇಲ್ಲ. ಹೈಕಮಾಂಡ್ ಹೇಳಿದರೆ ಸಾಕು’ ಎಂದು ರಾಮನಗರ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಸಚಿವರೇ ಆಗಲಿ, ಶಾಸಕರೇ ಆಗಲಿ ಯಾವುದೇ ವಿಚಾರವನ್ನು ಸರ್ಕಾರ ಹಾಗೂ ಪಕ್ಷದ ವೇದಿಕೆಗಳಲ್ಲೇ ಚರ್ಚಿಸಬೇಕು. ಹಾದಿಬೀದಿಯಲ್ಲಿ ಹೇಳಿಕೆ ನೀಡವುದು ತಪ್ಪು’ ಎಂದು ಹೇಳಿದರು.



ಜಿ.ಪರಮೇಶ್ವರ

ಮಂಗಳವಾರ ಮಾತನಾಡಿದ್ದ ಸಹಕಾರ ಸಚಿವ ಕೆ.ಎನ್. ರಾಜಣ್ಣ, ‘ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಶಾಸಕಾಂಗ ಪಕ್ಷದ ಅಭಿಪ್ರಾಯ ಸಂಗ್ರಹಿಸಿದ ನಂತರವೇ ಹೈಕಮಾಂಡ್ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹತೆ ಇರುವವರು ಒಬ್ಬರಲ್ಲ, ಬಹಳ ಜನ ಇದ್ದಾರೆ. ಹೈಕಮಾಂಡ್ ಎಲ್ಲರ ಅಭಿಪ್ರಾಯ ಕೇಳುತ್ತದೆ. ಅವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೊ ಅದಕ್ಕೆ ಎಲ್ಲರೂ ಬದ್ಧ’ ಎಂದು ಹೇಳಿದ್ದರು.

ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧದ ಮೇಲ್ಮನವಿ ವಿಚಾರಣೆ

ಯತ್ನಾಳಗೆ ಸುಪ್ರೀಂ ಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ತನಿಖೆಗೆ ನೀಡಿದ್ದ ಒಪ್ಪಿಗೆ ಹಿಂಪಡೆದಿರುವುದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಸುಪ್ರೀಂ ಕೋರ್ಟ್ ಬುಧವಾರ ತರಾಟೆಗೆ ತೆಗೆದುಕೊಂಡಿದೆ. ಈ ಮೇಲ್ಮನವಿ ಅರ್ಜಿ ಹಿಂದಿರುವ ರಾಜಕೀಯ ದುರುದ್ದೇಶವೇನು’ ಎಂದು ಪ್ರಶ್ನಿಸಿದೆ.

ಶಿವಕುಮಾರ್ ವಿರುದ್ಧದ ತನಿಖೆಗೆ ನೀಡಿದ್ದ ಒಪ್ಪಿಗೆ ಹಿಂಪಡೆದಿರುವುದನ್ನು ಪ್ರಶ್ನಿಸಿ ಸಿಬಿಐ ಮತ್ತು ಯತ್ನಾಳ ಸಲ್ಲಿಸಿರುವ ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಾಲಯ ವಿಚಾರಣೆ ನಡೆಸುತ್ತಿದೆ. ಈ ವೇಳೆ ನ್ಯಾಯಮೂರ್ತಿ ಸೂರ್ಯಕಾಂತ್, ‘ರಾಜಕೀಯ ಲಾಭಕ್ಕಾಗಿ ನೀವು ಸುಪ್ರೀಂ ಕೋರ್ಟ್ ಮುಂದೆ ಏಕೆ ಇದ್ದೀರಿ? ಅಲ್ಲಿಗೆ ಹೋಗಿ ಚುನಾವಣೆಯಲ್ಲಿ ಸ್ಪರ್ಧಿಸಿ’ ಎಂದು ತರಾಟೆಗೆ ತೆಗೆದುಕೊಂಡರು.



ಬಸನಗೌಡ ಯತ್ನಾಳ

ಯತ್ನಾಳ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ. ಪರಮೇಶ್ವರ್, ‘ಇದು ರಾಜಕೀಯ ದ್ವೇಷದ ಪ್ರಕರಣ ಅಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಪ್ರಕರಣವನ್ನು ಹಿಂತೆಗೆದುಕೊಂಡಿದೆ’ ಎಂದರು.



ಸಿಬಿಐ ಹಾಗೂ ಡಿ.ಕೆ. ಶಿವಕುಮಾರ್ ಅವರು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಕರ್ನಾಟಕ ಸರ್ಕಾರ ಪ್ರತಿ ಪ್ರಮಾಣಪತ್ರ ಸಲ್ಲಿಸಿದ ಬಳಿಕ ವಿಚಾರಣೆ ಮುಂದುವರಿಸಬಹುದು ಎಂದು ಹೇಳಿದ ಪೀಠ ಮಾರ್ಚ್ 26ಕ್ಕೆ ಮುಂದೂಡಿತು.

ಯತ್ನಾಳ ಹಾಗೂ ಸಿಬಿಐ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ಕಳೆದ ವರ್ಷ ವಜಾಗೊಳಿಸಿತ್ತು. ‘ಕೇಂದ್ರ ಸರ್ಕಾರವು ಎಲ್ಲಿಯವರೆಗೆ ರಾಜ್ಯವೊಂದರಲ್ಲಿ ಸಿಬಿಐ ಅನ್ನು ಕಾರ್ಯನಿರ್ವಹಣೆಗೆ ಹಚ್ಚಬಹುದು ಎಂಬುದು ಕಾನೂನಿನ ವಿಚಾರಕ್ಕೆ ಒಳಪಟ್ಟಿದೆ. ಈ ಪ್ರಕರಣದಲ್ಲಿನ ಕಾನೂನಿನ ವಿಚಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಸಂಬಂಧಿಸಿವೆ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮತ್ತು ಸಿಬಿಐ ನಡುವೆ ಸಂಘರ್ಷ ಇದ್ದು ಪ್ರಕರಣವನ್ನು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸುವುದೇ ಸೂಕ್ತ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತ್ತು.

ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಹಿಂದಿನ ಬಿಜೆಪಿ ಸರ್ಕಾರವು ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ 2019ರ ಸೆಪ್ಟೆಂಬರ್ 25ರಂದು ಅನುಮತಿ ನೀಡಿತ್ತು. ಈ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರ 2023ರ ನವೆಂಬರ್ 23ರಂದು ಹಿಂಪಡೆದಿತ್ತು. ನಂತರ 2023ರ ಡಿಸೆಂಬರ್ 28ರಂದು ಲೋಕಾಯುಕ್ತ ತನಿಖೆಗೆ ವಹಿಸಿತ್ತು.

ಕಾಂಗ್ರೆಸ್ ಸಂಪರ್ಕದಲ್ಲಿ ಶ್ರೀರಾಮುಲು?

● ಹರಿಶಂಕರ್ ಆರ್.

ಬಳ್ಳಾರಿ: ಮಾಜಿ ಸಚಿವ ಬಿ. ಶ್ರೀರಾಮುಲು ಕಾಂಗ್ರೆಸ್‌ನ ರಾಜ್ಯ ನಾಯಕರ ಸಂಪರ್ಕದಲ್ಲಿದ್ದಾರೆ. ಅವರ ಸೇರ್ಪಡೆಯಿಂದ ಪಕ್ಷಕ್ಕೆ ಅಲ್ಲದೇ ಜಿಲ್ಲಾ ಮತ್ತು ರಾಜ್ಯ-ಮಟ್ಟದಲ್ಲಿ ಆಗುವ ಪರಿಣಾಮಗಳೇನು ಎಂಬ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಚರ್ಚೆ ಆಗುತ್ತಿದೆ. ಇದಕ್ಕೆ ಪೂರಕವಾಗಿ ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ನಾಯಕರು ಮತ್ತು ಜನಪ್ರತಿನಿಧಿಗಳ ಅಭಿಪ್ರಾಯ ಸಂಗ್ರಹ ನಡೆದಿದೆ ಎಂದು ಗೊತ್ತಾಗಿದೆ.

ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರದಲ್ಲಿ ಶ್ರೀರಾಮುಲು ಅವರನ್ನು ಸೋಲಿಸಿದ್ದ ಶಾಸಕ ಬಿ. ನಾಗೇಂದ್ರ ಸೇರಿ ಹಲವರು ಶ್ರೀರಾಮುಲು ಬಗ್ಗೆ ಸದಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

‘ಕಾಂಗ್ರೆಸ್ ಸೇರಲು ಶ್ರೀರಾಮುಲು ಅವರಿಗೂ ಒಲವಿದೆ. ಆದರೆ, ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ನೇರ ಸಂಪರ್ಕವಿದ್ದು, ಅದನ್ನು ಕಳೆದುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ದೆಹಲಿಗೆ ಹೋಗಿ, ಪಕ್ಷದ ಹೈಕಮಾಂಡ್ ಜೊತೆ ಚರ್ಚಿಸಿ ಬಂದ ಬಳಿಕವಷ್ಟೇ ಅವರ ನಿಲುವು ಸ್ಪಷ್ಟವಾಗಲಿದೆ’ ಎಂದು ಶ್ರೀರಾಮುಲು ಆಪ್ತರು ತಿಳಿಸಿದರು.



ಬಿಜೆಪಿ ನನಗೆ ತಾಯಿ ಇದ್ದಂತೆ. ನಾನು ಪಕ್ಷ ಬಿಡುವುದಿಲ್ಲ. ಪಕ್ಷದ ಹೈಕಮಾಂಡ್, ಬಹುತೇಕ ನಾಯಕರೂ ನನ್ನ ಪರ ಇದ್ದಾರೆ

ಬಿ. ಶ್ರೀರಾಮುಲು, ಮಾಜಿ ಸಚಿವ

‘ಕಾಂಗ್ರೆಸ್‌ನತ್ತ ಮನಸ್ಸು ಮಾಡಲು ಶ್ರೀರಾಮುಲು ಅವರಿಗೂ ಕಾರಣಗಳಿವೆ. ಬಳ್ಳಾರಿಯಲ್ಲಿ ಇತ್ತೀಚಿನ ಚುನಾವಣೆಗಳ ಫಲಿತಾಂಶ ಅಚ್ಚರಿ ಮೂಡಿಸಿವೆ. ಗೆಲುವಿನಲ್ಲಿ ಅಹಿಂದ ಮತಗಳೇ ನಿರ್ಣಾಯಕ ಎಂಬುದು ಗೊತ್ತಾಗಿದೆ. ಜತೆಗೆ, ಪಕ್ಷದಲ್ಲಿನ ಕೆಲ ನಾಯಕರೊಂದಿಗಿನ ಭಿನ್ನಾಭಿಪ್ರಾಯ, ಜನಾರ್ದನ ರೆಡ್ಡಿ ಜತೆಗಿನ ಮುನಿಸು ಶ್ರೀರಾಮುಲು ಅವರು ಅನ್ಯ ಮಾರ್ಗ ಹುಡುಕುವಂತೆ ಮಾಡುತ್ತಿವೆ’ ಎಂದು ಮೂಲಗಳು ಹೇಳುತ್ತಿವೆ.

ನಾಗೇಂದ್ರ ಭವಿಷ್ಯವೇನು: ಶ್ರೀರಾಮುಲು ಕಾಂಗ್ರೆಸ್‌ಗೆ ಬಂದರೆ, ನಾಗೇಂದ್ರ ಅವರ ಭವಿಷ್ಯ ಮಸುಕಾಗುತ್ತದೆ ಎಂಬ ಕಳವಳ ಕಾಂಗ್ರೆಸ್ ಕಾರ್ಯಕರ್ತರಲ್ಲಿದೆ. ಈ ಒಂದು ದಶಕದಲ್ಲಿ ಬಳ್ಳಾರಿ ಮಟ್ಟಿಗೆ ವಾಲ್ಮೀಕಿ ಸಮುದಾಯದ ಮತಗಳನ್ನು ಕಾಂಗ್ರೆಸ್‌ನತ್ತ ಸೆಳೆಯಲು ನಾಗೇಂದ್ರ ಶ್ರಮಿಸಿದ್ದಾರೆ. ಶ್ರೀರಾಮುಲು ಬಂದರೆ ಕೂಡ್ಲಿಗಿ ಕ್ಷೇತ್ರ ಕೇಳುತ್ತಿರುವುದರಿಂದ ನಾಗೇಂದ್ರ ಅವರಿಗೆ ಸಮಸ್ಯೆಯಾಗದು ಎಂಬ ಅಭಿಪ್ರಾಯವೂ ಇದೆ.

ಸಂಸ್ಕೃತಿ ವಿನಿಮಯ ಆಗಲಿ: ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುಂಭಮೇಳಕ್ಕೆ ಭೇಟಿ ನೀಡಿದ್ದರಿಂದ ನಮ್ಮ ದೇಶದ ಸಂಸ್ಕೃತಿಯ ಬಗ್ಗೆ ಹಲವು ಹೊಸ ವಿಚಾರ ಗೊತ್ತಾದವು. ಸಂಸ್ಕೃತಿಯ ವಿನಿಮಯ ಆಗುವುದರಿಂದ ದೇಶಕ್ಕೆ ಒಳ್ಳೆಯದು’ ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಉತ್ತರ ಪ್ರದೇಶ ವಿಧಾನ ಸಭಾಧ್ಯಕ್ಷ ಸತೀಶ್ ಮಹಾನ್ ಅವರ ಆಹ್ವಾನದ ಮೇರೆಗೆ ಖಾದರ್ ಅವರು ಈಚೆಗೆ ಕುಂಭಮೇಳಕ್ಕೆ ಭೇಟಿ ನೀಡಿದ್ದರು. ‘ಇದೊಂದು ರೀತಿಯಲ್ಲಿ ಸಂಸ್ಕೃತಿ ವಿನಿಮಯ. ನಾನು ಸಹ ಇಲ್ಲಿನ ಉರುಸ್‌ಗೆ ಬರುವಂತೆ ಸತೀಶ್ ಮಹಾನ್ ಅವರಿಗೆ ಆಹ್ವಾನ ನೀಡಿದ್ದೇನೆ. ಬರುತ್ತೇನೆ ಎಂದು ಅವರು ಒಪ್ಪಿಕೊಂಡಿದ್ದಾರೆ’ ಎಂದು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಅಧಿಕೃತ ಆಹ್ವಾನದ ಮೇರೆಗೆ ಭೇಟಿ ನೀಡಿದ್ದರಿಂದ, ಎಲ್ಲ ವ್ಯವಸ್ಥೆ ಉತ್ತಮವಾಗಿತ್ತು. ಯಾವುದೇ ತೊಂದರೆ ಆಗಲಿಲ್ಲ. ಅಲ್ಲಿ ಸಾಧು ಸಂತರು, ನಾಗಾ ಸಾಧುಗಳನ್ನು ಭೇಟಿ ಮಾಡುವ ಅವಕಾಶ ದೊರೆಯಿತು. ಸಂಸ್ಕೃತಿ–ವಿಚಾರಗಳ ಬಗ್ಗೆ ಹಲವರಿಂದ ಮಾಹಿತಿ ದೊರೆಯಿತು. ಕುಂಭಮೇಳಕ್ಕೆ ಹೋಗಿದ್ದರಿಂದ ಇದು ಸಾಧ್ಯವಾಯಿತು’ ಎಂದರು.



ವಿಧಾನಸಭೆಯ ಅಧ್ಯಕ್ಷ ಯು.ಟಿ.ಖಾದರ್ ಅವರು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ನಾಗಾ ಸಾಧುಗಳನ್ನು ಭೇಟಿ ಮಾಡಿದರು

ಸುದ್ದಿ 2 ನಿಮಿಷ

ರೈಲು ಸಂಚಾರ ಮತ್ತೆ ಆರಂಭ

ಬೆಂಗಳೂರು: ಕಂಟೋನ್ಮೆಂಟ್ ರೈಲು ನಿಲ್ದಾಣ ಮತ್ತು ಬೈಯಪ್ಪನಹಳ್ಳಿ ನಿಲ್ದಾಣದ ನಡುವೆ ರಸ್ತೆ ಕೆಳ ಸೇತುವೆ ಮತ್ತು ಬೈಯಪ್ಪನಹಳ್ಳಿ ವಿಭಾಗಗಳ ನಡುವಿನ ರಸ್ತೆ ಕೆಳಸೇತುವೆ ಕಾಮಗಾರಿಯಿಂದಾಗಿ ರದ್ದು ಪಡಿಸಲಾಗಿದ್ದ, ರೈಲು ಸಂಚಾರವನ್ನು ಮತ್ತೆ ಆರಂಭಿಸಲಾಗಿದೆ.

ಹುಬ್ಬಳ್ಳಿ ಎಸ್‌ಎಸ್‌ಎಸ್–ಕೆಎಸ್‌ಆರ್ ಬೆಂಗಳೂರು–ಹುಬ್ಬಳ್ಳಿ ಎಸ್‌ಎಸ್‌ಎಸ್ ಡೈಲಿ ವಿಶೇಷ ಎಕ್ಸ್‌ಪ್ರೆಸ್ ರೈಲು, ಬಂಗಾರಪೇಟೆ–ಕೆಎಸ್‌ಆರ್ ಬೆಂಗಳೂರು ಮೆಮು ಎಕ್ಸ್‌ಪ್ರೆಸ್, ಹೊಸಪೇಟೆ–ಕೆಎಸ್‌ಆರ್ ಬೆಂಗಳೂರು ಡೈಲಿ ಪ್ಯಾಸೆಂಜರ್, ಕೆಎಸ್‌ಆರ್ ಬೆಂಗಳೂರು–ಎಸ್‌ಎಸ್ ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ ರೈಲುಗಳ ಸಂಚಾರವನ್ನು ಭಾಗಶಃ ರದ್ದು ಪಡಿಸಲಾಗಿತ್ತು.

ಲೋಕಮಾನ್ಯ ತಿಲಕ್–ಕೊಯಮತ್ತೂರು ಡೈಲಿ ಎಕ್ಸ್‌ಪ್ರೆಸ್, ಬೆಂಗಳೂರು–ಎಂಜಿಆರ್ ಚೆನ್ನೈ ಸೆಂಟ್ರಲ್ ಡೈಲಿ ಎಕ್ಸ್‌ಪ್ರೆಸ್, ಕೆಎಸ್‌ಆರ್ ಬೆಂಗಳೂರು–ನಾಂದೇಡ್ ಡೈಲಿ ಎಕ್ಸ್‌ಪ್ರೆಸ್, ಬೆಂಗಳೂರು–ಮೈಸೂರು ಡೈಲಿ ಪ್ಯಾಸೆಂಜರ್ ವಿಶೇಷ ರೈಲು, ಮೈಸೂರು– ಎಂಜಿಆರ್ ಚೆನ್ನೈ ಕಾವೇರಿ ಡೈಲಿ ಎಕ್ಸ್‌ಪ್ರೆಸ್, ಮೈಸೂರು–ಎಸ್‌ಎಂವಿಟಿ ಬೆಂಗಳೂರು ಡೈಲಿ ಪ್ಯಾಸೆಂಜರ್ ವಿಶೇಷ ರೈಲುಗಳ ಮಾರ್ಗ ಬದಲಾವಣೆ ಮಾಡಲಾಗಿತ್ತು.

ಇನ್ನು ಮುಂದೆ ಮೂಲ ಮಾರ್ಗದಲ್ಲಿಯೇ ಸಂಚರಿಸಲಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.



ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಆಗ್ರಹ

ಬೆಂಗಳೂರು: ‘ನನೆಗುದಿಗೆ ಬಿದ್ದಿರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಕೂಡಲೇ ನಡೆಸಬೇಕು’ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯಾಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್, ‘ಗ್ರಾಮ ಸ್ವರಾಜ್ಯದ ಪರಿಕಲ್ಪನೆಯ ಮೂಲಕ ಭಾರತದಲ್ಲಿ ಸ್ವಾವಲಂಬಿ ಗ್ರಾಮಗಳ ಸ್ಥಾಪನೆ ಗಾಂಧೀಜಿ ಅವರ ಕನಸಾಗಿತ್ತು. ಅದಕ್ಕಾಗಿ ಅವರು ಪ್ರತಿ ಗಾಮದಲ್ಲೂ ಪಂಚಾಯಿತಿಗಳ ಸ್ಥಾಪನೆಗೆ ಕರೆ ನೀಡಿದ್ದರು. ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಲು ಪೂರಕ ವಾತಾವರಣ ಸೃಷ್ಟಿ ಮಾಡಬೇಕಾದ ಪಂಚಾಯತ್ ರಾಜ್ ಇಲಾಖೆ, ಅಧಿಕಾರಿಗಳ ಕನಸಿನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಇಲಾಖೆಯಾಗಿ ಮಾರ್ಪಟ್ಟಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಎಲ್ಲ ಅಂಶಗಳನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಬಿವೈವಿ ವಿರುದ್ಧ ಸುಧಾಕರ್ ಯುದ್ಧ

ಒಂದನೇ ಪುಟದಿಂದ...

‘ಫೋನ್ ಮಾಡಿದರೂ ಪ್ರತಿಕ್ರಿಯಿಸುವುದಿಲ್ಲ. ನಡ್ಡಾ ಅವರಿಗೆ ಸಂದೇಶ ಹಾಕಿದರೆ ಭೇಟಿಗೆ ಸಮಯ ಕೊಡುತ್ತಾರೆ. ಆದರೆ, ಇವರು ಎರಡು– ಮೂರು ಬಾರಿ ಅಪಾಯಿಂಟ್‌ಮೆಂಟ್ ಕೊಟ್ಟು ನಂತರ ರದ್ದು ಮಾಡಿದ್ದಾರೆ’ ಎಂದರು.

‘ಬಸವರಾಜ ಬೊಮ್ಮಾಯಿ ಜತೆ ಚೆನ್ನಾಗಿ ಕೆಲಸ ಮಾಡಿದ್ದೇವೆ ಎಂದು ನಮ್ಮ ಮೇಲೆ ದ್ವೇಷ ಇರಬಹುದು. ವಿಜಯೇಂದ್ರ ಯಡಿಯೂರಪ್ಪ ಅವರ ಮಗ ಆಗಿರಬಹುದು. ಆದರೆ, ಅವರಿಗೂ ಇವರಿಗೂ ಹೋಲಿಕೆ ಮಾಡಲು ಸಾಧ್ಯವೇ ಇಲ್ಲ. ಇವರದು ದ್ವೇಷದ ರಾಜಕಾರಣ. ನಮ್ಮ ರಾಜಕೀಯ ಅಳಿವು– ಉಳಿವಿನ ದೃಷ್ಟಿಯಿಂದ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಮಗೂ ರಾಜಕೀಯ ಶಕ್ತಿ ಇದೆ. ನಮ್ಮ ಒಳಗೂ ಲಾವಾ ಇದೆ. ಯಾವಾಗ ಸ್ಫೋಟ ಆಗುತ್ತದೆ ಗೊತ್ತಿಲ್ಲ’ ಎಂದರು.

‘ನನ್ನ ಸಮಾಧಾನದ ದಿನಗಳು ಮುಗಿದವು. ಇನ್ನೇನಿದ್ದರೂ ಯುದ್ಧ. ಸಿ.ಟಿ.ರವಿ, ಬಸವರಾಜ ಬೊಮ್ಮಾಯಿ, ರಮೇಶ ಜಾರಕಿಹೊಳಿ ಅವರನ್ನು ಏನು ಮಾಡಿದ್ದೀರಿ ಎಂಬುದು ಚೆನ್ನಾಗಿ ಗೊತ್ತು. ಮೋದಿ, ಅಮಿತ್ ಶಾ, ನಡ್ಡಾ ಅವರನ್ನು ಭೇಟಿ ಮಾಡಿ ಎಲ್ಲ ವಿಷಯ ಅವರ ಗಮನಕ್ಕೆ ತರುತ್ತೇನೆ. ನಿಮ್ಮ ವ್ಯವಹಾರಗಳನ್ನೂ ಎಲ್ಲರ ಗಮನಕ್ಕೆ ತರುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

‘ವರಿಷ್ಠರ ಭೇಟಿಯ ಬಳಿಕ ಬೆಂಬಲಿಗರ ಸಭೆ ಮಾಡಿ ಅಭಿಪ್ರಾಯ ಪಡೆಯುತ್ತೇನೆ. ಆ ಬಳಿಕ ಒಂದು ತೀರ್ಮಾನ ಮಾಡುತ್ತೇನೆ. ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು. ಹೀಗೆಯೇ ಆಗುತ್ತದೆ ಎಂದು ಹೇಳಲಾಗುವುದಿಲ್ಲ’ ಎಂದರು.

ಅಧ್ಯಕ್ಷ ಸ್ಥಾನಕ್ಕೆ ಯತ್ನಾಳ ಸ್ಪರ್ಧೆ: ನಾಳೆ ತೀರ್ಮಾನ

ಒಂದನೇ ಪುಟದಿಂದ...

‘ಬಿಜೆಪಿ ಕಾರ್ಯಕರ್ತರ ಪಕ್ಷವಾಗಿದ್ದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷವನ್ನು ಮುನ್ನಡೆಸುವವರನ್ನೇ ರಾಜ್ಯಾಧ್ಯಕ್ಷರನ್ನಾಗಿ ಮಾಡುವ ಅಗತ್ಯವಿದೆ. ತಮಗೆ ಜೈ ಎನ್ನುವವರಿಗೆ ಮಣೆ ಹಾಕದೇ ಎಲ್ಲರೂ ಒಂದೇ ಎನ್ನುವ ಮನಸ್ಥಿತಿಯವರೇ ಅಧ್ಯಕ್ಷರಾಗಬೇಕಿದೆ. ಈ ನಿಟ್ಟಿನಲ್ಲಿ ವರಿಷ್ಠರು ಸೂಕ್ತ ತೀರ್ಮಾನ ತೆಗೆದುಕೊಳ್ಳುವ ವಿಶ್ವಾಸವಿದೆ’ ಎಂದು ಹೇಳಿದರು.

‘ಪಕ್ಷದಲ್ಲಿ ಸಂಘಟನಾ ಪರ್ವ ಸರಿಯಾಗಿ ನಡೆಯುತ್ತಿಲ್ಲ. ನಮ್ಮನ್ನೆಲ್ಲ ಕರೆಯುತ್ತಿಲ್ಲ. ಯಾರನ್ನೂ ಕೇಳದೆ, ಮಂಡಲ ಮತ್ತು ಜಿಲ್ಲಾ ಅಧ್ಯಕ್ಷರ ನೇಮಕ ಮಾಡಲು ಮುಂದಾಗಿದ್ದಾರೆ. ಎಲ್ಲರನ್ನೂ ಒಗ್ಗಟ್ಟಾಗಿ ಕರೆದುಕೊಂಡು ಹೋಗುವವರು ಬೇಕಾಗಿದ್ದಾರೆ’ ಎಂದರು.

‘ಯತ್ನಾಳ ಮತ್ತು ರಮೇಶ ಜಾರಕಿಹೊಳಿ ತಂಡದಿಂದಾಗಿ ವಕ್ಫ್ ಹೋರಾಟಕ್ಕೆ ಯಶಸ್ಸು ಸಿಕ್ಕಿದೆ. ಇದರ ಪರಿಣಾಮ ಜಂಟಿ ಸಂಸದೀಯ ಸಮಿತಿಯಲ್ಲಿ ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದು ಭ್ರಷ್ಟಾಚಾರಕ್ಕೆ ಇತಿಶ್ರೀ ಹಾಡಿದ್ದಾರೆ. ಸಂಸತ್ತಿನಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಅಂಗೀಕಾರವಾಗುತ್ತದೆ’ ಎಂದು ಕುಮಾರ್ ಬಂಗಾರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಸೇಡಂನ 240 ಎಕರೆಯಲ್ಲಿ ನಿರ್ಮಾಣಗೊಂಡಿರುವ ಪ್ರಕೃತಿ ನಗರ

ಭಾರತೀಯ ಸಂಸ್ಕೃತಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಸೇಡಂ ಪಟ್ಟಣದ ಹೊರವಲಯದ 240 ಎಕರೆಯಲ್ಲಿ ತಲೆ ಎತ್ತಿರುವ ಪ್ರಕೃತಿ ನಗರದಲ್ಲಿ ಬುಧವಾರ ಬೆಳಿಗ್ಗೆ 7ನೇ ಆವೃತ್ತಿಯ ಭಾರತೀಯ ಸಂಸ್ಕೃತಿ ಉತ್ಸವಕ್ಕೆ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಕರ್ನಾಟಕ ಅಲ್ಲದೆ, ನೆರೆಯ ಮಹಾರಾಷ್ಟ್ರ, ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಂಜಾಬ್, ಜಾರ್ಖಂಡ್, ತೆಲಂಗಾಣ, ಆಂಧ್ರಪ್ರದೇಶ, ರಾಜಸ್ಥಾನ, ಕೇರಳ ಸೇರಿದಂತೆ ವಿವಿಧ ರಾಜ್ಯಗಳ ಸಹಸ್ರಾರು ಜನರು ಉತ್ಸವದಲ್ಲಿ ಭಾಗವಹಿಸಿದ್ದಾರೆ. ಕಲಬುರಗಿಯಿಂದ ಸೇಡಂಗೆ ತೆರಳುವ ಹೆದ್ದಾರಿ ಪಕ್ಕದಲ್ಲೇ 9 ದಿನಗಳವರೆಗೆ ನಡೆಯಲಿರುವ ಭಾರತೀಯ ಸಂಸ್ಕೃತಿ ಉತ್ಸವದ ಪ್ರಯುಕ್ತ ಮೂರು ಬೃಹತ್ ವೇದಿಕೆಗಳನ್ನು ನಿರ್ಮಿಸಲಾಗಿದ್ದು, ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ರಾಮನಾಥ ಕೋವಿಂದ್, ‘ಭಾರತದಲ್ಲಿ ಬಡತನ ಇದ್ದರೂ ಇಲ್ಲಿನ ಜನರು ಉತ್ಸವ ಪ್ರಿಯರು. ಆ ಮೂಲಕ ಜನರು ಒಗ್ಗೂಡುವುದನ್ನು ಭಾರತೀಯ ಉತ್ಸವಗಳು ಕಲಿಸಿವೆ. ನಮ್ಮ ಹಬ್ಬಗಳು ಪ್ರಕೃತಿಯೊಂದಿಗೆ ಸಮ್ಮಿಳಿತಗೊಂಡಿವೆ. ಕರ್ನಾಟಕದಲ್ಲಿ ಸಂಕ್ರಾಂತಿ, ತಮಿಳುನಾಡಿನಲ್ಲಿ ಪೊಂಗಲ್, ಅಸ್ಸಾಂನಲ್ಲಿ ಬಿಹು ಎಂದು ಗುರುತಿಸಿಕೊಳ್ಳುವ ಹಬ್ಬದ ಆಶಯ ಒಂದೇ ಆಗಿದೆ’ ಎಂದರು.

‘ಭಾರತವು ವಿಶ್ವಕ್ಕೆ ನೀಡಿದ ಪ್ರಮುಖ ಕೊಡುಗೆ ಯೋಗ. ನಾನು ರಾಷ್ಟ್ರಪತಿಯಾಗಿದ್ದ ಸಂದರ್ಭದಲ್ಲಿ ದಕ್ಷಿಣ ಅಮೆರಿಕದ ಸುರಿನೇಮ್ ಮತ್ತು ಕಮ್ಯುನಿಸ್ಟ್ ದೇಶ ಕ್ಯೂಬಾಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿಯೂ ಯೋಗ ಆಚರಿಸಿದ್ದರ ಕುರಿತು ಸರ್ಕಾರದ ಮುಖ್ಯಸ್ಥರು ನನ್ನೊಂದಿಗೆ ಮಾಹಿತಿ ಹಂಚಿಕೊಂಡಿದ್ದರು’ ಎಂದು ತಿಳಿಸಿದರು.

ಭಾರತೀಯ ವಿಕಾಸ ಸಂಗಮದ ಸಂಸ್ಥಾಪಕ ಕೆ.ಎನ್.ಗೋವಿಂದಾಚಾರ್ಯ ಮಾತನಾಡಿ, ‘ಭಾರತೀಯ ಸಂಸ್ಕೃತಿ ಉತ್ಸವದ ಉದ್ದೇಶ ಜಾಗತಿಕವಾಗಿ ಯೋಚಿಸಿ, ಸ್ಥಳೀಯವಾಗಿ ಅನುಷ್ಠಾನಗೊಳಿಸುವುದಾಗಿದೆ. ಶ್ರೀಮಂತರು, ಬಡವರು ಎನ್ನದೇ ಎಲ್ಲ ಸ್ತರದ ವ್ಯಕ್ತಿಗಳು ಈ ಉತ್ಸವದಲ್ಲಿ ಭಾಗವಹಿಸಿ ಚಿಂತನ ಮಂಥನ ನಡೆಸಲಿದ್ದಾರೆ’ ಎಂದರು.

ಭಾರತೀಯ ವಿಕಾಸ ಸಂಗಮದ ಸಂರಕ್ಷಕ ಬಸವರಾಜ ಪಾಟೀಲ ಸೇಡಂ, ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್, ವಿಜಯಪುರ ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ ಮಾತನಾಡಿದರು.



ಕಲಬುರಗಿ ಜಿಲ್ಲೆಯ ಸೇಡಂ ಸಮೀಪದ ಪ್ರಕೃತಿ ನಗರದಲ್ಲಿ ಬುಧವಾರ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಭಾರತೀಯ ಸಂಸ್ಕೃತಿ ಉತ್ಸವಕ್ಕೆ ಚಾಲನೆ ನೀಡಿದರು. ಬಲಬೀರ್ ಸಿಂಗ್, ಬಸವಲಿಂಗ ಸ್ವಾಮೀಜಿ, ಕೆ.ಎನ್. ಗೋವಿಂದಾಚಾರ್ಯ, ಬಸವರಾಜ ಪಾಟೀಲ ಸೇಡಂ, ತೇಜಸ್ವಿನಿ ಅನಂತಕುಮಾರ್, ದಾಕ್ಷಾಯಣಿ ಎಸ್. ಅಪ್ಪ ಭಾಗವಹಿಸಿದ್ದರು
—ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

‘ಏಕಕಾಲಕ್ಕೆ ಚುನಾವಣೆ: ಸಮಯ ಉಳಿತಾಯ’

ಭಾರತದಲ್ಲಿ ಏಕಕಾಲಕ್ಕೆ ಚುನಾವಣೆಗಳು ನಡೆಯುವುದರಿಂದ ಸಾಕಷ್ಟು ಸಮಯ ಉಳಿತಾಯವಾಗುತ್ತದೆ ಎಂದು ‘ಒಂದು ದೇಶ ಒಂದು ಚುನಾವಣೆ’ ಕುರಿತು ಸರ್ಕಾರ ನೇಮಕ ಮಾಡಿದ ಸಮಿತಿಯ ಅಧ್ಯಕ್ಷರೂ ಆದ ರಾಮನಾಥ ಕೋವಿಂದ್ ಅಭಿಪ್ರಾಯಪಟ್ಟರು.

‘ಇದರ ಸಾಧಕ, ಬಾಧಕಗಳ ಬಗ್ಗೆ ಅಧ್ಯಯನ ನಡೆಸಿ 18,526 ಪುಟಗಳ ಬೃಹತ್ ವರದಿಯನ್ನು ತಯಾರಿಸಲಾಗಿದೆ. ಪದೇ ಪದೇ ಚುನಾವಣೆ ನಡೆಯುವುದರಿಂದ ಚುನಾವಣಾ ಕಾರ್ಯಕ್ಕಾಗಿ ಶಾಲಾ ಆವರಣವನ್ನು ಬಳಸಿಕೊಳ್ಳಬೇಕಿರುವುದರಿಂದ ತರಗತಿಗಳು ನಡೆಯದೇ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುವ ಸಾಧ್ಯತೆ ಇದೆ’ ಎಂದು ಅವರು ಪ್ರತಿಪಾದಿಸಿದರು.

ವಸೂಲಿ ಕಿರುಕುಳ ತಡೆ: ಮಸೂದೆಗೆ ಇಂದು ಒಪ್ಪಿಗೆ?

ಒಂದನೇ ಪುಟದಿಂದ...

ಸಚಿವ ಎಚ್‌.ಕೆ. ಪಾಟೀಲ ಮಾತನಾಡಿ, ಮೈಕ್ರೊಫೈನಾನ್ಸ್‌ ಕಂಪನಿಗಳ ಅಧಿಕ ವ್ಯವಹಾರಗಳಿಗೆ ಹೊಸ ಕಾನೂನು ಕಡಿವಾಣ ಹಾಕುವುದಿಲ್ಲ, ಸಾಲ ಏಜೆಂಟ್ ಕೊಡಬೇಕು ಎಂಬ ನಿರ್ಬಂಧವನ್ನೂ ಹೇರುವುದಿಲ್ಲ. ನಿಯಮ ಬಾಹಿರ, ಬಲವಂತದ ಸಾಲ ವಸೂಲಾತಿಗೆ ತಡೆ ಹಾಕಲಾಗುವುದು. ಅಧಿಸೂಚನೆಯವರೆಗೂ ಕಾಯದೇ, ತಕ್ಷಣ ಸುಗ್ರೀವಾಜ್ಞೆ ಹೊರಡಿಸಲಾಗುತ್ತಿದೆ ಎಂದರು.

ಜಿ.ಪರಮೇಶ್ವರ ಮಾತನಾಡಿ, ಸಮಾಜದಲ್ಲಿ ಬಡವರೇ ಅಧಿಕ ಸಂಖ್ಯೆಯಲ್ಲಿ ಕಿರುಸಾಲ ತೆಗೆದುಕೊಳ್ಳುತ್ತಾರೆ. ಅಂಥವರ ಬಳಿ ಸಾಲ ವಸೂಲಿ ಮಾಡಲು ಅಮಾನವೀಯವಾಗಿ ವರ್ತಿಸುವ ಮೈಕ್ರೊಫೈನಾನ್ಸ್‌ ಕಂಪನಿಗಳ ನಡೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ತೊಂದರೆಗೆ ಒಳಗಾದ ಜನರು ದೂರು ನೀಡದಿದ್ದರೂ ಸ್ಥಳೀಯ ಅಧಿಕಾರಿಗಳು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲು ಸೂಚನೆ ನೀಡಲಾಗಿದೆ ಎಂದರು.

ಸಂಸ್ಥೆಗಳು ನೀಡಿದ ಸಾಲದ ಮೇಲಿನ ಲಾಭ ಪ್ರಮಾಣ ಕಡಿಮೆ ಇರಬೇಕು. ಮೈಕ್ರೊಫೈನಾನ್ಸ್‌ ಕಂಪನಿಗಳ ಸಿಬ್ಬಂದಿ ಮೇಲೆ ಮೇಲ್ವಿಚಾರಕರ ಒತ್ತಡವಿರಬಹುದು. ಹಾಗಾಗಿ, ಬಲವಂತದ ಕ್ರಮಕ್ಕೆ ಮುಂದಾಗಿರಬಹುದು. ಈ ಕುರಿತು ಸಮಗ್ರ ಮಾಹಿತಿ ಕಲೆ ಹಾಕಲಾಗುತ್ತಿದೆ. ಜತೆಗೆ, ಜನರಲ್ಲೂ ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು.


ಕೊರಮ- ಕೊರಚರಿಗೆ ಪ್ರತ್ಯೇಕ ವರ್ಗಕ್ಕೆ ಮನವಿ

ಬೆಂಗಳೂರು: ‘ಪರಿಶಿಷ್ಟ ಜಾತಿಗಳಲ್ಲೇ ಅತ್ಯಂತ ಹಿಂದುಳಿದಿರುವ ವಿಮುಕ್ತ ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕ ವರ್ಗವನ್ನು ಸೃಷ್ಟಿಸಬೇಕು’ ಎಂದು ಕೊರಮ, ಕೊರಚ, ಕುರುವನ್, ಕೇಪ್‌ಮಾರಿಸ್ ವೈಜ್ಞಾನಿಕ ಒಳಮೀಸಲಾತಿ ಅನುಷ್ಠಾನ ಹೋರಾಟ ಸಮಿತಿಯು ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ವಿಚಾರಣಾ ಆಯೋಗಕ್ಕೆ ಬುಧವಾರ ಮನವಿ ಸಲ್ಲಿಸಿತು. ಎಂ.ವೆಂಕಟೇಶ್, ಕಿರಣ್ ಕುಮಾರ್ ಕೊತ್ತಗೆರೆ, ಮಹದೇವು, ಗಂಗಾಧರ್ ಮತ್ತು ವಿವಿಧ ಸಮುದಾಯಗಳ ಮುಖಂಡರು ಇದ್ದ ನಿಯೋಗವು ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿತು.

ಕೆಟ್ಟ ಅನುಭವ ಇದು; ಪ್ರಶಸ್ತಿ ಸ್ವೀಕರಿಸಲು ಇನ್ನೊಮ್ಮೆ ಬರಲ್ಲ: ಕಂಬಾರ

‘ಅರಿವೇ ಗುರು’: ಮುಂದೂಡಿಕೆ

ಪ್ರಜಾವಾಣಿ ವಾರ್ತೆ



ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ‘ಅರಿವೇ ಗುರು’ ಪ್ರಶಸ್ತಿ ಸ್ವೀಕರಿಸಲು ಪ್ರೊ.ವಿ.ಜಿ.ತಳವಾರ, ಪ್ರೊ.ಎಸ್‌.ಎಂ.ಬುರ್ಬುರೆ, ಸಾಹಿತಿ ಪ್ರೊ.ಚಂದ್ರಶೇಖರ ಕಂಬಾರ ಮತ್ತು ಪ್ರಶಸ್ತಿ ಪ್ರದಾನ ಮಾಡಲು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಬಂದಿದ್ದರು

> ವಿವಿಧ ಸಂಘಟನೆಯವರು ಗಲಾಟೆ ನಡೆಸಿದ ಕಾರಣ ವಿ.ವಿ ಘನತೆಗೆ ಧಕ್ಕೆ ಉಂಟಾಗುತ್ತದೆ ಎಂಬ ಕಾರಣಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಮುಂದೂಡಿದ್ದೇವೆ
> **ಪ್ರೊ.ಜಯಶ್ರೀ ಎಸ್.**, ಪ್ರಭಾರ ಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ

> ಪ್ರೊ. ಕೃಷ್ಣ ನಾಯಕ ಅವರು ಪಾಲ್ಗೊಳ್ಳುವ ಅವಕಾಶ ನೀಡಬಾರದು ಎಂದು ಕೆಲ ಸಂಘಟನೆಯವರು ಆಗ್ರಹಿಸಿದ್ದರು. ಗಲಾಟೆ ಆಗದಿರಲೆಂದು ಪೊಲೀಸ್ ರಕ್ಷಣೆ ಕೋರಲಾಗಿತ್ತು
> **ಪ್ರೊ.ಸಿ.ಚನ್ನಪ್ಪ**, ಕುಲಸಚಿವ (ಆಡಳಿತ)

ಧಾರವಾಡ: ‘ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಕೃಷ್ಣ ನಾಯಕ ಅವರು ಪ್ರಶಸ್ತಿ ಸಮಾರಂಭದಲ್ಲಿ ಭಾಗವಹಿಸಬಾರದು’ ಎಂಬ ವಿಷಯ ಮತ್ತು ಸ್ನಾತಕ ಪದವಿಯ ಪ್ರಥಮ ಸೆಮಿಸ್ಟರ್‌ನ ‘ಬೆಳಸು’ ಕನ್ನಡ ಪಠ್ಯಪುಸ್ತಕದ ಲೇಖನದ ಆಕ್ಷೇಪದ ಕಾರಣ ವಿಶ್ವವಿದ್ಯಾಲಯವು ‘ಅರಿವೇ ಗುರು’ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬುಧವಾರ ಹಠಾತ್ ಮುಂದೂಡಿತು.

ಪ್ರಶಸ್ತಿ ಸ್ವೀಕರಿಸಲು ಬಂದಿದ್ದ ಸಾಹಿತಿ ಪ್ರೊ.ಚಂದ್ರಶೇಖರ ಕಂಬಾರ, ಪ್ರೊ.ವಿ.ಜಿ. ತಳವಾರ, ಪ್ರೊ.ಎಸ್‌.ಎಂ.ಬುರ್ಬುರೆ ಮತ್ತು ಪ್ರಶಸ್ತಿ ಪ್ರದಾನ ಮಾಡಲು ಬಂದಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ವಾಪಸ್ ತೆರಳಿದರು.

‘ದೇಶದಲ್ಲಿ ಬಹಳಷ್ಟು ಕಡೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ನನ್ನ ಜೀವಮಾನದಲ್ಲಿ ಇಂಥ ಅನುಭವ ಆಗಿರಲಿಲ್ಲ. ಪ್ರಶಸ್ತಿ ನೀಡಲು ಆಹ್ವಾನಿಸಿ, ಈ ರೀತಿ ಮಾಡಿದ್ದು ಸರಿಯೇ? ಇನ್ನೊಮ್ಮೆ ಪ್ರಶಸ್ತಿ ಸ್ವೀಕರಿಸಲು ಇಲ್ಲಿಗೆ ಬರಲ್ಲ’ ಎಂದು ಚಂದ್ರಶೇಖರ ಕಂಬಾರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೃಷ್ಣ ನಾಯಕ ಅವರಿಗೆ ಸಮಾರಂಭದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿ ಎಂದು ವಿದ್ಯಾರ್ಥಿಗಳು ಕೋರಿದರು. ಆದರೆ, ಕೃಷ್ಣ ನಾಯಕ ಅವರು ಪಾಲ್ಗೊಳ್ಳಬಾರದು ಎಂದು ಎಬಿವಿಪಿ ಸಂಘಟನೆಯವರು ಆಗ್ರಹಿಸಿದ್ದರು. ಆದರೆ, ಪ್ರಮುಖರು ಎಲ್ಲರೂ ಸೇರಿ ಸಮಾರಂಭವನ್ನೇ ದಿಢೀರ್ ಮುಂದೂಡಿದರು’ ಎಂದು ಜನಪರ ಸ್ವಾತಂತ್ರ್ಯ ಹಾಗೂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಿವಸೋಮಣ್ಣ ನಿಟ್ಟೂರು ‘ಪ್ರಜಾವಾಣಿ’ಗೆ ತಿಳಿಸಿದರು.

ಇದೆಲ್ಲದರ ಮಧ್ಯೆ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಜಯಶ್ರೀ ಅವರು, ‘ಚಂದ್ರಶೇಖರ ಕಂಬಾರ ಅವರಿಗೆ ಆರೋಗ್ಯ ಸಮಸ್ಯೆಯಾಗಿದೆ’ ಎಂದು ವೈದ್ಯರನ್ನು ಕರೆಸಿದರು.

‘ಚಂದ್ರಶೇಖರ ಕಂಬಾರ ಅವರು ಚೆನ್ನಾಗಿದ್ದಾರೆ. ವೈದ್ಯರನ್ನು ಕರೆಸಿದ್ದು ಏಕೆ?’ ಎಂದು ಕಂಬಾರ ಅವರ ಪುತ್ರ ರಾಜಶೇಖರ ಅವರು ಪ್ರೊ.ಜಯಶ್ರೀ ಅವರನ್ನು ಪ್ರಶ್ನಿಸಿದರು.

‘ಅವರಿಗೆ ಅನಾರೋಗ್ಯವಾಗಿದೆ ಎಂದು ಯಾರೋ ಹೇಳಿದ್ದನ್ನೇ ನಂಬಿ ಗಾಬರಿಯಾಗಿದ್ದೆ. ಕ್ಷಮಿಸಿ’ ಎಂದು ಜಯಶ್ರೀ ತಿಳಿಸಿದರು.

ಕತ್ತಲೆಯಲ್ಲಿ ಶಿಶುಗಳು, ಬಾಣಂತಿಯರ ಪರದಾಟ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಗುಲ್ಬರ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ (ಜಿಮ್ಸ್) ಆವರಣದಲ್ಲಿನ ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ (ಎನ್‌ಐಸಿಯು) ಮಂಗಳವಾರ ರಾತ್ರಿ ವಿದ್ಯುತ್ ಸಂಪರ್ಕವಿಲ್ಲದೆ ಕತ್ತಲೆಯಲ್ಲಿ ನವಜಾತ ಶಿಶುಗಳು, ಬಾಣಂತಿಯರು ಪರದಾಡಿದರು.

ರಾತ್ರಿ 11.20ರ ಸುಮಾರಿಗೆ ಎನ್‌ಐಸಿಯುನಲ್ಲಿ ವಿದ್ಯುತ್ ಸಂಪರ್ಕ ಕಡಿತವಾಯಿತು. ಜನರೇಟರ್ ಸಹ ಚಾಲನೆ ಆಗಲಿಲ್ಲ. ಸುಮಾರು ಒಂದು ಗಂಟೆ ಕತ್ತಲೆಯಲ್ಲಿ ಕಂದಮ್ಮಗಳು ಕಳೆದವು. ನರ್ಸ್ ಹಾಗೂ ವೈದ್ಯರು ಮೊಬೈಲ್ ಟಾರ್ಚ್‌ಗಳ ಮೊರೆ ಹೋದರು.

ನಿಗಾ ಘಟಕ, ಆಸ್ಪತ್ರೆ ಕೊಠಡಿಗಳಲ್ಲಿ ವಿದ್ಯುತ್ ಸಂಪರ್ಕದಲ್ಲಿ ಅಡ್ಡಾವಾಗಿದ್ದರೂ ತಕ್ಷಣಕ್ಕೆ ಸ್ಪಂದನೆ ಸಿಗಲಿಲ್ಲ ಎಂದು ಪೋಷಕರು ದೂರಿದರು.

‘ಎನ್‌ಐಸಿಯುನಲ್ಲಿ ಸುಮಾರು 20 ಮಕ್ಕಳಿದ್ದರು. ಕತ್ತಲೆಯಲ್ಲಿ ಮಕ್ಕಳು ಹೇಗಿದ್ದಾರೆ ಎಂದು ನೋಡಲು ಸಹ ನರ್ಸ್‌ಗಳು ಅನುಮತಿಸಲಿಲ್ಲ. ಒಳಗಡೆ ಸಣ್ಣ- ಸಣ್ಣ ಜನರೇಟರ್‌ಗಳಿವೆ, ಏನೂ ಆಗಲ್ಲ, ವಿದ್ಯುತ್ ಬೇಕಾಗು ಮಕ್ಕಳಿಗೂ ಏನು ಸಂಬಂಧವಿಲ್ಲ ಎಂದು ನೆಪ ಹೇಳಿ ನಮ್ಮನ್ನು ತಡೆದರು. ಪ್ರತಿ ಎರಡು ಗಂಟೆಗೆ ಒಮ್ಮೆ ಮಕ್ಕಳಿಗೆ ಹಾಲು ಕುಡಿಸಬೇಕು. ಹಾಲು ಕುಡಿಸಲು ಸಹ ಬಿಡಲಿಲ್ಲ’ ಎಂದು ಮಗುವಿನ ಪೋಷಕ ಸ್ವಾಮಿ ಹೇಳಿದರು.

‘ವಿದ್ಯುತ್ ಸಂಪರ್ಕದ ವೈರ್ ಸುಟ್ಟಿದ್ದರಿಂದ ಎನ್‌ಐಸಿಯುನಲ್ಲಿ ವಿದ್ಯುತ್ ಸ್ಥಗಿತವಾಯಿತು. ಅದೇ ವೇಳೆ ಜನರೇಟರ್ ಸಹ ಕೆಟ್ಟಿದ್ದರಿಂದ 40 ನಿಮಿಷ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯವಾಗಿದೆ. ತಕ್ಷಣವೇ ಪರ್ಯಾಯ ವ್ಯವಸ್ಥೆ ಮಾಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಎಲ್ಲ ಮಕ್ಕಳು ಆರೋಗ್ಯವಾಗಿದ್ದಾರೆ. ಇಂತಹ ಘಟನೆ ಮರುಕಳಿಸದಿರಲು ಇನ್ನೊಂದು ಜನರೇಟರ್ ಅಥವಾ ಇನ್ವರ್ಟರ್ ಬ್ಯಾಟರಿ ವ್ಯವಸ್ಥೆ ಮಾಡಲಾಗುವುದು’ ಎಂದು ಜಿಲ್ಲಾ ಸರ್ಜನ್ ಡಾ.ರೂಖಿಯಾ ಆಸನಾ ರಬ್ಬ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

‘ಜಾನಪದ ಪರಿಷತ್’ಗೆ ಶಿವರಾಮ ಹೆಗಡೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ವಿದ್ವಾನ್ ಗಣಪತಿ ಭಟ್ಟ

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ವತಿಯಿಂದ ನೀಡಲಾಗುವ ‘ಕೆರೆಮನೆ ಶಿವರಾಮ ಹೆಗಡೆ’ ಪ್ರಶಸ್ತಿಗೆ ಬೆಂಗಳೂರಿನ ‘ಕರ್ನಾಟಕ ಜಾನಪದ ಪರಿಷತ್’ ಆಯ್ಕೆಯಾಗಿದೆ. ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ.

‘ಕೆರೆಮನೆ ಗಜಾನನ ಹೆಗಡೆ’ ಪ್ರಶಸ್ತಿಗೆ ಯಕ್ಷಗಾನ ಭಾಗವತ ಮತ್ತು ಗುರು ವಿದ್ವಾನ್ ಗಣಪತಿ ಭಟ್ಟ ಮೊಟ್ಟೆಗದ್ದೆ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ.

‘ಗುಣವಂತೆಯ ಯಕ್ಷಾಂಗಣದಲ್ಲಿ ಫೆ. 22ರಿಂದ ಮಾರ್ಚ್ 2 ರವರೆಗೆ ನಡೆಯುವ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು’ ಎಂದು ಮಂಡಳಿಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬುದ್ಧಿ ಹೇಳಿದಕ್ಕೆ ಅತ್ತೆ ಕೊಂದ ಅಳಿಯ

ದೇವರಹಿಪ್ಪರಗಿ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಚಿಕ್ಕರೂಗಿ ಗ್ರಾಮದಲ್ಲಿ ಬುದ್ಧಿವಾದ ಹೇಳಲು ಯತ್ನಿಸಿದ ಅತ್ತೆಯನ್ನು ಕೊಂದು, ಆಕೆಯ ಶವವನ್ನು ಚೀಲದಲ್ಲಿ ತುಂಬಿ ಕಾಲುವೆಗೆ ಎಸೆದು ಅಳಿಯ ಪರಾರಿಯಾಗಿದ್ದಾನೆ.

‘ಭೀಮಪ್ಪ ಗುಗ್ಗರಿ ಆರೋಪಿ. ಗೌರಾಬಾಯಿ ಈರಣ್ಣ ನರಳಿ ಕೊಲೆಯಾದವರು. ಮಂಗಳವಾರ ಬೆಳಿಗ್ಗೆ ತೋಟದ ಮನೆಯಲ್ಲಿ ಸಲಿಕೆಯಿಂದ ಹೊಡೆದು ಹತ್ಯೆಗೈದಿದ್ದ.’ ಎಂದು ದೇವರಹಿಪ್ಪರಗಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬ್ಯಾಂಕ್ ಸರ್ವರ್ ಹ್ಯಾಕ್ ಶಂಕೆ: ವಂಚನೆ

ಕಾರವಾರ: ಅಂಕೋಲಾ ಅರ್ಬನ್ ಸಹಕಾರ ಬ್ಯಾಂಕ್‌ನ ಕೆಲ ಗ್ರಾಹಕರ ಖಾತೆಯಿಂದ ನಿಗದಿತ ಗ್ರಾಹಕರ ಖಾತೆಗೆ ಸಂದಾಯ ಆಗಬೇಕಿದ್ದ ₹33,42,895 ಮೊತ್ತ ಅಪರಿಚಿತ ಖಾತೆಗೆ ಸಂದಾಯವಾದ ಬಗ್ಗೆ ಇಲ್ಲಿನ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬ್ಯಾಂಕ್‌ನ ಗ್ರಾಹಕರು ಅನ್ಯ ಖಾತೆಗೆ ಪಾವತಿಸಬೇಕಿದ್ದ ಮೊತ್ತವು ಅಪರಿಚಿತರ ಖಾತೆಗೆ ಸಂದಾಯವಾಗಿದೆ. ಜನವರಿ 24 ರಿಂದ 27ರ ಅವಧಿಯಲ್ಲಿ ನಾಲ್ಕು ಖಾತೆಗಳಿಂದ ಮೊತ್ತ ಬೇರೆ ಬೇರೆ ಖಾತೆಗೆ ಪಾವತಿಯಾಗಿದೆ. ಸೈಬರ್ ವಂಚಕರು ಸರ್ವರ್ ಹ್ಯಾಕ್ ಮಾಡಿರುವ ಶಂಕೆ ಇದೆ’ ಎಂದು ಬ್ಯಾಂಕ್‌ನಿಂದ ದೂರು ಸಲ್ಲಿಕೆ ಆಗಿದೆ.

‘ಸರ್ವರ್ ಹ್ಯಾಕ್ ಆದ ಬಗ್ಗೆ ತನಿಖೆ ನಡೆದಿದೆ. ಆದರೆ, ಸುಮಾರು ₹14 ಲಕ್ಷದಷ್ಟು ಮೊತ್ತವನ್ನು ಬ್ಯಾಂಕ್ ತಡೆ ಹಿಡಿದಿದ್ದು, ದೊಡ್ಡ ಮೊತ್ತದ ವಂಚನೆ ತಪ್ಪಿದೆ’ ಎಂದು ಸಿಇಎನ್ ಪೊಲೀಸ್ ಠಾಣೆಯ ಡಿಎಸ್‌ಪಿ ಅಶ್ವಿನಿ ತಿಳಿಸಿದ್ದಾರೆ.

ಹೃದಯಾಘಾತ: ಬಾಲಕ ಸಾವು

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಚಿಕ್ಕರಾಂಪುರ ಸಮೀಪದ ಅಂಜನಾದ್ರಿಯಲ್ಲಿ ಬೆಟ್ಟದ ಮೆಟ್ಟಿಲು ಏರುತ್ತಿದ್ದ ಬಾಲಕನೊಬ್ಬ ಹೃದಯಾಘಾತದಿಂದ ಬುಧವಾರ ಮೃತಪಟ್ಟಿದ್ದಾನೆ.

ಕೊಪ್ಪಳ ತಾಲ್ಲೂಕಿನ ಹುಲಗಿ ಗ್ರಾಮದ ಜಯೇಶ ಯಾದವ್ (17) ಮೃತ ಬಾಲಕ.

‘ಅಮಾವಾಸ್ಯೆ ಅಂಗವಾಗಿ ದೇವರ ದರ್ಶನ ಪಡೆಯಲು ಸ್ನೇಹಿತರೊಂದಿಗೆ ಬೆಟ್ಟ ಏರುವಾಗ ಮಧ್ಯಾಹ್ನ 3.15 ಗಂಟೆ ವೇಳೆಗೆ ಬೆಟ್ಟದ ತುದಿ ಬಳಿ ಏಕಾಏಕಿ ಸುಸ್ತು ಕಾಣಿಸಿಕೊಂಡು ಜಯೇಶ್ ಅಸ್ವಸ್ಥಗೊಂಡಿದ್ದ. ತಕ್ಷಣವೇ ಆನೆಗೊಂದಿ ಪ್ರಾಥಮಿಕ ಚಿಕಿತ್ಸಾ ಕೇಂದ್ರಕ್ಕೆ ಕರೆದುಕೊಂಡು ಬರಲಾಯಿತು. ಅಲ್ಲಿನ ವೈದ್ಯರು ಗಂಗಾವತಿಗೆ ಕರೆದೊಯ್ಯುವಂತೆ ಸೂಚಿಸಿದರು. ಗಂಗಾವತಿ ಉಪವಿಭಾಗ ಆಸ್ಪತ್ರೆಯಲ್ಲಿ ಪರೀಕ್ಷಿಸಿದ ವೈದ್ಯರು, ಆತ ಮೃತಪಟ್ಟಿದ್ದಾನೆ ಎಂದು ದೃಢಪಡಿಸಿದರು’ ಎಂದು ದೇವಸ್ಥಾನದ ಸಿಬ್ಬಂದಿಯೊಬ್ಬರು ಹೇಳಿದರು.

ಚನ್ನಬಸವ ಸ್ವಾಮೀಜಿಗೆ ಮೃತ್ಯುಂಜಯ-ಮಹಾಂತ ಪ್ರಶಸ್ತಿ



ಧಾರವಾಡ: ಇಲ್ಲಿನ ಮುರುಘಾಮಠ ನೀಡುವ ಮೃತ್ಯುಂಜಯ-ಮಹಾಂತ ಪ್ರಶಸ್ತಿಗೆ ವಿಜಯಪುರ ಜಿಲ್ಲೆ ಬಸವನಬಾಗೇವಾಡಿಯ ಇಂಗಳೇಶ್ವರದ ವಿರಕ್ತಮಠದ ಚನ್ನಬಸವ ಸ್ವಾಮೀಜಿ ಆಯ್ಕೆ ಆಗಿದ್ದಾರೆ. ಪ್ರಶಸ್ತಿಯು ₹ 25 ಸಾವಿರ ನಗದು, 10 ಗ್ರಾಂ ಚಿನ್ನ ಮತ್ತು ಫಲಕ ಒಳಗೊಂಡಿದೆ. ಫೆಬ್ರುವರಿ 2ರಂದು ಮುರುಘಾಮಠದ ಜಾತ್ರಾ ಮಹೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಪ್ರಯತ್ನ ಯಾವಾಗಲೂ ರಹಸ್ಯವಾಗಿರಲಿ, ದೊರೆತ ಫಲ ಮಾತ್ರ ಜನರಿಗೆ ಕಾಣಿಸಲಿ.

-ದ.ರಾ.ಬೇಂದ್ರೆ

ಐಐಟಿ–ಎಂ ನಿರ್ದೇಶಕರ ಅಭಿಪ್ರಾಯಕ್ಕೆ ವೈಜ್ಞಾನಿಕ ಆಧಾರ ಎಲ್ಲಿದೆ?

ಐಐಟಿ–ಮದ್ರಾಸ್ ನಿರ್ದೇಶಕ ವಿ. ಕಾಮಕೋಟಿ ಅವರಿಗೆ ವೈಯಕ್ತಿಕ ನೆಲೆಯಲ್ಲಿ ಯಾವುದೇ ವಿಷಯದ ಬಗ್ಗೆ ಅಭಿಪ್ರಾಯ ಹೊಂದುವ ಹಕ್ಕು ಇದೆ. ಆದರೆ, ಅವರು ದೇಶದ ಮುಂಚೂಣಿ ತಾಂತ್ರಿಕ ಶಿಕ್ಷಣ ಸಂಸ್ಥೆಯೊಂದರ ಮುಖ್ಯಸ್ಥರೂ ಹೌದು. ಹೀಗಾಗಿ, ಅವರಿಗೆ ತಮ್ಮದೇ ಆದ ಕೆಲವು ಜವಾಬ್ದಾರಿಗಳು ಇವೆ. ಈ ಕಾರಣದಿಂದಾಗಿ ಅವರು ಯಾವುದೇ ವಿಷಯದ ಬಗ್ಗೆ ಅಭಿಪ್ರಾಯ ಮಂಡಿಸುವಾಗ ತಮ್ಮ ಮೇಲಿರುವ ಜವಾಬ್ದಾರಿಗಳ ಬಗ್ಗೆ ತುಸು ಆಲೋಚಿಸಬೇಕಾಗುತ್ತದೆ. ಗೋಮೂತ್ರವು ಜ್ವರ ಹಾಗೂ ಜೀರ್ಣಾಂಗ ವ್ಯವಸ್ಥೆಗೆ ಸಂಬಂಧಿಸಿದ ಒಂದು ಬಗೆಯ ಕಾಯಿಲೆಯನ್ನು ಗುಣಪಡಿಸಬಲ್ಲದು ಎಂದು ಕಾಮಕೋಟಿ ಅವರು ಈಚೆಗೆ ಹೇಳಿದ್ದರು. ಜನವರಿ 15ರಂದು ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಗೋಮೂತ್ರದಲ್ಲಿ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರ ವಿರೋಧಿ ಗುಣಗಳು ಇವೆ, ಗೋಮೂತ್ರವು ಜೀರ್ಣಕ್ರಿಯೆಗೆ ಪೂರಕವಾಗುವ ಅಂಶಗಳನ್ನು ಹೊಂದಿದೆ ಎಂದು ಹೇಳಿದರು. ತೀವ್ರ ಜ್ವರದಿಂದ ಬಳಲುತ್ತಿದ್ದ ಸನ್ಯಾಸಿಯೊಬ್ಬರು ಗೋಮೂತ್ರ ಕುಡಿದ ನಂತರ ಜ್ವರದಿಂದ ಗುಣ ಹೊಂದಿದರು ಎಂಬ ಕಥೆಯೊಂದನ್ನು ಕೂಡ ಅವರು ಹೇಳಿದರು. ತಮ್ಮ ಅಭಿಪ್ರಾಯಕ್ಕೆ ಪೂರಕವಾಗಿ ವೈಜ್ಞಾನಿಕ ಸಾಕ್ಷ್ಯಗಳು ಇವೆ ಎಂದರು. ಗೋಮೂತ್ರ, ಸಗಣಿ, ಮೊಸರು, ತುಪ್ಪ ಮತ್ತು ಹಾಲಿನಿಂದ ಸಿದ್ಧಪಡಿಸುವ ಪಂಚಗವ್ಯವನ್ನು ತಾವು ಪ್ರತಿದಿನವೂ ಸೇವಿಸುವುದಾಗಿ ತಿಳಿಸಿದರು.



ಧಾರ್ಮಿಕ ನಂಬಿಕೆಗಳನ್ನು ಆಧರಿಸಿದ ಚಿಂತನೆಗಳು, ಮೂಢನಂಬಿಕೆಗಳು ಮತ್ತು ವೈಜ್ಞಾನಿಕ ಆಧಾರವಿಲ್ಲದ ಮಾತುಗಳಿಗೆ ಮಹತ್ವ ನೀಡುವ ವ್ಯವಸ್ಥೆ ದೇಶದಲ್ಲಿ ಇರುವುದು ವಿಷಾದಕರ

ಆದರೆ ಕಾಮಕೋಟಿ ಅವರ ವಾದವನ್ನು ವಿಜ್ಞಾನಿಗಳು ಹಾಗೂ ವೈದ್ಯರು ಒಪ್ಪುತ್ತಿಲ್ಲ. ಗೋಮೂತ್ರದಲ್ಲಿ ಔಷಧೀಯ ಗುಣಗಳು ಇವೆ ಎಂಬ ಮಾತು ಬಹಳ ಹಳೆಯದು. ಈ ಮಾತಿಗೆ ವಿಜ್ಞಾನ ಲೋಕವು ಮಹತ್ವ ನೀಡುತ್ತಿಲ್ಲ. ಗೋಮೂತ್ರದಲ್ಲಿ 14 ಬಗೆಯ ಬ್ಯಾಕ್ಟೀರಿಯಾಗಳು ಇರುತ್ತವೆ, ಇವು ಮನುಷ್ಯರಲ್ಲಿ ಸೋಂಕಿಗೆ ಕಾರಣವಾಗಬಹುದು ಎಂದು ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ ಹೇಳಿದೆ. 'ಸಾಮಾಜಿಕ ನ್ಯಾಯಕ್ಕಾಗಿ ವೈದ್ಯರ ಸಂಘಟನೆ'ಯು ಕಾಮಕೋಟಿ ಅವರ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಗೋಮೂತ್ರವು ಯಾವ ಕಾಯಿಲೆಯನ್ನೂ ಗುಣಪಡಿಸುವುದಿಲ್ಲ ಎಂದು ಅದು ಹೇಳಿದೆ. ಕಾಮಕೋಟಿ ಅವರು ಹೇಳಿರುವ ಮಾತುಗಳು ಸಮಸ್ಯೆ ಸೃಷ್ಟಿಸಬಹುದು, ಜ್ವರ ಬಂದವರು ಗೋಮೂತ್ರ ಕುಡಿದರೆ ಸಾವು ಸಂಭವಿಸುವ ಸಾಧ್ಯತೆಯೂ ಇದೆ ಎಂದು ಅದು ಎಚ್ಚರಿಸಿದೆ. ಪಂಚಗವ್ಯ ಸೇವನೆಯಿಂದಲೂ ಕೆಟ್ಟ ಪರಿಣಾಮಗಳು ಉಂಟಾಗಬಹುದು ಎಂದು ವೈದ್ಯರ ಸಂಘಟನೆಯು ಹೇಳಿದೆ. ದೇಶಿ ಗೋವಿನ ತಳಿಗಳ ವೈಶಿಷ್ಟ್ಯಗಳ ಬಗ್ಗೆ ಸಂಶೋಧನೆ ನಡೆಸಲು ಮುಂದಾದ ಸರ್ಕಾರದ ಕ್ರಮವನ್ನು ವಿಜ್ಞಾನಿಗಳು ಕೆಲವು ವರ್ಷಗಳ ಹಿಂದೆ ಟೀಕಿಸಿದ್ದರು, ಗೋ ಉತ್ಪನ್ನಗಳಲ್ಲಿ ಔಷಧೀಯ ಮಹತ್ವ ಇದೆ ಎಂಬ ಮಾತುಗಳಿಗೆ ವೈಜ್ಞಾನಿಕ ಆಧಾರ ಇಲ್ಲ ಎಂದು ಹೇಳಿದ್ದರು. ಅಲ್ಲದೆ, ಇಂತಹ ಸಂಶೋಧನೆಗಳು ಜನರ ದುಡ್ಡನ್ನು ಹಾಳುಮಾಡುತ್ತವೆ ಎಂದು ಅವರು ಹೇಳಿದ್ದರು. ಕಾಮಕೋಟಿ ಅವರ ಮಾತುಗಳನ್ನು ಕೆಲವು ರಾಜಕೀಯ ಪಕ್ಷಗಳು ಟೀಕಿಸಿವೆ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಅಥವಾ ಅವರನ್ನು ಆ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿವೆ. ಆದರೆ ಕೆಲವು ವರ್ಗಗಳು ಕಾಮಕೋಟಿ ಅವರ ಮಾತಿಗೆ ಬೆಂಬಲ ವ್ಯಕ್ತಪಡಿಸಿವೆ.

ಕೆಲವು ಪ್ರಮುಖ ವ್ಯಕ್ತಿಗಳು ಗೋಮೂತ್ರದ ವಿಚಾರವಾಗಿ ಇಂಥದ್ದೇ ಹೇಳಿಕೆಗಳನ್ನು ನೀಡಿದ್ದಾರೆ, ಗೋಮೂತ್ರ ಬಳಸುವಂತೆ ಶಿಫಾರಸು ಮಾಡಿದ್ದಾರೆ. ಆದರೆ, ಗೋಮೂತ್ರದ ವಿಚಾರವಾಗಿ ವೈದ್ಯಕೀಯ ಲೋಕ ನೀಡಿರುವ ಎಚ್ಚರಿಕೆಗಳನ್ನು ಅಲಕ್ಷಿಸುತ್ತಿರುವುದು, ಗೋಮೂತ್ರ ಸೇವನೆಯನ್ನು ಬೆಂಬಲಿಸುತ್ತಿರುವುದು ದುರದೃಷ್ಟಕರ ಸಂಗತಿ. ವೈಯಕ್ತಿಕ ನೆಲೆಯಲ್ಲಿ ಕಾಮಕೋಟಿ ಅವರು ಇಂಥದ್ದೊಂದು ಅಭಿಪ್ರಾಯ ಹೊಂದಿ, ಅದಕ್ಕೆ ಅನುಗುಣವಾಗಿ ನಡೆದುಕೊಳ್ಳುವುದಕ್ಕೆ ಸ್ವತಂತ್ರರು. ಆದರೆ, ಅವರು ಐಐಟಿ–ಮದ್ರಾಸ್‌ನ ನಿರ್ದೇಶಕ ಸ್ಥಾನದಿಂದ ಇಂತಹ ಮಾತುಗಳನ್ನು ಆಡಿದಾಗ, ಅವರ ಮಾತುಗಳಿಗೆ ವಿಶ್ವಾಸಾರ್ಹತೆ ದೊರಕುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ವಲಯದಲ್ಲಿ ಮಹತ್ವದ ಹುದ್ದೆಯನ್ನು ಹೊಂದಿರುವ ಅವರು ವೈಜ್ಞಾನಿಕ ಮನೋಭಾವವನ್ನು ಹರಡುವ ಕೆಲಸ ಮಾಡಬೇಕು. ಧಾರ್ಮಿಕ ನಂಬಿಕೆಗಳನ್ನು ಆಧರಿಸಿದ ಚಿಂತನೆಗಳಿಗೆ, ಮೂಢನಂಬಿಕೆಗಳಿಗೆ ಮತ್ತು ವೈಜ್ಞಾನಿಕ ಆಧಾರವಿಲ್ಲದ ಮಾತುಗಳಿಗೆ ಮಹತ್ವ ನೀಡುವ ವ್ಯವಸ್ಥೆ ದೇಶದಲ್ಲಿ ಇರುವುದು ವಿಷಾದಕರ. ಸಾರ್ವಜನಿಕ ಜೀವನದಲ್ಲಿ ನಂಬಿಕೆ, ಧರ್ಮ ಮತ್ತು ರಾಜಕೀಯವನ್ನು ಪರಸ್ಪರ ಬೆರೆಸಲು ಮುಂದಾಗಬಾರದು. ಕಾಮಕೋಟಿ ಅವರು ಕಂಪ್ಯೂಟರ್ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆದವರು, ಅವರು ವೈದ್ಯನ ಕೆಲಸ ಮಾಡಲು ಯತ್ನಿಸಬಾರದು.

ದಿನದ ಟ್ವೀಟ್

ನಿಮ್ಮ ಜೀವಕ್ಕೆ ನೀವೇ ಹೊಣೆ



2011ರಲ್ಲಿ ಶಬರಿಮಲೆಯಲ್ಲಿ ಕಾಲ್ತುಳಿತ. ವೈಕುಂಠ ಏಕಾದಶಿ ಸಂದರ್ಭದಲ್ಲಿ ತಿರುಪತಿಯಲ್ಲಿ ಕಾಲ್ತುಳಿತ. ಈಗ ಕುಂಭಮೇಳದಲ್ಲಿ. ನಿಮ್ಮ ಜೀವಕ್ಕೆ ನೀವೇ ಹೊಣೆ. ಯಾವ ದೇವರೂ ನಿಮ್ಮನ್ನು ಕಾಪಾಡುವುದಿಲ್ಲ.

ಜಗನ್

ಕಿಡಿನುಡಿ

ಬಿ.ವೈ.ವಿಜಯೇಂದ್ರ ಅವರದು ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಜಾಯಮಾನ ಅಲ್ಲ. ದರ್ಪ, ಅಹಂಕಾರವಿದೆ. ಅವರ ಹಿಂಬಾಲಕರು ನನ್ನನ್ನು ಸೋಲಿಸಲು ಪ್ರಯತ್ನಪಟ್ಟಿದ್ದರು. ನಮ್ಮನ್ನು ತುಳಿಯಲು, ಸಮಾಧಿ ಮಾಡಲು ಹೊರಟಿದ್ದಾರೆ.



ಡಾ. ಕೆ.ಸುಧಾಕರ್, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಭಾನುವಾರ, 30-1-2000

• ಸಂವಿಧಾನ: ಸರ್ವಪಕ್ಷಗಳ ಸಭೆಗೆ ತೆಲುಗುದೇಶಂ ಆಗ್ರಹ

ನವದೆಹಲಿ, ಜ. 29 (ಪಿಟಿಐ, ಯುಎನ್‌ಐ)– ಸಂವಿಧಾನ ಪುನರ್‌ವಿಮರ್ಶಿಸಬೇಕು ಎನ್ನುವ ಕೇಂದ್ರ ಸರ್ಕಾರದ ನಿಲುವನ್ನು ಬೆಂಬಲಿಸಿರುವ ತೆಲುಗುದೇಶಂ ಪಕ್ಷ, ಈ ಕುರಿತಂತೆ ಸರ್ವಪಕ್ಷಗಳ ಸಭೆ ಕರೆಯುವಂತೆ ಒತ್ತಾಯಿಸಿದೆ.

'ಸಂವಿಧಾನ ಪರಾಮರ್ಶೆ ಕುರಿತಂತೆ ಎಲ್ಲ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಹಾಗೂ ಯಾವ್ಯಾವ ವಿಷಯಗಳು ಪುನರ್‌ವಿಮರ್ಶೆಗೆ ಯೋಗ್ಯವಾಗಿವೆ ಎನ್ನುವುದನ್ನು ತೀರ್ಮಾನಿಸಬೇಕು' ಎಂದು ಪಕ್ಷದ ವಕ್ತಾರ ಸಿ.ರಾಮಚಂದ್ರಯ್ಯ ಹೇಳಿದ್ದಾರೆ.

ಸಂವಿಧಾನದ ಮೂಲ ಸ್ವರೂಪಕ್ಕೆ ಬದಲಾವಣೆ ತರಲು ಯತ್ನಿಸಿದರೆ ದೇಶದಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಮತ್ತು ಮಾಜಿ ರಕ್ಷಣಾ ಸಚಿವ ಮುಲಾಯಂ ಸಿಂಗ್ ಯಾದವ್ ಅವರು ಎಚ್ಚರಿಕೆ ನೀಡಿದ್ದಾರೆ.

• ಬಾನಂಗಳಕ್ಕೆ ಜಿಗಿದ 800 ನಕ್ಷತ್ರ ಆಮೆಗಳು...

ಬೆಂಗಳೂರು, ಜ. 29– ಇತ್ತೀಚೆಗೆ ಕಳ್ಳ ಸಾಗಣೆದಾರರ ಕಪಿಮುಷ್ಟಿಯಿಂದ ಪಾರಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ತಲುಪಿದ್ದ ಸುಮಾರು ಎಂಟು ನೂರು ಪುಟ್ಟ ನಕ್ಷತ್ರ ಆಮೆಗಳು ಸತ್ತಿವೆ.

ತಮ್ಮ ವಶಕ್ಕೆ ನೀಡುವ ಮುನ್ನ ಒತ್ತೊತ್ತಾಗಿ ಆಮೆಗಳನ್ನು ಪೆಟ್ಟಿಗೆಗಳಲ್ಲಿ ಕೂಡಿಹಾಕಿದ ಕಾರಣ ಉಸಿರುಗಟ್ಟಿ ಈ ರೀತಿ ಸತ್ತಿವೆ ಎಂದು ಅರಣ್ಯ ಇಲಾಖೆಯ ಮೂಲಗಳು ಇಂದು ಪ್ರತಿಪಾದಿಸಿವೆ.

50 ವರ್ಷಗಳ ಹಿಂದೆ

ಗುರುವಾರ, 30-1-1975

• ವಿಗ್ರಹಚೋರರಿಗೆ ಅಪಘಾತ ಸರಣಿ

ಬೆಂಗಳೂರು, ಜ. 29– ಪಂಚಲೋಹದ ನಾಲ್ಕು ವಿಗ್ರಹಗಳು ಬೆಟ್ಟದ ಮೇಲಿನ ಗುಡಿಯಿಂದ ಸ್ಥಾನಪಲ್ಲಟಗೊಂಡಂದಿನಿಂದ ಅವುಗಳನ್ನು ಹೊಂದಲು ಬಯಸಿದವರಿಗೆಲ್ಲ ಕಷ್ಟ–ನಷ್ಟದ ಅನುಭವ. ಕಳೆದ ತಿಂಗಳು ಬ್ರಿಗೇಡ್ ರಸ್ತೆಯಲ್ಲಿ ನಡೆದ ಮೋಟಾರ್ ಸೈಕಲ್ ಅಪಘಾತ ಆ ಸರಣಿಯಲ್ಲಿ ಕೊನೆಯದಾಯಿತು.

ಮೋಟಾರ್ ಸೈಕಲ್ ಅಪಘಾತ ನಾಲ್ಕು ವರ್ಷಗಳ ಹಿಂದೆ ಗುಂಡ್ಲುಪೇಟೆ ಬಳಿಯ ಶ್ರೀ ಹಿಮವತ್ ಗೋಪಾಲಸ್ವಾಮಿ ದೇವಾಲಯದಿಂದ ಕಳವಾದ ನಾಲ್ಕು ಪುರಾತನ ಹಾಗೂ ಅಮೂಲ್ಯ ವಿಗ್ರಹಗಳ ಪತ್ತೆಗೆ ನೆರವಾಯಿತು. ಈ ವಿಗ್ರಹಗಳ ಒಟ್ಟು ಮೌಲ್ಯ ಒಂದು ಲಕ್ಷ ರೂ. ಗಳಿಗೂ ಹೆಚ್ಚಾಗಬಹುದೆಂದು ಅಂದಾಜು ಮಾಡಲಾಗಿದೆ.

• ಸಮ್ಮಿಶ್ರ ಸರ್ಕಾರ ರಾಷ್ಟ್ರಕ್ಕೇ ಅಪಾಯ ಎಂದು ಎ. ಕೆ. ಜಿ.

ಕೊಟ್ಟಾಯಂ, ಜ. 29– ಕೇಂದ್ರ ಮತ್ತು ರಾಜ್ಯಗಳಲ್ಲಿ ಕೇರಳದ ಮಾದರಿಯ ಸಮ್ಮಿಶ್ರ ಸರ್ಕಾರಗಳನ್ನು ರಚಿಸುವುದರಿಂದ ರಾಷ್ಟ್ರಕ್ಕೇ ಭಾರಿ ಅಪಾಯ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಸತ್ ಸದಸ್ಯ ಎ.ಕೆ.ಗೋಪಾಲನ್ ಎಚ್ಚರಿಸಿದ್ದಾರೆ.

ಕೇರಳದಲ್ಲಿನ ಸಮ್ಮಿಶ್ರ ಸರ್ಕಾರವು ಇತರ ರಾಜ್ಯಗಳಲ್ಲಿನ ಕಾಂಗ್ರೆಸ್ ಸರ್ಕಾರಗಳಿಗಿಂತ ಕೆಟ್ಟದಾಗಿದೆ ಎಂಬುದು ಈಗಾಗಲೇ ಸ್ಥಿರಪಟ್ಟಿದೆ ಎಂದಿದ್ದಾರೆ.

ಸಮ್ಮಿಶ್ರ ಸರ್ಕಾರ ರಚಿಸಬೇಕೆಂದು ಸಿ.ಪಿ.ಐ. ನಾಯಕರು ವಿಜಯವಾಡದಲ್ಲಿ ನೀಡಿದ ಕರೆಗೆ ಅವರು ಪ್ರತಿಕ್ರಿಯೆ ವ್ಯಕ್ತಪಡಿಸಿ 'ಕೇರಳದಲ್ಲೇ ಸಿ.ಪಿ.ಐ. ಏನನ್ನೂ ಸಾಧಿಸಿಲ್ಲ' ಎಂದು ಹೇಳಿದರು.

ಸಮುದಾಯಗಳು ಒಳಿತಿಗಾಗಿ ನಡೆಸುವ ಎಲ್ಲ ಪ್ರಯತ್ನಗಳಲ್ಲಿ ಗಾಂಧಿ ಇರುತ್ತಾರೆ

ಮರುಹುಟ್ಟು ಪಡೆವ ಮಹಾತ್ಮ



ರಾಜಾರಾಮ ತೋಳ್ಪಾಡಿ
ನಿತ್ಯಾನಂದ ಬಿ. ಶೆಟ್ಟಿ

ಮಹಾತ್ಮ ಗಾಂಧಿಯವರ ಪರಮಾಪ್ತ ಶಿಷ್ಯರಲ್ಲಿ ಒಬ್ಬರಾದ ಸಮಾಜವಾದಿ ನಾಯಕ ಮತ್ತು ಚಿಂತಕ ರಾಮಮನೋಹರ ಲೋಹಿಯಾ ಅವರು ತಮ್ಮ ಕಾಲದ ರಾಜಕಾರಣದ ಹಿನ್ನೆಲೆಯಲ್ಲಿ ಮೂರು ಬಗೆಯ ಗಾಂಧಿ ಚಿಂತನೆಯ ಮಾದರಿಗಳನ್ನು ನಮ್ಮ ಮುಂದಿರಿಸಿದ್ದಾರೆ. ಅವುಗಳೆಂದರೆ, 'ಆಶ್ರಮ ಗಾಂಧಿವಾದ', 'ಸರ್ಕಾರಿ ಗಾಂಧಿವಾದ' ಮತ್ತು 'ಪ್ರತಿರೋಧದ (ಸತ್ಯಾಗ್ರಹದ) ಗಾಂಧಿವಾದ'.

ಗಾಂಧಿಯವರ ಬಗ್ಗೆ ವೈಯಕ್ತಿಕ ನಿಷ್ಠೆ, ಸಾರ್ವಜನಿಕ ಜೀವನದಲ್ಲಿ ಪಾರದರ್ಶಕತೆ ಹಾಗೂ ಸ್ವಚ್ಛವಾದ ನೈತಿಕ ಬದುಕು 'ಆಶ್ರಮ ಗಾಂಧಿವಾದ'ದ ಗುಣಲಕ್ಷಣಗಳು. ಲೋಹಿಯಾ ಅವರ ಪ್ರಕಾರ, ಆಚಾರ್ಯ ವಿನೋಬಾ ಭಾವೆ ಅವರು ಆಶ್ರಮ ಗಾಂಧಿವಾದಕ್ಕೆ ಸಮರ್ಪಕ ನಿದರ್ಶನ.

ಸ್ವಾತಂತ್ರ್ಯೋತ್ತರ ಭಾರತದ ರಾಜ್ಯ- ಪ್ರಭುತ್ವ, ತನ್ನ ಕಾರ್ಯಕ್ರಮಗಳಿಗೆ ನ್ಯಾಯಸಮ್ಮತಿಯನ್ನು ಪಡೆದುಕೊಳ್ಳುವ ನೆಲೆಯಲ್ಲಿ ಗಾಂಧಿಯವರನ್ನು ಉಪಯೋಗಿಸಿಕೊಳ್ಳುವುದೇ ಸರ್ಕಾರಿ ಗಾಂಧಿವಾದ. ಗಾಂಧಿ ಚಿಂತನೆಯ ಈ ಮಾದರಿಗೆ ಗಾಂಧಿಯವರು ಪ್ರತಿನಿಧಿಸುವ ಯಾವ ತಾತ್ವಿಕ ವಿಚಾರಗಳಲ್ಲಿಯೂ ಸಹಮತವಿಲ್ಲ. ಹಾಗಿದ್ದೂ ಭಾರತದ ರಾಜ್ಯ- ಪ್ರಭುತ್ವದ ಎಲ್ಲ ಚಟುವಟಿಕೆಗಳಲ್ಲಿಯೂ ಗಾಂಧಿ ಉತ್ಸವಮೂರ್ತಿಯಾಗಿ ಕಾಣಿಸಿಕೊಳ್ಳುತ್ತಾರೆ. ಲೋಹಿಯಾ ಅವರು ಗಾಂಧಿ ಚಿಂತನೆಯ ಈ ಮಾದರಿಗೆ ಪಂಡಿತ್ ಜವಾಹರಲಾಲ್ ನೆಹರೂ ಸೂಕ್ತ ನಿದರ್ಶನ ಎನ್ನುತ್ತಾರೆ. ಗಾಂಧಿ ಚಿಂತನೆಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರುವ ಮತ್ತು ಗಾಂಧಿ ಚಿಂತನೆಯನ್ನು ಸ್ತಬ್ಧಚಿತ್ರವಾಗಿಸಿರುವ ಈಗಿನ ಪ್ರಭುತ್ವ ವನ್ನು ಲೋಹಿಯಾ ಹೇಗೆ ವಿವರಿಸುತ್ತಿದ್ದರು ಎಂಬುದು ಬೇರೆಯೇ ಆದ ಸಂಗತಿ.

ತಮ್ಮನ್ನು ಮತ್ತು ತಮ್ಮಂತಹ ಬಂಡುಕೋರ ಸಮಾಜವಾದಿಗಳನ್ನು ಪ್ರತಿರೋಧದ ಗಾಂಧಿವಾದದ ಮಾದರಿಯಲ್ಲಿ ಗುರುತಿಸುವ ಲೋಹಿಯಾ, ಎಲ್ಲ ಬಗೆಯ ಅಧಿಕಾರಿಶಾಹಿಯನ್ನು ವಿರೋಧಿಸುವ ಮತ್ತು ಜನಸಮುದಾಯಗಳ ಅಸ್ತಿತ್ವ- ಅಸ್ಮಿತೆಗಳನ್ನು ಎತ್ತಿಹಿಡಿಯುವ ಮಾದರಿಯೇ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಗಾಂಧಿಯವರು ಮರುಕಳಿಸುವ ನಿಜವಾದ ಬಗೆ ಎಂದು ತಿಳಿಯುತ್ತಾರೆ. ಅಧಿಕಾರಕ್ಕೆ ಎದುರಾಗಿ ಸತ್ಯವನ್ನು ಹೇಳುವ ಸತ್ಯಾಗ್ರಹಿ ಗಾಂಧಿವಾದವೇ ನಿಜವಾದ ಗಾಂಧಿ ಚಿಂತನೆ ಎಂದು ಲೋಹಿಯಾ ಪರಿಭಾವಿಸುತ್ತಾರೆ.

ಗಾಂಧಿಯವರಿಗೆ ಸತ್ಯದ ಅರಿವು ಬೇರೆಯಲ್ಲ ಮತ್ತು ಈ ಅರಿವಿನಿಂದ ರೂಪುಗೊಳ್ಳುವ ಇರವು ಬೇರೆಯಲ್ಲ. ಆದ್ದರಿಂದಲೇ ಸತ್ಯದರ್ಶನ ಎಂಬುದು ಗಾಂಧಿಯವರಿಗೆ ಬರೀ ಅರಿವಿನ ಸಾಕ್ಷಾತ್ಕಾರವಾಗದೆ, ಅದು ದಿನನಿತ್ಯದ ಬದುಕಿನಲ್ಲಿ ಅನುಷ್ಠಾನಗೊಳಿಸಬೇಕಾದ ಹಾಗೂ ಆಗ್ರಹಿಸಬೇಕಾದ ವಿದ್ಯಮಾನವಾಗಿತ್ತು.

ಮೊದಲು ಸದಾಗ್ರಹವಾಗಿ, ನಂತರ ಸತ್ಯಾಗ್ರಹವಾಗಿ ರೂಪಾಂತರಗೊಂಡ ಗಾಂಧಿಯವರ ನೈತಿಕ ರಾಜಕಾರಣವು ಅವರ ಬದುಕಿನ ವಿವಿಧ ಘಟ್ಟಗಳಲ್ಲಿ ಮೈತಳೆದುಕೊಂಡು ಬಂದಿರುವುದನ್ನು ನಾವೆಲ್ಲರೂ ಬಲ್ಲವರಾಗಿದ್ದೇವೆ. 'ಸತ್ಯಹರಿಶ್ಚಂದ್ರ' ನಾಟಕದಲ್ಲಿ ಸತ್ಯಕ್ಕಾಗಿ ಇನ್ನಿಲ್ಲದ ಬವಣೆ ಅನುಭವಿಸುವ ಹರಿಶ್ಚಂದ್ರನ ಕಥೆ, ಸತ್ಯದ ಅರಿವನ್ನು ಮೂಡಿಸಿದ ಅವರ ಮೊದಲನೆಯ ಹಂತವಾದರೆ, ಸ್ವಂತಿಕೆಗಾಗಿ ಮೌನವ್ರತ ಹಿಡಿಯುವ ಅಥವಾ ಉಪವಾಸ ನಡೆಸುವ ಗಾಂಧಿಯವರ ತಾಯಿ, ಅವರ ಸತ್ಯಾಗ್ರಹದ ಅನುಭೂತಿಯ ಇನ್ನೊಂದು ಮಜಲು. ತಮ್ಮ ಬಾಲ್ಯದ ಅನೇಕ ಬಗೆಯ ಘಟನಾವಳಿಗಳ ಮೂಲಕ ಸತ್ಯದ ಪಾವಿತ್ರ್ಯವನ್ನು ಹಾಗೂ ಸತ್ಯಾಗ್ರಹದ ಅನಿವಾರ್ಯವನ್ನು ಕಂಡುಕೊಂಡ ಗಾಂಧಿಯವರಿಗೆ ಸತ್ಯವು ಬರೀ ವಸ್ತುಸತ್ಯವಾಗಿರಲಿಲ್ಲ. ಅದು ಆಧ್ಯಾತ್ಮಿಕ ಸ್ವರೂಪದ, ನೈತಿಕ ಮೀಮಾಂಸೆಯ ದಾರ್ಶನಿಕ ನೋಟವಾಗಿತ್ತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಗಾಂಧಿಯವರಿಗೆ ಸತ್ಯದ ಅರಿವು ಹಾಗೂ ಅದರ ಆಗ್ರಹ, ನೈತಿಕ ಶರೀರದಿಂದ ಬೇರ್ಪಡಿಸಲಾಗದ ಸಾವಯವ ಅಂಗಾಂಗಗಳು.

ದಕ್ಷಿಣ ಆಫ್ರಿಕಾದ ತಮ್ಮ ಸಾರ್ವಜನಿಕ ಜೀವನದಲ್ಲಿ ಗಾಂಧಿ, ಅನ್ಯಾಯದ ವಿರುದ್ಧ ಸತ್ಯಾಗ್ರಹವೆನ್ನುವ ನೈತಿಕ ಪ್ರತಿಭಟನೆಯ ಹೊಸ ಮಾದರಿಯ ಹೋರಾಟದ ರೂಪು-ರೇಷೆಗಳನ್ನು ಕಂಡುಕೊಳ್ಳುತ್ತಾರೆ. ಚಾರಿತ್ರಿಕ ನಿರ್ದಿಷ್ಟತೆಯಲ್ಲಿ ಅದು ವರ್ಣಭೇದ ನೀತಿಯ ವಿರುದ್ಧ ಭಾರತೀಯರ ಪ್ರತಿಭಟನೆಯಾಗಿ ಕಾಣಿಸಿದ್ದರೂ ವಿಶಾಲವಾದ ಅರ್ಥದಲ್ಲಿ ಅದು ಎಲ್ಲ ಬಗೆಯ ಅಧಿಕಾರಿಶಾಹಿ ಕಾರ್ಯಗಳಿಗೆ ವಿರೋಧವಾಗಿರುವ ಮತ್ತು ಬದಿಗೆ ಸರಿಸಲ್ಪಟ್ಟ ಜನಸಮುದಾಯಗಳ ನೈತಿಕ ಪ್ರತಿರೋಧದ ರೂಪಕವಾಗಿದೆ. ಮೊದಲು ದಕ್ಷಿಣ ಆಫ್ರಿಕಾದಲ್ಲಿ ಚಿಗುರೊಡೆದು ನಂತರ ಭಾರತದ ಸ್ವಾತಂತ್ರ್ಯ ಹೋರಾಟದ ಕಾವಿನಲ್ಲಿ ಪಕ್ವಗೊಂಡ ಸತ್ಯಾಗ್ರಹವೆನ್ನುವ ಈ ಅಹಿಂಸಾ ಮಾರ್ಗದ ಹೋರಾಟವು ಮನುಷ್ಯಕುಲಕ್ಕೆ ಮಹಾತ್ಮರು ಸಲ್ಲಿಸಿದ ಅತಿಶ್ರೇಷ್ಠ ಕೊಡುಗೆ.

ಅಮೆರಿಕದ ದಾರ್ಶನಿಕ ಚಿಂತಕ ಥೋರೋ ಅವರ 'ನಾಗರಿಕ ಅವಿಧೇಯತೆ'ಯ ಪರಿಕಲ್ಪನೆಯನ್ನು ಗಾಂಧಿ, ಅಹಿಂಸಾ ಮಾದರಿಯ ನೈತಿಕ ಪ್ರತಿಭಟನೆಯ ಒಂದು ಅಸಾಧಾರಣ ರಾಜಕೀಯ ಕ್ರಿಯೆಯಾಗಿ ಪರಿವರ್ತಿಸಿದರು. 'ತಾಯಿ, ಮಡದಿಯಿಂದ ಸತ್ಯಾಗ್ರಹದ ಮೊದಲ ಪಾಠಗಳನ್ನು ಕಲಿತೆ' ಎನ್ನುವ ಗಾಂಧಿ, ಸತ್ಯಾಗ್ರಹವನ್ನು ದುಷ್ಟಶಕ್ತಿ ಎದುರು ಆತ್ಮಶಕ್ತಿಯ ಪ್ರಯೋಗವೆನ್ನುತ್ತಾರೆ.



ಹೀಗಾಗಿ, ಸತ್ಯಾಗ್ರಹವೆಂಬುದು ಆಕ್ರಮಣಶೀಲ ಪೌರುಷದ ಮುಂದೆ ಸಂಯಮದ ಮೌನಕ್ರಾಂತಿಯೂ ಆಗಿದೆ.

ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ಗಾಂಧಿಯವರು ನಡೆಸಿದ ಸತ್ಯಾಗ್ರಹ ಹಾಗೂ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ನಾಯಕತ್ವದಲ್ಲಿ ಸಂಘಟಿಸಲ್ಪಟ್ಟ ಸತ್ಯಾಗ್ರಹವು ಶಾರೀರಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಪೂರ್ವಸಿದ್ಧತೆಗಳ ಮೇಲೆಯೇ ನಿರ್ವಹಿಸಲ್ಪಟ್ಟಿದೆ. ಎಲ್ಲ ಮನುಷ್ಯರಲ್ಲೂ ಕೆಡುಕು ಇರಬಹುದು ಮತ್ತು ಪ್ರತಿಯೊಬ್ಬರಲ್ಲೂ ಆ ಕೆಡುಕನ್ನು ಗೆಲ್ಲುವುದಕ್ಕೆ ಬೇಕಾದ ನೈತಿಕ ಸಾಮರ್ಥ್ಯವಿರುತ್ತದೆ ಎಂಬ ನಂಬಿಕೆಯೇ ಗಾಂಧಿಯವರಲ್ಲಿ ಕಂಡುಬರುವ ಸ್ಥಾಯೀಭಾವ.

ದುಷ್ಟತನ ಮನುಷ್ಯರ ಮೂಲ ಸ್ವಭಾವವೇ ಆಗಿದ್ದರೂ ಅದನ್ನೂ ಮೀರಿ ನಿಲ್ಲುವ ನೈತಿಕ ಸಾಮರ್ಥ್ಯ ಮನುಷ್ಯ ಚೈತನ್ಯದಲ್ಲಿದೆ ಎಂಬ ಅಚಲ ವಿಶ್ವಾಸವೇ ಗಾಂಧಿಯವರ ಸತ್ಯಾಗ್ರಹವೆನ್ನುವ ಕರ್ಮಯೋಗದ ಅವಿಭಾಜ್ಯ ಭಾಗವಾಗಿರುವ ಹೃದಯ ಪರಿವರ್ತನೆಯ ರಾಜಕಾರಣದ ಜೀವನಾಡಿ. ಇದುವೇ ಅವರನ್ನು, ಇಡೀ ಜಗತ್ತು ದುರುಳರೆಂದು ಭಾವಿಸಿರುವ ತಮ್ಮ ಕಾಲದ ಈರ್ವರು ಸರ್ವಾಧಿಕಾರಿಗಳ ಜೊತೆಗೆ ಸಂವಾದ ನಡೆಸುವಂತೆ ಪ್ರೇರೇಪಿಸಿತು. 'ನನ್ನ ಪ್ರೀತಿಯ ಗೆಳೆಯ' ಎಂದು ಹಿಟ್ಲರ್‌ನನ್ನು ಸಂಬೋಧಿಸಿ ಅವರು ಬರೆದ ಪತ್ರ ಮತ್ತು ಕ್ರೈಸ್ತ ಧರ್ಮಗುರು ಪೋಪ್ ಅವರೂ ಮಾತನಾಡಲು ಹಿಂಜರಿಯುತ್ತಿದ್ದ ಮುಸ್ಸಲೋನಿ ಜೊತೆಗೆ ಅವರು ನಡೆಸಿದ ಸಂಕ್ಷಿಪ್ತ ಸಂವಾದವು ಗಾಂಧಿಯವರ ಹೃದಯ ಪರಿವರ್ತನೆಯ ರಾಜಕಾರಣದ ಎರಡು ಅಸಾಧಾರಣ ನಿದರ್ಶನಗಳು.

ಅಹಿಂಸೆ ಎನ್ನುವ ಅನನ್ಯ ಭಾವ, ಹೃದಯ ಪರಿವರ್ತನೆಯ ರಾಜಕಾರಣ ಹಾಗೂ ಮಾನವನ ನೈತಿಕ ವ್ಯಕ್ತಿತ್ವದ ಬಗೆಗೆ ಗಾಢ ನಂಬಿಕೆ ಇವುಗಳ ಕೂಡಲಸಂಗಮದಲ್ಲಿ ಗಾಂಧಿಯವರ ಸತ್ಯಾಗ್ರಹವೆನ್ನುವ ಕರ್ಮಯೋಗ ಅನಾವರಣಗೊಳ್ಳುತ್ತದೆ.

ಲೋಹಿಯಾ ಅವರು ಲೋಕದ ಮುಂದಿರಿಸಿದ ಗಾಂಧಿ ಚಿಂತನೆಯ ಮೂರು ಮಾದರಿಗಳನ್ನು ನಮ್ಮ ಕಾಲಘಟ್ಟದಲ್ಲಿ ಅರ್ಥಮಾಡಿಕೊಳ್ಳುವುದು ಹೇಗೆ? ಎಲ್ಲ ಹಂತಗಳಲ್ಲೂ ಮೂಲಭೂತ ಪಲ್ಲಟಗಳನ್ನು ಎದುರಿಸುತ್ತಿರುವ ಈ ಕಾಲವನ್ನು ಸತ್ಯೋತ್ತರ ಕಾಲವೆಂದು ಅನೇಕರು ಬಣ್ಣಿಸಿದ್ದಾರೆ. ಸತ್ಯವೇ ಇಲ್ಲದಿರುವ, ಸುಳ್ಳನ್ನೇ ಸತ್ಯವೆಂದು ನಂಬಿಸುವ ಇಂದಿನ ಆಸ್ಥಾನ ರಾಜಕಾರಣಕ್ಕೆ ಗಾಂಧಿ ನುಂಗಲಾರದ ತುತ್ತು. ಗಾಂಧಿಯೆಂಬ ಅನಪೇಕ್ಷಣೀಯ ವಿದ್ಯಮಾನವನ್ನು ಅಪಮೌಲ್ಯಗೊಳಿಸುವ ಸಕಲ ಪ್ರಯತ್ನವನ್ನೂ ಅಧಿಕಾರ ರಾಜಕಾರಣ ಮಾಡುತ್ತಿದೆ.

ಉಪಯುಕ್ತತೆಯೇ ಪರಮತತ್ವ, ವಾಣಿಜ್ಯ- ವ್ಯವಹಾರವೇ ನೈಜ ಕಾಯಕ, ಬಂಡವಾಳವೇ ಪರಬ್ರಹ್ಮ ಎಂದು ಪರಿಭಾವಿಸಿರುವ ಈ ಕಾಲದಲ್ಲಿ ಯಾವ ರೂಪದಲ್ಲಿಯೂ ಗಾಂಧಿಯವರು ಅಸ್ತಿತ್ವದಲ್ಲಿಲ್ಲ. ಹಾಗಿದ್ದೂ ಜನಸಮುದಾಯಗಳು ಅಸ್ತಿತ್ವಕ್ಕಾಗಿ ನಡೆಸುವ ಹೋರಾಟಗಳಲ್ಲಿ, ಬದಿಗೆ ಸರಿಸಲ್ಪಟ್ಟ ಜನವರ್ಗಗಳು ನ್ಯಾಯ ಮತ್ತು ಸಮಾನತೆಗಾಗಿ ನಡೆಸುವ ಆಂದೋಲನಗಳಲ್ಲಿ, ಯುದ್ಧದ ನಡುವೆಯೂ ಶಾಂತಿಗಾಗಿ ನಡೆಯುವ ಪ್ರಯತ್ನಗಳಲ್ಲಿ, ನಿಸರ್ಗದ ನಿರ್ಲಜ್ಜ ಶೋಷಣೆಯ ವಿರುದ್ಧ ನಡೆಯುವ ಪ್ರತಿಭಟನೆಗಳಲ್ಲಿ ಗಾಂಧಿ ಮರುಹುಟ್ಟು ಪಡೆಯುತ್ತಾರೆ. ಅಧಿಕಾರಿಶಾಹಿ ಆರ್ಭಟ ಮತ್ತು ಅಭಿವೃದ್ಧಿಯ ಅಟ್ಟಹಾಸಗಳ ನಡುವೆ ಲೋಹಿಯಾ ಹೇಳುವ ಸತ್ಯಾಗ್ರಹಿ ಗಾಂಧಿ ಮತ್ತೆಮತ್ತೆ ನೆನಪಾಗುತ್ತಾರೆ.

ಚುರುಮುರಿ



ದೆಹಲಿ ಭಾಗ್ಯಗಳು

• ಆನಂದ

'ನಾವು ದೆಹಲೀಲಿ ಇರಬೇಕಿತ್ತು' ಎಂದು ಮಡದಿ ಇಂಗಿತ ವ್ಯಕ್ತಪಡಿಸಿದಾಗಲೇ ಮೈ ನಡುಗಿತು. ಗಂಟಲ ಕೆರೆತವಾಯಿತು. 'ಅಯ್ಯೋ! ಅಲ್ಲಿ ಚಳಿ ಹೆಚ್ಚು, ವಾಯುಗುಣ ಕೆಟ್ಟಿದೆ' ಎಂದೆ.

'ಸೊ ವಾಟ್? ಅಲ್ಲಿ ಜನರಿಲ್ವೆ ಈಗ?'

'ದೆಹಲಿ ಮೇಲೆ ಏಕೆ ಖಾಯಿಷ್ ಈಗ?'

'ಅಲ್ಲಿ ಲೇಟೆಸ್ಟ್ ಭಾಗ್ಯ ಎಂದರೆ ಕೇಜಿಯಿಂದ ಪೀಜಿವರೆಗೆ ಫ್ರೀ...'

'ಹೌದೆ! ಯಾವುದು ಎಷ್ಟು ಕೇಜಿ ಫ್ರೀ?' ನಾನು ಕೇಳಿದೆ ಸಂಭ್ರಮದಿಂದ.

'ನಿಮಗೆ ಯಾವಾಗಲೂ ರೇಷನ್‌ದೇ ಚಿಂತೆ. ಮಕ್ಕಳಿಗೆ ಕೇಜಿ ಕ್ಲಾಸ್ ಉಚಿತ. ಹಾಗೇ ಪೀಜಿ ಅಂದರೆ ಪೋಸ್ಟ್ ಗ್ರ್ಯಾಜುಯೇಟ್‌ವರೆಗೆ ಫೀಸ್ ಮನ್ನಾ. ಕೇಜ್ರಿವಾಲ್ ಘೋಷಿಸಿದ್ದಾರೆ'.

'ಗ್ರೇಟ್. ಪೀಜಿಗಿಂತ ಕೇಜಿನೆ ದುಬಾರಿ ಈಗ'.

'ಕೇಜ್ರಿವಾಲರು ಗೆದ್ದರೆ ನನ್ನಂತಹವರಿಗೆ ತಿಂಗಳಿಗೆ 2,100 ರೂಪಾಯಿ ಮಾಸಾಶನ. ಅದೇ ಬಿಜೆಪಿ ಅಥವಾ ಕಾಂಗ್ರೆಸ್ ಗೆದ್ದರೆ ಇನ್ನೂ 400 ಜಾಸ್ತಿ. ನೀವು ಕೊಡೋ ದುಡ್ಡು ನನಗೆ ಸಾಕಾಗ್ತಿಲ್ಲ' ಎಂದು ದೂರಿದಳು. 'ಅಷ್ಟೇ ಅಲ್ಲ. ನಿಮಗೆ ಹೇಗೂ ವಯಸ್ಸಾಗ್ತಿದೆ. 60ರಿಂದ 70 ವರ್ಷದವರಿಗೆ ತಿಂಗಳಿಗೆ 2,500 ರೂಪಾಯಿ ಭತ್ಯೆ. 70 ದಾಟಿದರೆ 3,000 ರೂಪಾಯಿ. ಉಚಿತ ಚಿಕಿತ್ಸೆ. ಮಕ್ಕಳ ಮೇಲೆ ಡಿಪೆಂಡಾಗಬೇಕಿಲ್ಲ' ಎಂದು ಸೇರಿಸಿದಳು.

'ಅನೇಕ ಮಕ್ಕಳೇ ಅಪ್ಪನ ಮೇಲೆ ಡಿಪೆಂಡಾಗಿದಾರಲ್ಲ ನಿರುದ್ಯೋಗಿಗಳಾಗಿ' ಎಂದು ನೆನಪಿಸಿದೆ.

'ಅಂತಹವರಿಗೆ 8,500 ರೂಪಾಯಿ ತಿಂಗಳಿಗೆ ಸಿಗಲಿದೆ. ಅವರೇನಾದರೂ ಸಿವಿಲ್ ಸರ್ವೀಸ್ ಪರೀಕ್ಷೆಗೆ ಕಟ್ಟಿದರೆ ತಿಂಗಳಿಗೆ 15,000 ರೂಪಾಯಿ ಖರ್ಚಿಗೆ ಕೊಡ್ತಾರಂತೆ. ಆಟೊ ಚಾಲಕರ ಮಕ್ಕಳು ಯಾವುದಾದರೂ ಎಂಟ್ರನ್ಸ್ ಪರೀಕ್ಷೆಗೆ ಕೂತರೆ ಆ ಶುಲ್ಕ ಭಾಗ್ಯ ಇರುತ್ತಂತೆ'.

'ಇನ್ನು ಬೇರೆಯವರಿಗೆ ಬೇರೆ ಏನು ಭಾಗ್ಯ?'

'ಪೂಜಾರಿಗಳಿಗೆ ತಿಂಗಳಿಗೆ 18,000 ರೂಪಾಯಿ ಸಂಬಳ. ಗರ್ಭಿಣಿಯರಿಗೆ 21,000 ರೂಪಾಯಿ ಭಕ್ಷೀಸ್. ಮಗಳಿಗೆ ಮದುವೆ ಮಾಡಲು ಒಂದು ಲಕ್ಷ ರೂಪಾಯಿ ಅಪ್ಪನಿಗೆ...'

'ದಿಲ್ಲಿ ಚಲೊ...' ಎಂದೆ.

'ನೋಡಿ ನಿಮಗೂ ಈಗ ದೆಹಲಿ ಖಾಯಿಷ್' ಎಂದಳು.

ಸಂಗತ

ಪತ್ನಿಗೂ ಸಿಗಲಿ ಸಾಧನೆಯ ಗೌರವ

ಸಾಧಕನ ಪತ್ನಿಯ ಶ್ರಮದ ಬಗ್ಗೆಯೂ ಉಲ್ಲೇಖಿಸುವ ಸಂಸ್ಕೃತಿ ರೂಪುಗೊಳ್ಳಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

'ಪೋರಬಂದರ್ ನಗರಕ್ಕೆ ಹೋದ ಎಲ್ಲ ಪ್ರವಾಸಿಗರು, ದೇಶ–ವಿದೇಶಗಳ ಗಣ್ಯರು ಗಾಂಧೀಜಿ ಜನಿಸಿದ ಮನೆ ನೋಡಲು ಆಸಕ್ತಿಯಿಂದ ಭೇಟಿ ನೀಡುತ್ತಾರೆ. ಆದರೆ ಅದೇ ನಗರದ ಇನ್ನೊಂದು ಮಗ್ಗುಲಲ್ಲಿರುವ ಕಸ್ತೂರ ಬಾ ಜನಿಸಿದ ಮನೆ ನೋಡಲು ಬೆರಳೆಣಿಕೆಯಷ್ಟು ಜನರೂ ಹೋಗುವುದಿಲ್ಲ. ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಎರಡೂ ಮನೆಗಳ ರಕ್ಷಣೆ ಮತ್ತು ನಿರ್ವಹಣೆ ಕಾರ್ಯವನ್ನು ವಹಿಸಲಾಗಿದೆ. ವಿಶೇಷ ದಿನಗಳಲ್ಲಿಯೂ ಬಾ ಅವರ ಮನೆಗೆ ಗಣ್ಯರು ಬರುವುದಿಲ್ಲ. ಚರಿತ್ರೆಯಲ್ಲಿ ಪುರುಷರು ಮಾತ್ರ ಕಾಣುತ್ತಾರೆ. ಅವರ ಪತ್ನಿಯರ ನೆರಳು ಕೂಡ ಕಾಣುವುದಿಲ್ಲ' ಎಂಬ ನೋವಿನ ಮಾತನ್ನು ಲೇಖಕಿ ಡಾ. ಎಚ್.ಎಸ್.ಅನುಪಮಾ ತಮ್ಮ 'ನಾನು... ಕಸ್ತೂರ್' ಕೃತಿಯಲ್ಲಿ ದಾಖಲಿಸಿದ್ದಾರೆ.

ಈಚೆಗೆ ಗೌರವ ಡಾಕ್ಟರೇಟ್ ಪಡೆದ ಹಿರಿಯ ವೈದ್ಯರೊಬ್ಬರ ಸನ್ಮಾನ ಕಾರ್ಯಕ್ರಮಕ್ಕೆ ಹೋಗಿದ್ದೆ. ವೈದ್ಯರನ್ನು ಅಭಿಮಾನಿಗಳು ಸನ್ಮಾನಿಸಿದರು. ಹಲವು ಸಂಘ– ಸಂಸ್ಥೆಗಳೂ ಸನ್ಮಾನಿಸಿದವು. ನಂತರ ಮಹಿಳೆಯರ ದೊಡ್ಡ ಗುಂಪೊಂದು ವೇದಿಕೆಗೆ ಬಂದು, 'ವೈದ್ಯರ ಪತ್ನಿಯನ್ನೂ ನಾವು ಹೆಮ್ಮೆಯಿಂದ ಸನ್ಮಾನಿಸುತ್ತೇವೆ' ಎಂದು ಹೇಳಿ ಇಬ್ಬರನ್ನೂ ಜೊತೆಯಾಗಿ ಸನ್ಮಾನಿಸಿತು.

ಪುರುಷರು ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಕ್ರಿಯಾಶೀಲರಾಗಿ, ನೆಮ್ಮದಿಯಿಂದ ಕೆಲಸ ಮಾಡುವುದಕ್ಕೆ ಅವರಿಗೆ ಬೆನ್ನೆಲುಬಾಗಿ ಅವರ ಪತ್ನಿ ನಿಂತಿರುತ್ತಾರೆ. ಕುಟುಂಬ ನಿರ್ವಹಣೆ, ಮಕ್ಕಳ ಪಾಲನೆ– ಪೋಷಣೆ, ಹಿರಿಯರ ರಕ್ಷಣೆಯಂತಹ ಕಠಿಣ ಮತ್ತು ಜವಾಬ್ದಾರಿಯುತ ಕೆಲಸಗಳನ್ನು ಪತ್ನಿ ನಿರ್ವಹಿಸುತ್ತಾಳೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಯಗಳನ್ನು ಗೃಹಿಣಿಯರೇ ಹೆಚ್ಚಾಗಿ ನೋಡಿಕೊಳ್ಳುತ್ತಾರೆ. ಪತಿಯ ಸಾಧನೆಯ ಹಿಂದೆ ಪತ್ನಿಯ ದುಡಿಮೆಯೂ ಇರುತ್ತದೆ. ಆದ್ದರಿಂದ ಸಭೆ, ಸನ್ಮಾನ ಸಮಾರಂಭಗಳು ಮತ್ತು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸಾಧಕನ ಜೊತೆಗೆ ಆತನ ಪತ್ನಿಗೂ ಸೂಕ್ತ ಗೌರವ ಸಲ್ಲಬೇಕು. ಇದರಿಂದ ಆಕೆಗೆ ನ್ಯಾಯ ಒದಗಿಸಿದಂತೆ ಆಗುತ್ತದೆ. ಸಾಧಕನೊಂದಿಗೆ ಆತನ ಪತ್ನಿಯನ್ನೂ ಸನ್ಮಾನಿಸುವ, ಆಕೆಯ ಶ್ರಮದ ಬಗ್ಗೆ ಉಲ್ಲೇಖಿಸುವ ಸಂಸ್ಕೃತಿ ರೂಪುಗೊಳ್ಳಬೇಕು. ಇದರಿಂದ ಸಮಾನತೆಯನ್ನು ಗಟ್ಟಿಗೊಳಿಸಲು ನೆರವಾಗುತ್ತದೆ ಎಂಬುದನ್ನು ಮರೆಯಬಾರದು.

'ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳೆಯರು ಇರುತ್ತಾರೆ, ಆದರೆ ಕಾಣಿಸುವುದಿಲ್ಲ, ಅಂಚಿಗೆ ತಳ್ಳಲ್ಪಟ್ಟಿರುತ್ತಾರೆ' ಎಂದು ನಿಯತಕಾಲಿಕವೊಂದರಲ್ಲಿ ಕೆಲ ದಿನಗಳ ಹಿಂದೆ ಓದಿದ್ದು ಗಮನಾರ್ಹ. 'ಮಹಿಳೆಯರೆಲ್ಲ ಶೋಷಿತರು, ಮಹಿಳೆಯರೆಲ್ಲರೂ ದಲಿತರೇ' ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳುತ್ತಿದ್ದರು. ಅಂಬೇಡ್ಕರ್ ಅವರ ಮೊದಲ ಪತ್ನಿ ರಮಾಬಾಯಿ ಅವರ ತ್ಯಾಗ ಬಹಳ ದೊಡ್ಡದು. ಹಾಗೆಯೇ ಅವರ ಎರಡನೇ ಪತ್ನಿ ಸವಿತಾ ಅವರ ತ್ಯಾಗವೂ ಅಷ್ಟೇ ದೊಡ್ಡದು. ಅಂಬೇಡ್ಕರ್ ಅವರು ಇಬ್ಬರಿಗೂ ತಮ್ಮ ಒಂದೊಂದು ಪುಸ್ತಕವನ್ನು ಅರ್ಪಿಸಿ ಕೃತಜ್ಞತೆ ತಿಳಿಸಿದ್ದಾರೆ. ಇಬ್ಬರನ್ನೂ ಸಮಾನ ಗೌರವದಿಂದ ಕಂಡಿದ್ದಾರೆ. ಅಂಬೇಡ್ಕರ್ ಅವರ ಜನ್ಮದಿನ ಹಾಗೂ ಸ್ಮರಣೀಯ ಕಾರ್ಯಕ್ರಮಗಳಲ್ಲಿ ರಮಾಬಾಯಿ ಹಾಗೂ ಸವಿತಾ ಅವರನ್ನೂ ಸ್ಮರಿಸುವ ಕೆಲಸ ನಡೆಯಬೇಕು.

'ನಾನು ಹೆಣ್ಣಾಗಬೇಕಿತ್ತು' ಎಂದು ಗಾಂಧೀಜಿ ಆಗಾಗ ಹೇಳುತ್ತಿದ್ದರು. ಅವರಿಗೆ ಮಹಿಳೆಯರ ಶಕ್ತಿ, ಸಾಮರ್ಥ್ಯ, ತ್ಯಾಗ ಮನೋಭಾವದ ಪರಿಚಯವಿತ್ತು. ಅವರ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿ ಹಾಗೂ ಅವರ ಸಾಮಾಜಿಕ ಕಾರ್ಯಗಳನ್ನು ಬೆಂಬಲಿಸಿ ಸ್ವದೇಶಿ ಮಹಿಳೆಯರು ಮಾತ್ರವಲ್ಲ ವಿದೇಶಿ ಮಹಿಳೆಯರ ದೊಡ್ಡ ದಂಡೇ ಹರಿದುಬಂದಿತ್ತು. ಮಹಿಳೆಯರು ಮುಂದಿದ್ದರೆ ಯಶಸ್ಸು ಖಂಡಿತ ಎನ್ನುವುದು ಅವರ ಭಾವನೆಯಾಗಿತ್ತು.

ಮಹಿಳೆಯರಿಗೆ ಗ್ರಾಮ ಪಂಚಾಯಿತಿ, ಸ್ಥಳೀಯ ಸಂಸ್ಥೆಗಳಲ್ಲಿ ಶೇ 33ರಷ್ಟು ಮೀಸಲಾತಿ ದೊರೆತಿದೆ. ಆದರೆ ಅವರಿಗೆ ಸ್ವತಂತ್ರವಾಗಿ ಅಧಿಕಾರ ನಡೆಸಲು ಸಾಧ್ಯವಾಗುತ್ತಿಲ್ಲ. ಅನೇಕ ಕಡೆ ಪತಿಯ ಕಾರಭಾರವೇ ನಡೆಯುತ್ತದೆ.



'ನಾನೊಬ್ಬನ ಪತ್ನಿ. ಮೂರು ಮಕ್ಕಳ ತಾಯಿ. ಇನ್ನೂ ನನ್ನ ಸೀರೆ, ಕುಪ್ಪಸ ಬಟ್ಟು, ಬೈತಲೆ ಎಲ್ಲ ನನ್ನ ಅತ್ತೆ, ಮಾವಂದಿರ ಮರ್ಜಿ. ನನ್ನದೇ ಮಕ್ಕಳ ಚಪ್ಪಲಿ ಚಾಕಲೇಟು, ಸ್ಲೇಟುಗಳೂ ನನ್ನ ಪರಿಧಿ ಮೀರಿದ ವಿಷಯಗಳು. ನನ್ನವರದು ಅಪ್ಪ, ಅಮ್ಮನ ಮಾತು ಮೀರದ ಭಕ್ತಿ... ಹಾಗಾಗಿ ಇದ್ದಲ್ಲೇ ಇರುತ್ತೇನೆ, ಹಾಗೇ ಕೆಸರೊಳಗೆ ಮುಳುಗುತ್ತಾ ಕೊನೆಗೊಮ್ಮೆ ಇಲ್ಲವಾಗುತ್ತೇನೆ'– ಇವು, ಕವಯಿತ್ರಿ ಪ್ರತಿಭಾ ನಂದಕುಮಾರ್ ಅವರ 'ನಾನು' ಕವಿತೆಯ ಸಾಲುಗಳು. ಕವಿತೆಯು ಹೆಂಡತಿಯ ಸ್ಥಿತಿಗತಿಯನ್ನು ವ್ಯಂಗ್ಯವಾಗಿ ಮನಕ್ಕೆ ತಟ್ಟುವಂತೆ ಕಟ್ಟಿಕೊಡುತ್ತದೆ. ಆಕೆಗೆ ಮನೆಯಲ್ಲಿಯೂ ಸ್ವಂತದ ವ್ಯಕ್ತಿತ್ವ ಇಲ್ಲ ಎಂಬುದನ್ನು ಹೇಳುತ್ತದೆ.

ಪುರುಷನ ನೈತಿಕತೆಯನ್ನು ಕಾಪಾಡುವಲ್ಲಿಯೂ ಪತ್ನಿಯ ಪಾತ್ರ ಬಹಳ ದೊಡ್ಡದಿದೆ. ಗಂಡ ವ್ಯಸನಿ, ಭ್ರಷ್ಟ, ಕೆಲಸಗೇಡಿ ಆಗದಂತೆ ಜಾಗ್ರತೆ ವಹಿಸುತ್ತಾಳೆ. ಹಳ್ಳಿಗಳಲ್ಲಿ ಬಹಳಷ್ಟು ಗಂಡಸರು ಕುಟುಂಬ ನಿರ್ವಹಣೆಗೆ ಹಣ ನೀಡುವುದಿಲ್ಲ. ಎಮ್ಮೆ, ಹಸುಗಳನ್ನು ಸಾಕಿ, ಹಾಲು, ಮೊಸರು ಮಾರಿ ಮನೆ ನಡೆಸುತ್ತಾಳೆ. ಗಂಡ ಉಚಿತವಾಗಿ ಉಂಡು ಕಟ್ಟೆಯ ಮೇಲೆ ಕುಳಿತು ಕಾಲ ಕಳೆಯುತ್ತಾನೆ. ವಿಪರ್ಯಾಸ ಎಂದರೆ ಯಜಮಾನಿಕೆ ಅವನದೇ ಆಗಿರುತ್ತದೆ.

ಪತ್ನಿಗೂ ಪತಿಯಷ್ಟೇ ಸಮಾನ ಸ್ಥಾನಮಾನ ಸಿಗಬೇಕು. ಮಹಿಳಾಮಂಡಲಗಳು, ಮಹಿಳಾ ಸಂಘಟನೆಗಳು ಈ ದಿಸೆಯಲ್ಲಿ ಜನರಲ್ಲಿ ಒಲವು ಮೂಡಿಸುವ, ಗಮನ ಸೆಳೆಯುವ ಕೆಲಸವನ್ನು ಮಾಡಬೇಕು.

ವಾಚಕರ ವಾಣಿ

ಬೇಕಾಗಿದೆ ಆರ್ಥಿಕ ಸಾಕ್ಷರತೆ

ಮೈಕ್ರೊ ಫೈನಾನ್ಸ್ ಕಂಪನಿಗಳ ನಿಯಂತ್ರಣ ಕ್ರಮಗಳನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಿರುವುದು ನೆಮ್ಮದಿ ತರುವ ವಿಚಾರ. ಒಬ್ಬ ಸಾಲಗಾರ ಎರಡಕ್ಕಿಂತ ಹೆಚ್ಚು ಸಂಸ್ಥೆಗಳಿಂದ ಸಾಲ ಪಡೆಯುವಂತಿಲ್ಲ ಮತ್ತು ಒಟ್ಟು ಮೊತ್ತವು ₹2 ಲಕ್ಷ ಮೀರುವಂತಿಲ್ಲ ಎಂಬ ಅಂಶಗಳು ಈ ಸಂಬಂಧದ ಕರಡು ಮಸೂದೆಯಲ್ಲಿ ಇರುವುದು ಸಮಯೋಚಿತ. ಹಾಗೆಯೇ, ಈಗಾಗಲೇ ₹2 ಲಕ್ಷಕ್ಕೂ ಮೀರಿ ಸಾಲ ಮಾಡಿರುವವರ ರಕ್ಷಣೆಗೂ ಸುಗ್ರೀವಾಜ್ಞೆಯಲ್ಲಿ ಕ್ರಮಗಳನ್ನು ಪ್ರಕಟಿಸಬೇಕು. ಏಕೆಂದರೆ ಅತ್ಯಂತ ಹೆಚ್ಚು ಅಪಾಯದಲ್ಲಿರುವ ಇವರನ್ನು ಊರು ಬಿಟ್ಟು ಹೋಗದಂತೆ, ಆತ್ಮಹತ್ಯೆಯ ಕಡೆ ವಾಲದಂತೆ ಮಾಡುವ ತುರ್ತಿದೆ.

ಸುಗ್ರೀವಾಜ್ಞೆ ಜಾರಿಯಾದ ಕೂಡಲೇ ಪಂಚಾಯಿತಿಗಳ ಮುಖಾಂತರ ಹಳ್ಳಿಹಳ್ಳಿಗಳಲ್ಲಿ ಅದರ ಬಗ್ಗೆ ಪ್ರಚಾರ ಮಾಡಿ ಜನರಲ್ಲಿ ಅರಿವು ಮೂಡಿಸಬೇಕು. ನಮ್ಮ ಮಹಿಳೆಯರು ಮತ್ತು ಬಡವರು ಸಾಲಕ್ಕಾಗಿ ಬಡ್ಡಿ ದಂಧೆಕೋರರ ಕಪಿಮುಷ್ಟಿಯಲ್ಲಿ ಸಿಲುಕುವುದನ್ನು ತಡೆಯಲು ಸರ್ಕಾರ ಏನು ಮಾಡಲಿದೆ ಎಂಬುದೂ ಅಷ್ಟೇ ಮಹತ್ವದ ವಿಚಾರವಾಗಿದೆ. ಮಹಿಳೆಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸಿಗುವಂತೆ ಮಾಡುವುದರ ಜೊತೆಗೆ ಆರ್ಥಿಕ ಸಾಕ್ಷರತೆ ಕೊಡಲೂ ಕ್ರಮ ಕೈಗೊಳ್ಳಬೇಕು. ಈ ಕುರಿತು ಕಾಳಜಿಯುಳ್ಳವರನ್ನು ಒಳಗೊಂಡ ಸಮಾಲೋಚನಾ ಸಭೆಯನ್ನು ಸರ್ಕಾರ ಕರೆಯಬೇಕು.

ಶಾರದಾ ಗೋಪಾಲ್, ವಿ.ಗಾಯತ್ರಿ, ಮಧು ಭೂಷಣ್, ವತ್ಸಲಾ ಆನೇಕಲ್
ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಅಕ್ರಮ ವಿರೋಧಿ ಮಹಿಳಾ ವೇದಿಕೆ, ಕರ್ನಾಟಕ

ಭೂಗತ ಜಲವಿದ್ಯುತ್ ಯೋಜನೆ ಕೈಬಿಡಿ

ಶರಾವತಿ ನದಿ ಕಣಿವೆಯ ಅಭಯಾರಣ್ಯದಲ್ಲಿ ಕರ್ನಾಟಕ ವಿದ್ಯುತ್ ನಿಗಮ ಕೈಗೊಳ್ಳಲು ಉದ್ದೇಶಿಸಿರುವ ಭೂಗತ ಜಲವಿದ್ಯುತ್ ಯೋಜನೆಗೆ ಇತ್ತೀಚೆಗೆ ಜರುಗಿದ ರಾಜ್ಯ ವನ್ಯಜೀವಿ ಮಂಡಳಿಯ 19ನೇ ಸಭೆ ಷರತ್ತುಬದ್ಧ ಒಪ್ಪಿಗೆ ನೀಡಿರುವುದು ಖೇದಕರ. ಈ ಯೋಜನೆ ಅನುಷ್ಠಾನ ಆಗಲಿರುವುದು ಪಶ್ಚಿಮಘಟ್ಟದ ದಟ್ಟ ಮಳೆಕಾಡಿರುವ ಸೂಕ್ಷ್ಮ ಪರ್ವತಶ್ರೇಣಿ ಪ್ರದೇಶದಲ್ಲಿ. ಮೇಲೆ ಅನತಿ ದೂರದಲ್ಲಿ ವಿಶ್ವಪ್ರಸಿದ್ಧ ಜೋಗ ಜಲಪಾತ ಹಾಗೂ ಲಿಂಗನಮಕ್ಕಿ ಅಣೆಕಟ್ಟೆ ಇವೆ. ಕೆಳಗಡೆ ಕೂಗಳತೆ ದೂರದಲ್ಲಿ ಗೇರುಸೊಪ್ಪೆ ಅಣೆಕಟ್ಟೆಯಿದೆ. ಸ್ಫೋಟಕಗಳನ್ನು ಬಳಸಿ ಸುರಂಗ ಕೊರೆದು, ಬಸಾಲ್ಟ್ ಶಿಲೆಗಳಿಂದ ಆವೃತವಾಗಿರುವ ಈ ಗುಡ್ಡಗಳನ್ನು ಛಿದ್ರ ಮಾಡಿ ಈ ಯೋಜನೆ ಕಾರ್ಯಗತ ಮಾಡಿದರೆ ಆಗುವ ಅಪಾಯ ಊಹೆಗೂ ನಿಲುಕದ್ದು. ಭೂಕುಸಿತದ ಸಾಧ್ಯತೆಗಳು ಮತ್ತಷ್ಟು ಹೆಚ್ಚುತ್ತವೆ. ಕಾಡಿನ ವನ್ಯಜೀವಿ ಆವಾಸಸ್ಥಾನ ನಾಶವಾಗಿ, ಅಪರೂಪದ ಸಿಂಗಳಿಕವೂ ಸೇರಿದಂತೆ ಇತರ ಪ್ರಾಣಿಗಳೆಲ್ಲ ಸುತ್ತಲಿನ ಹೊಲ-ತೋಟ, ಜನವಸತಿಗಳಿಗೆ ನುಗ್ಗತೊಡಗಿ, ಮಾನವ- ವನ್ಯಜೀವಿ ಸಂಘರ್ಷ ಹೆಚ್ಚುತ್ತದೆ. ನದಿಯ ಕೆಳಹರಿವಿನಲ್ಲಿ ನೀರು ಇನ್ನಷ್ಟು ಕಡಿಮೆಯಾಗಿ, ಗೇರುಸೊಪ್ಪೆ-ಹೊನ್ನಾವರ ವ್ಯಾಪ್ತಿಯ ನದಿಯಂಚಿನ ನೂರಾರು ಹಳ್ಳಿಗಳ ನೀರಿನ ಬವಣೆ ಇನ್ನಷ್ಟು ಉಲ್ಬಣಿಸುತ್ತದೆ.

ವನ್ಯಜೀವಿ ಮಂಡಳಿಯಂಥ ಶಾಸನಾತ್ಮಕ ಸಂಸ್ಥೆಗಳ ಮೂಲಭೂತ ಆಶಯಗಳನ್ನೇ ಗಾಳಿಗೆ ತೂರುವ ಈ ನಿರ್ಧಾರ ಸರಿಯೇ? ಯೋಜನೆಗೆ ವೆಚ್ಚವಾಗಲಿರುವ ₹8,000 ಕೋಟಿಯಲ್ಲಿ ಅದೆಷ್ಟು ಬದಲಿ ಇಂಧನ ವಿದ್ಯುತ್ ಘಟಕಗಳನ್ನು ಸ್ಥಾಪಿಸಬಹುದಲ್ಲವೇ? ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವರು ಖುದ್ದಾಗಿ ಯೋಜನಾಸ್ಥಳಕ್ಕೆ ಭೇಟಿ ನೀಡಿ, ನೈಜ ಸಂಗತಿಗಳನ್ನು ಅರಿತು, ಯೋಜನೆಯನ್ನು ಕೈಬಿಡುವ ವಿವೇಕಯುತ ನಿರ್ಧಾರವನ್ನು ಕೈಗೊಳ್ಳಬೇಕು.

ಕೇಶವ ಎಚ್. ಕೊರ್ಸೆ, ಶಿರಸಿ

ಇತರರ ಹಕ್ಕಿನ ಮೇಲೆ ಹಲ್ಲೆ ಸಲ್ಲದು

ಧ್ವನಿವರ್ಧಕಗಳ ಬಳಕೆ ಯಾವುದೇ ಧರ್ಮದ ಅತ್ಯಗತ್ಯ ಆಚರಣೆಗಳ ಭಾಗವಲ್ಲ ಎಂದು ಈ ಹಿಂದೆಯೂ ಕೆಲವು ನ್ಯಾಯಾಲಯಗಳು ತೀರ್ಪಿತ್ತಿವೆ. ಸಂವಿಧಾನದ ವಿಧಿ 19 ಮತ್ತು 25ರ ಅಡಿಯಲ್ಲಿ ನಾಗರಿಕರಿಗೆ 'ತಮ್ಮ ಆಯ್ಕೆಯ ಧರ್ಮವನ್ನು ನಂಬುವ, ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು' ನೀಡಲಾಗಿದೆ. ಆದರೆ, ಪ್ರತಿ ಹಕ್ಕಿಗೂ 'ಕಾನೂನು ವ್ಯವಸ್ಥೆ, ಆರೋಗ್ಯ ಮತ್ತು ನೈತಿಕತೆ'ಗೆ ಚ್ಯುತಿಯಾಗದಂತೆ ಎಂಬ ಸಮಂಜಸ ನಿರ್ಬಂಧವನ್ನೂ ಹೇರಲಾಗಿದೆ. ಒಬ್ಬರ ಹಕ್ಕು ಚಲಾವಣೆಯು ಇನ್ನೊಬ್ಬರ ಹಕ್ಕಿನ ಮೇಲೆ ಪ್ರಹಾರವಾಗಬಾರದು ಎಂಬುದು ಸಾಂವಿಧಾನಿಕ ನೀತಿ. ಮಸೀದಿ, ದೇವಸ್ಥಾನ, ಚರ್ಚ್‌ನಂತಹ ಪ್ರಾರ್ಥನೆ, ಪೂಜಾ ಸ್ಥಳಗಳು ಯಾವುದೋ ಒಂದು ಧರ್ಮಕ್ಕೆ ಸೇರಿದವು. ಆದರೆ ಅವುಗಳ ಆವರಣದಿಂದ ಹೊರಗಿನ ಇಂಚಿಂಚು ಜಾಗವೂ ಸಾರ್ವಜನಿಕವಾದದ್ದು. ಅದು ಮತಧರ್ಮ ನಿರಪೇಕ್ಷವಾದದ್ದು. ನಮ್ಮ ಧಾರ್ಮಿಕ ಆಚರಣೆ ನಮ್ಮ ಆವರಣವನ್ನು ಮೀರಿ ಇತರರ ಆವರಣದ ಮೇಲೆ ಹಲ್ಲೆ ಮಾಡದಿರುವುದೇ ನಿಜವಾದ ಧಾರ್ಮಿಕ ನೀತಿ. ಇದನ್ನು ಎಲ್ಲರೂ ಅನುಸರಿಸೋಣ.

ಎಂ.ಅಬ್ದುಲ್ ರೆಹಮಾನ್ ಪಾಷ, ಬೆಂಗಳೂರು

ಕುವೆಂಪು ಸಾಹಿತ್ಯ ಮತ್ತು ಬೇಂದ್ರೆ ಕೃಷ್ಣಪ್ಪ

ಸಾಹಿತಿ ಜಿ. ಕೃಷ್ಣಪ್ಪನವರ ಕುರಿತಾದ ನುಡಿ ನಮನ 'ಪರಿಮಳ ಬೀಜ ಹೊತ್ತ ಗಾಳಿ' (ಪ್ರ.ವಾ., ಜ. 29) ಅರ್ಥಪೂರ್ಣವಾಗಿದೆ. ದ.ರಾ. ಬೇಂದ್ರೆಯವರ ಸಾಹಿತ್ಯ ಕುರಿತಾದ ಶ್ರೀಯುತರ ಅಧ್ಯಯನಾಸಕ್ತಿಯನ್ನು ಸಕಾರಣವಾಗಿ ಉಲ್ಲೇಖಿಸಿ, ಪ್ರಕಟಿತ ಕೃತಿಗಳನ್ನು ಪಟ್ಟಿ ಮಾಡಲಾಗಿದೆ. ಆದರೆ, ಕುವೆಂಪು ಸಾಹಿತ್ಯ ಕುರಿತಾದ ಅವರ ಕೃತಿಗಳನ್ನು ಹೆಸರಿಸಿಲ್ಲ. ಕೃಷ್ಣಪ್ಪನವರು ಒಂದು ದಶಕದಿಂದ ಕುವೆಂಪು ಅವರ ಸಾಹಿತ್ಯದ ಕುರಿತು ಆಳವಾದ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರು. ಈ ವಿಷಯವಾಗಿ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಜೊತೆಯಲ್ಲಿ ಸಂಪರ್ಕದಲ್ಲಿಯೂ ಇದ್ದರು. ಅವರ ಕುವೆಂಪು ಸಾಹಿತ್ಯ ಅಧ್ಯಯನದ ಫಲವಾಗಿ ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ (ಪೂರ್ಣ ಗದ್ಯಾನುವಾದ), ಕರ್ಣಚೈತ್ರನ ಪರ್ಣಶಾಲೆ – ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ವಿಮರ್ಶೆ, ಕುವೆಂಪು ಹನುಮದ್ದರ್ಶನ, ಶ್ರೀರಾಮಾಯಣ ದರ್ಶನಂ ಪಾತ್ರ ಕಥಾವಳಿ, ಸರಳಗನ್ನಡದಲ್ಲಿ ಚಿತ್ರಾಂಗದಾ ಖಂಡಕಾವ್ಯ, ನಮ್ಮ ಕುವೆಂಪು–ಪರಿಚಯಾತ್ಮಕ ಪುಸ್ತಕ ಪ್ರಕಟವಾಗಿವೆ. ಕುವೆಂಪು ಸಾಹಿತ್ಯ ಸೊಬಗು ಸೇರಿದಂತೆ ಇನ್ನೆರಡು ಕೃತಿಗಳು ಪ್ರಕಟಣೆಯ ಹಂತದಲ್ಲಿದ್ದವು. ಇವುಗಳಲ್ಲದೆ, ಕುವೆಂಪು ಸಾಹಿತ್ಯ ಕುರಿತಾದ ಸುಮಾರು 20ಕ್ಕೂ ಹೆಚ್ಚು ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. 'ಪ್ರಜಾವಾಣಿ'ಯ ಕುವೆಂಪು ಪದಸೃಷ್ಟಿ ಅಂಕಣ ಅವರ ವಿದ್ವತ್ತಿಗೆ ಹಿಡಿದ ಕನ್ನಡಿಯಂತಿದೆ. ಕುವೆಂಪು ಪದಸೃಷ್ಟಿಗೆ ಸಂಬಂಧಿಸಿದಂತೆ ಒಂದು ಬೃಹತ್ ಹೊತ್ತಿಗೆಯನ್ನು ಹೊರತರುವ ಆಶಯ ಹೊಂದಿದ್ದರು. ಈ ಅಂಶಗಳನ್ನು ಸಹೃದಯರ ಗಮನಕ್ಕೆ ತರುತ್ತಾ, ಕುವೆಂಪು ಪ್ರತಿಷ್ಠಾನವು ಕೃಷ್ಣಪ್ಪನವರಿಗೆ ಅಂತಿಮ ನಮನಗಳನ್ನು ಸಲ್ಲಿಸುತ್ತದೆ.

ಕಡಿದಾಳ್ ಪ್ರಕಾಶ್, ಸಮಕಾರ್ಯದರ್ಶಿ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ರಾಕೆಟ್ ಉಡಾವಣೆ ಶ್ರೀಹರಿಕೋಟ @100



ಭಾರತದ ಬಾಹ್ಯಾಕಾಶ ಸಂಶೋಧನೆಗಳಿಗೆ ಸಂಬಂಧಿಸಿದಂತೆ ಶ್ರೀಹರಿಕೋಟ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದೆ. ಇಸ್ರೊ ತನ್ನ ಪ್ರತಿ ಉಪಗ್ರಹ/ರಾಕೆಟ್‌ಗಳನ್ನು ಇಲ್ಲಿಂದಲೇ ಉಡಾಯಿಸುತ್ತಿದೆ. ಜಿಎಸ್‌ಎಲ್‌ವಿ–ಎಫ್‌15 ರಾಕೆಟ್‌ನ ಉಡಾವಣೆಯೊಂದಿಗೆ ಶ್ರೀಹರಿಕೋಟದಿಂದ ಉಡಾವಣೆಗೊಂಡ ರಾಕೆಟ್‌ಗಳ ಸಂಖ್ಯೆ ನೂರು ಮುಟ್ಟಿದೆ. ದ್ವೀಪದಂತಿರುವ ಶ್ರೀಹರಿಕೋಟವನ್ನೇ ಉಪಗ್ರಹಗಳ ಉಡಾವಣೆಗೆ ಆಯ್ಕೆ ಮಾಡಿಕೊಂಡಿದ್ದರ ಹಿಂದೆ ಭೌಗೋಳಿಕ ಕಾರಣಗಳಿವೆ

ಪ್ರಜಾವಾಣಿ ವಾರ್ತೆ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನೂರನೇ ಉಡಾವಣೆ ನಡೆಸಿದೆ. ಎನ್‌ವಿಎಸ್‌–02 ಉಪಗ್ರಹ ಹೊತ್ತ ಜಿಎಸ್‌ಎಲ್‌ವಿ–ಎಫ್‌15 ರಾಕೆಟ್ ಇಲ್ಲಿಂದ ಉಡಾವಣೆಯಾಗಿದ್ದು, ಯಶಸ್ವಿಯಾಗಿ ಕಕ್ಷೆ ಸೇರಿದೆ. ಇದರೊಂದಿಗೆ ಇಸ್ರೊ ಮತ್ತು ಶ್ರೀಹರಿಕೋಟದ ಬಾಹ್ಯಾಕಾಶ ಕೇಂದ್ರವು ಭಾರತದ ಸಂಶೋಧನಾ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದೆ.

ಆಂಧ್ರಪ್ರದೇಶದಲ್ಲಿರುವ ಶ್ರೀಹರಿಕೋಟ ದಶಕಗಳ ಹಿಂದೆ ಹೊರಜಗತ್ತಿನೊಂದಿಗೆ ಅಷ್ಟಾಗಿ ಸಂಪರ್ಕವೇ ಇಲ್ಲದಿದ್ದ ಒಂದು ದ್ವೀಪವಾಗಿತ್ತು. ಇಂದು ಆ ಪ್ರದೇಶವು ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಇಸ್ರೊದ ಪ್ರಮುಖ ಉಡಾವಣಾ ಕೇಂದ್ರವಾಗಿದೆ. ರಾಕೆಟ್ ಉಡಾವಣೆಗೆ ಅಗತ್ಯವಾದ ಮೂಲಸೌಕರ್ಯವನ್ನು ಹೊಂದಿದೆ. ಇಸ್ರೊದ ರಾಕೆಟ್‌ಗಳ ನಿರ್ಮಾಣ, ಜೋಡಣೆ ಮತ್ತು ಉಡಾವಣೆಗೆ ಅಗತ್ಯವಾದ ಸೌಕರ್ಯಗಳನ್ನು ಇಲ್ಲಿ ಕಲ್ಪಿಸಲಾಗಿದೆ. ಇಲ್ಲಿ ಎರಡು ಲಾಂಚ್ ಪ್ಯಾಡ್‌ಗಳಿದ್ದು (ಉಡಾವಣಾ ಕಟ್ಟೆ), ಮೂರನೇ ಲಾಂಚ್ ಪ್ಯಾಡ್ ಅನ್ನು ₹3,984 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ.

ಪೂರ್ವ ಕರಾವಳಿಯಲ್ಲಿ, ಜನವಸತಿ ಪ್ರದೇಶಗಳಿಂದ ದೂರದಲ್ಲಿ ರಾಕೆಟ್ ಉಡಾವಣಾ ಕೇಂದ್ರವನ್ನು ಆರಂಭಿಸಬೇಕು ಎನ್ನುವುದು ವಿಕ್ರಮ್ ಸಾರಾಭಾಯ್ ಅವರ ಕನಸು. ಇಸ್ರೊದ ವಿವಿಧ ರೀತಿಯ ಬಾಹ್ಯಾಕಾಶ ಯೋಜನೆಗಳಿಗೆ ತಕ್ಕಂತೆ ವ್ಯವಸ್ಥಿತವಾದ ಸಂಶೋಧನೆ ಮತ್ತು ಉಡಾವಣಾ ಕೇಂದ್ರವನ್ನು ಸಜ್ಜುಗೊಳಿಸಬೇಕು ಎಂಬ ಆಶಯದೊಂದಿಗೆ ಸ್ಥಳದ ಹುಡುಕಾಟದಲ್ಲಿ ತೊಡಗಿದ ವಿಕ್ರಮ್ ಅವರ ತಂಡ ಕೊನೆಗೆ ಬಂದು ನಿಂತದ್ದು ಶ್ರೀಹರಿಕೋಟಕ್ಕೆ.

ಒಂದು ಕಡೆ ಪುಲಿಕಾಟ್ ಸರೋವರ, ಮತ್ತೊಂದು ಕಡೆ ಬಂಗಾಳ ಕೊಲ್ಲಿ, ಮಗದೊಂದು ಕಡೆ ಬಕಿಂಗ್‌ಹ್ಯಾಮ್ ಕಾಲುವೆಯಿಂದ ಸುತ್ತುವರಿದಿರುವ ಶ್ರೀಹರಿಕೋಟ ಒಂದು ದ್ವೀಪವಾಗಿದೆ. 50 ಕಿ.ಮೀ. ತೀರಪ್ರದೇಶ ಹೊಂದಿರುವ ಈ ಪ್ರದೇಶ 43,360 ಎಕರೆಯಲ್ಲಿ ವ್ಯಾಪಿಸಿದೆ. ನೀಲಗಿರಿ ಮರಗಳಿಂದ ಹಿಡಿದು ಅಪರೂಪದ ಸಸ್ಯ, ಮರಗಳಿಂದ ಕೂಡಿರುವ ಶ್ರೀಹರಿಕೋಟಕ್ಕೆ ಪ್ರತಿವರ್ಷದ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ವಲಸೆ ಹಕ್ಕಿಗಳು ಭೇಟಿ ನೀಡುತ್ತವೆ. ಈ ಮೂಲಕ ಇದೊಂದು ಪ್ರವಾಸಿ ತಾಣವಾಗಿಯೂ ಮಾರ್ಪಟ್ಟಿದೆ.

1969ರಲ್ಲಿ ಶ್ರೀಹರಿಕೋಟದಲ್ಲಿ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ಅನ್ನು ಸ್ಥಾಪಿಸಲಾಯಿತು. 1971ರ ಅ.9ರಂದು ಕೇಂದ್ರವು ಕಾರ್ಯಾರಂಭ ಮಾಡಿತು. ಮುಂದೆ ಹಂತಹಂತವಾಗಿ ಕೇಂದ್ರವನ್ನು ಅಭಿವೃದ್ಧಿಪಡಿಸಲಾಯಿತು. 2002ರ ಸೆ.5ರಂದು ಇದಕ್ಕೆ ಇಸ್ರೊ ಮಾಜಿ ಅಧ್ಯಕ್ಷ ಸತೀಶ್ ಧವನ್ ಅವರ ಸ್ಮರಣಾರ್ಥ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ (ಎಸ್‌ಡಿಎಸ್‌ಸಿ –ಎಸ್‌ಎಚ್‌ಎಆರ್) ಎಂದು ನಾಮಕರಣ ಮಾಡಲಾಯಿತು.

ಶ್ರೀಹರಿಕೋಟವೇ ಏಕೆ?: ಬಾಹ್ಯಾಕಾಶ ಸಂಶೋಧನೆಗೆ ಸಂಬಂಧಿಸಿದಂಥ ಹಲವು ಕೇಂದ್ರಗಳು ದೇಶದಲ್ಲಿವೆ. ತಿರುವನಂತಪುರದಲ್ಲಿ ಉಪಗ್ರಹ ನಿರ್ಮಾಣ ಕೇಂದ್ರ ಇದೆ. ಇಂಥ ಕೇಂದ್ರಗಳ ಪೈಕಿ ಎಸ್‌ಡಿಎಸ್‌ಸಿ– ಎಸ್‌ಎಚ್‌ಎಆರ್‌ಗೆ ಮಹತ್ವದ ಸ್ಥಾನವಿದೆ. ಇಸ್ರೊ ಉಪಗ್ರಹ/ರಾಕೆಟ್ ಉಡಾವಣೆಗೆ ಶ್ರೀಹರಿಕೋಟವನ್ನೇ ಆಯ್ಕೆ ಮಾಡಲು ಹಲವು ಕಾರಣಗಳಿವೆ.

ಶ್ರೀಹರಿಕೋಟ ಭೂಮಧ್ಯ ರೇಖೆಗೆ ಅತಿ ಹತ್ತಿರದಲ್ಲಿದೆ. ಇಲ್ಲಿಂದ ರಾಕೆಟ್ ಉಡಾವಣೆ ಮಾಡಿದರೆ, ಹೆಚ್ಚಿನ ವೇಗದಲ್ಲಿ ನಭಕ್ಕೆ ಹಾರುತ್ತದೆ. ಭೂಮಧ್ಯ ರೇಖೆಯ ಸನಿಹದಿಂದ ಉಡಾಯಿಸಿದರೆ ಉಪಗ್ರಹಗಳನ್ನು ಕಕ್ಷೆಗೆ ಸೇರಿಸುವುದು ಸುಲಭ. ಇಲ್ಲದಿದ್ದರೆ, ಗುರುತ್ವಾಕರ್ಷಣೆಗೆ ಒಳಗಾಗಿ ಅವು ಪಥ ಬದಲಾಯಿಸುವ ಸಾಧ್ಯತೆ ಇರುತ್ತದೆ.

ನಭದತ್ತ ಚಿಮ್ಮಿದ ರಾಕೆಟ್‌ಗಳು ಎಲ್ಲ ಸಂದರ್ಭಗಳಲ್ಲಿಯೂ ಕಕ್ಷೆ ಸೇರುತ್ತವೆ ಎಂದು ಹೇಳಲಾಗದು. ತಾಂತ್ರಿಕ ಕಾರಣಗಳಿಂದ ಕೆಲವೊಮ್ಮೆ ಅವು ಕೆಳಕ್ಕೆ ಬೀಳುವುದೂ ಉಂಟು. ಶ್ರೀಹರಿಕೋಟದ ಪೂರ್ವದಲ್ಲಿ ವಿಸ್ತಾರವಾದ ಸಮುದ್ರ ಇದೆ. ಒಂದೊಮ್ಮೆ ರಾಕೆಟ್‌ಗಳು ಬಿದ್ದರೂ ಅವು ಜನರ ಮೇಲಾಗಲಿ, ಮನೆಗಳ ಮೇಲಾಗಲಿ ಬೀಳದೇ ಸಮುದ್ರದಲಿ ಬೀಳುತವೆ.


ಶ್ರೀಹರಿಕೋಟಕ್ಕೆ ನೆಲ, ಜಲ ಮಾರ್ಗ ಸೇರಿದಂತೆ ಸಂಚಾರಕ್ಕೆ ದೇಶೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ಉತ್ತಮ ಸಂಪರ್ಕ ವ್ಯವಸ್ಥೆ ಇದೆ. ಭಾರಿ ಯಂತ್ರಗಳು, ತೂಕದ ಸಲಕರಣೆಗಳನ್ನು ಸಾಗಿಸಲು ಇದರಿಂದ ಅನುಕೂಲ.

ನೈರುತ್ಯ ಮತ್ತು ಈಶಾನ್ಯ ಮಾರುತಗಳೆರಡೂ ಇಲ್ಲಿಂದ ಹಾದುಹೋಗುತ್ತವೆ. ಈಶಾನ್ಯ ಮಾರುತಗಳು ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಮಾತ್ರವೇ ಈ ಭಾಗದಲ್ಲಿ ಮಳೆ ಸುರಿಸುತ್ತವೆ. ಮಳೆ ಕಡಿಮೆ ಇರುವುದರಿಂದ ಉಪಗ್ರಹ ಜೋಡಣೆ, ಉಡಾವಣೆಗೆ ಸಂಬಂಧಿಸಿದ ಹೊರಾಂಗಣದ ಕೆಲಸಗಳಿಗೆ ಹೆಚ್ಚು ಅನುಕೂಲ. ರಾಕೆಟ್ ಉಡಾವಣೆಯ ಸಮಯದಲ್ಲಿ ಭೂಮಿಯು ಕಂಪಿಸುತ್ತದೆ. ಹೀಗಾಗಿ ಉಡಾವಣೆಯ ಸ್ಥಳವು ಗಟ್ಟಿಯಾಗಿರಬೇಕು. ಶ್ರೀಹರಿಕೋಟದ ಭೂಮಿಯು ದೃಢವಾಗಿದ್ದು, ರಾಕೆಟ್ ಉಡಾವಣೆಗೆ ಸೂಕ್ತವಾಗಿದೆ.

ಫ್ರೆಂಚ್ ಗಯಾನಾದಲ್ಲಿರುವ ಕೌರೌ, ಅಮೆರಿಕದಲ್ಲಿರುವ ಫ್ಲಾರಿಡಾ ಕೆನಡಿ ಬಾಹ್ಯಾಕಾಶ ಕೇಂದ್ರಗಳೂ ಭೂಮಧ್ಯ ರೇಖೆಗೆ ಸನಿಹದಲ್ಲಿವೆ. ಯೂರೋಪ್‌ನ ರಾಕೆಟ್‌ಗಳನ್ನೂ ಕೆನಡಿ ಬಾಹ್ಯಾಕಾಶ ಕೇಂದ್ರದಿಂದಲೇ ಉಡಾವಣೆ ಮಾಡಲಾಗುತ್ತದೆ.

ತಮಿಳುನಾಡಿನಲ್ಲಿ ಮತ್ತೊಂದು ಕೇಂದ್ರ

ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರವು ರಾಕೆಟ್ ಉಡಾಯಿಸುವ ಸಾಮರ್ಥ್ಯವಿರುವ ಏಕೈಕ ಉಡಾವಣಾ ಕೇಂದ್ರ. ಇದಕ್ಕೆ ಪೂರಕವಾಗಿ ಇಸ್ರೊ ತಮಿಳುನಾಡಿನ ತೂತ್ತುಕುಡಿ ಜಿಲ್ಲೆಯ ಕುಲಶೇಖರಪಟ್ಟಣದಲ್ಲಿ ₹986 ಕೋಟಿ ವೆಚ್ಚದಲ್ಲಿ ರಾಕೆಟ್ ಉಡಾವಣಾ ಸಾಮರ್ಥ್ಯದ ಮತ್ತೊಂದು ಬಾಹ್ಯಾಕೇಶ ಕೇಂದ್ರವನ್ನು ನಿರ್ಮಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷದ ಫೆಬ್ರುವರಿ 28ರಂದು ಭೂಮಿಪೂಜೆ ನೆರವೇರಿಸಿದ್ದಾರೆ. ಸಣ್ಣ ಉಪಗ್ರಹಗಳನ್ನು ಉಡಾವಣೆ ಮಾಡಲು ಈ ಕೇಂದ್ರವನ್ನು ಬಳಸಲಾಗುವುದು ಎಂದು ಇಸ್ರೊದ ಹಿಂದಿನ ಅಧ್ಯಕ್ಷ ಎಸ್.ಸೋಮನಾಥ್ ಹೇಳಿದ್ದರು.



ಕೇಂದ್ರ ಸರ್ಕಾರವು ಬಾಹ್ಯಾಕಾಶ ಕ್ಷೇತ್ರದಲ್ಲೂ ಖಾಸಗಿಯವರಿಗೆ ಅವಕಾಶ ಕಲ್ಪಿಸಲು ಮುಂದಾಗಿದ್ದು, ಹೆಚ್ಚು ಹೆಚ್ಚು ಖಾಸಗಿ ಸಂಸ್ಥೆಗಳು ಬಾಹ್ಯಾಕಾಶ ಅಧ್ಯಯನದಲ್ಲಿ ತೊಡಗಿದರೆ ಉಪಗ್ರಹಗಳ ಉಡಾವಣೆ ಇನ್ನಷ್ಟು ಹೆಚ್ಚಲಿದೆ. ಇದರಿಂದ ಸತೀಶ್ ಧವನ್ ಬಾಹ್ಯಾಕೇಂದ್ರ ಕೇಂದ್ರದ ಮೇಲೆ ಒತ್ತಡವೂ ಜಾಸ್ತಿಯಾಗಲಿದೆ. ಇದನ್ನು ತಪ್ಪಿಸುವುದಕ್ಕಾಗಿ ಮತ್ತೊಂದು ಉಡಾವಣಾ ಕೇಂದ್ರವನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಲಾಗಿದೆ.


ಸಾಧನೆಗಳ 'ಚಿಮ್ಮು ಹಲಗೆ'

ಜಾಗತಿಕ ಮಟ್ಟದ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೊ, ಅರ್ಥಾತ್ ಭಾರತ ಮಾಡಿರುವ ಅಭೂತಪೂರ್ವ ಸಾಧನೆಗಳಿಗೆ 'ಚಿಮ್ಮು ಹಲಗೆ'ಯಾಗಿರುವುದು ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ. ಬಾಹ್ಯಾಕಾಶ ಕ್ಷೇತ್ರದಲ್ಲಿ ಅಮೆರಿಕ, ರಷ್ಯಾ, ಚೀನಾದಂತಹ ರಾಷ್ಟ್ರಗಳು ಮಾಡಿರುವ, ಇತರ ಅಭಿವೃದ್ಧಿಹೊಂದಿದ ರಾಷ್ಟ್ರಗಳಿಗೂ ಸಾಧ್ಯವಾಗದಿರುವ ಪ್ರಯೋಗಗಳು, ಸಾಧನೆಗಳನ್ನು ಭಾರತಕ್ಕೆ ಮಾಡಲು ಸಾಧ್ಯವಾಗಿಸುವಲ್ಲಿ ಈ ಕೇಂದ್ರದ ಕೊಡುಗೆ ದೊಡ್ಡದಿದೆ. ಚಂದ್ರಯಾನ, ಮಂಗಳಯಾನ ಸೇರಿದಂತೆ ಇಸ್ರೊದ ಪ್ರಮುಖ ಯೋಜನೆಗಳ ಗಗನನೌಕೆಗಳನ್ನು ರಾಕೆಟ್‌ಗಳ ಮೂಲಕ ಬಾಹ್ಯಾಕಾಶಕ್ಕೆ ಕಳುಹಿಸಿದ್ದು ಇದೇ ಕೇಂದ್ರದಿಂದ. ಅಂತರಿಕ್ಷಕ್ಕೆ ಮಾನವವನ್ನು ಕಳುಹಿಸುವುದು ಸೇರಿದಂತೆ ಭವಿಷ್ಯದ ಯೋಜನೆಗಳಲ್ಲೂ ಇದು ಪ್ರಮುಖ ಪಾತ್ರವಹಿಸಲಿದೆ.

- ಚಂದ್ರನನ್ನು ಅಧ್ಯಯನ ನಡೆಸುವ ಇಸ್ರೊದ ಮೊದಲ ಪ್ರಯತ್ನ ಚಂದ್ರಯಾನ–1 ನೌಕೆಯನ್ನು 2008ರ ಅ.22ರಂದು ಪಿಎಸ್‌ಎಲ್‌ವಿ–ಸಿ11 ರಾಕೆಟ್‌ನಲ್ಲಿ ಇದೇ ಕೇಂದ್ರದಿಂದ ನಭಕ್ಕೆ ಕಳುಹಿಸಲಾಗಿತ್ತು. ಚಂದ್ರನ ಅಂಗಳದಲ್ಲಿ ನೀರು ಇರುವುದನ್ನು ಈ ಯೋಜನೆ ದೃಢಪಡಿಸಿತ್ತು. ಅದು ಈ ಕೇಂದ್ರದಿಂದ ನಡೆದಿದ್ದ 27ನೇ ಉಡಾವಣೆಯಾಗಿತ್ತು
- 2013ರ ನವೆಂಬರ್ 5ರಂದು ಮಂಗಳಗ್ರಹದ ಅಧ್ಯಯನಕ್ಕಾಗಿ ಮಂಗಳಗ್ರಹದ ಕಕ್ಷೆಗೆ ಕಳುಹಿಸಿದ್ದ ನೌಕೆಯನ್ನು (ಮಾರ್ಸ್ ಆರ್ಬಿಟರ್ ಮಿಷನ್) ಪಿಎಸ್‌ಎಲ್‌ವಿ–ಸಿ25 ರಾಕೆಟ್ ಮೂಲಕ ಕಳುಹಿಸಲಾಗಿತ್ತು. 2014ರ ಸೆಪ್ಟೆಂಬರ್ 24ರಂದು ನೌಕೆ ಮಂಗಳನ ಕಕ್ಷೆ ತಲುಪಿತ್ತು. ಭಾರತದ ಮೊದಲ ಈ ಅಂತರಗ್ರಹೀಯ ಯೋಜನೆಯು ಯಶಸ್ವಿಯಾಗಿತ್ತಲ್ಲದೆ, ಮಂಗಳ ಗ್ರಹದ ಬಳಿಗೆ ನೌಕೆಯನ್ನು ಕಳುಹಿಸಲು ಯಶಸ್ವಿಯಾದ ಕೆಲವೇ ಕೆಲವು ರಾಷ್ಟ್ರಗಳ ಸಾಲಿಗೆ (ಅಮೆರಿಕ, ರಷ್ಯಾ, ಚೀನಾ) ಭಾರತವೂ ಸೇರಿತು
- 2019ರ ಜುಲೈ 22ರಂದು ಚಂದ್ರನ ದಕ್ಷಿಣ ಧ್ರುವದ ಅಧ್ಯಯನಕ್ಕಾಗಿ ಎರಡನೇ ನೌಕೆ ಚಂದ್ರಯಾನ–2 ಅನ್ನು ಭಾರತ ಚಂದ್ರನಲ್ಲಿಗೆ ಜಿಎಸ್‌ಎಲ್‌ವಿ ಎಂಕೆ III-ಎಂ1 ರಾಕೆಟ್ ಮೂಲಕ ಕಳುಹಿಸಿತ್ತು. ಚಂದ್ರನ ಅಂಗಳದಲ್ಲಿ ವಿಕ್ರಂ ಲ್ಯಾಂಡರ್ ಇಳಿಸುವುದು ಇಸ್ರೊ ಉದ್ದೇಶವಾಗಿತ್ತು. 2019ರ ಸೆ.7ರಂದು ವಿಕ್ರಂ ಲ್ಯಾಂಡರ್ ಚಂದ್ರನ ಅಂಗಳದಲ್ಲಿ ಇಳಿಯುವ ಸಂದರ್ಭದಲ್ಲಿ ಕೊನೆ ಕ್ಷಣದಲ್ಲಿ ಲ್ಯಾಂಡರ್ ಸಂಪರ್ಕ ಕಡಿದುಕೊಂಡಿತು
- ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಅನ್ನು ಇಳಿಸುವ, ಮೊದಲ ಪ್ರಯತ್ನದ ಮುಂದುವರಿದ ಭಾಗವಾಗಿ ಇಸ್ರೊ ಹಮ್ಮಿಕೊಂಡಿದ್ದ ಎರಡನೇ ಯೋಜನೆ ಚಂದ್ರಯಾನ–3ರ ನೌಕೆಯನ್ನು ಹೊತ್ತೊಯ್ದ ಎಲ್‌ವಿಎಂ3 ಎಂ4 ರಾಕೆಟ್ 2023ರ ಜುಲೈ 14ರಂದು ಇದೇ ಕೇಂದ್ರದಿಂದ ಆಗಸಕ್ಕೆ ಚಿಮ್ಮಿತ್ತು. ಇದು ಈ ಕೇಂದ್ರದಿಂದ ನಡೆದ 91ನೇ ಉಡಾವಣೆಯಾಗಿತ್ತು. 2023ರ ಆಗಸ್ಟ್ 23ರಂದು ನೌಕೆಯು ಚಂದ್ರನ ದಕ್ಷಿಣ ಧ್ರುವದಲ್ಲಿ ಯಶಸ್ವಿಯಾಗಿ ಇಳಿಯುವುದರೊಂದಿಗೆ ಭಾರತವು ಚಂದ್ರನ ನೆಲದಲ್ಲಿ ನೌಕೆಯನ್ನು ಯಶಸ್ವಿಯಾಗಿ ಇಳಿಸಿದ ನಾಲ್ಕನೇ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು
- ಸೌರವ್ಯೂಹದ ಕೇಂದ್ರಬಿಂದು ಸೂರ್ಯನ ಅಧ್ಯಯನಕ್ಕಾಗಿ ಇಸ್ರೊ ರೂಪಿಸಿದ್ದ ಆದಿತ್ಯ–ಎಲ್1 ನೌಕೆಯು 2023ರ ಸೆ.2ರಂದು ಪಿಎಸ್‌ಎಲ್‌ವಿ ಸಿ–57 ರಾಕೆಟ್ ಮೂಲಕ ಇದೇ ಕೇಂದ್ರದಿಂದ ಬಾಹ್ಯಾಕಾಶಕ್ಕೆ ನೆಗೆದಿತ್ತು. ಇದು ಈ ಕೇಂದ್ರದಿಂದ ನಡೆದಿದ್ದ 93ನೇ ಉಡಾವಣೆ



ಮೊದಲ ಪ್ರಯತ್ನವೇ ಯಶಸ್ವಿ...



ಶ್ರೀಹರಿಕೋಟದ ಸತೀಶ್‌ಧವನ್ ಬಾಹ್ಯಾಕಾಶ ಕೇಂದ್ರದಿಂದ ಮೊದಲ ಬಾರಿಗೆ 1979ರ ಆಗಸ್ಟ್ 10ರಂದು ರಾಕೆಟ್ ಉಡಾವಣೆ ಮಾಡಲಾಗಿತ್ತು. ಉಡಾವಣೆ ಯಶಸ್ವಿಯಾಗಿತ್ತಾದರೂ, ಇಸ್ರೊ ನಡೆಸಿದ ಪ್ರಯೋಗ ಸಫಲವಾಗಿರಲಿಲ್ಲ. ಎಸ್‌ಎಲ್‌ವಿ–3 (ಸ್ಮಾಲ್ ಲಾಂಚ್ ವೆಹಿಕಲ್) ಎಂಬ ರಾಕೆಟ್‌ನಲ್ಲಿ 35 ಕೆ.ಜಿ ತೂಕದ ರೋಹಿಣಿ ಟೆಕ್ನಾಲಜಿ ಪೇಲೋಡ್ (ಆರ್‌ಟಿಪಿ) ಎಂಬ ಹೆಸರಿನ ಪ್ರಯೋಗಾತ್ಮಕ ಉಪಗ್ರಹವನ್ನು ಕಕ್ಷೆಗೆ ಸೇರಿಸಲು ಇಸ್ರೊ ಬಯಸಿತ್ತು. ಭಾರತದ ಮೊದಲ ರಾಕೆಟ್ ಎಸ್‌ಎಲ್‌ವಿ–3ಯ ಹಾರಾಟ, ಚಲನೆ, ವೇಗದ ಮೇಲ್ವಿಚಾರಣೆ ನಡೆಸುವ ಉಪಕರಣಗಳನ್ನು ಈ ಉಪಗ್ರಹ ಹೊಂದಿತ್ತು. ಆದರೆ, ಆ ಉಪಗ್ರಹವನ್ನು ನಿಗದಿತ ಕಕ್ಷೆಯಲ್ಲಿ ಸೇರಿಸಲು ಇಸ್ರೊಗೆ ಸಾಧ್ಯವಾಗಿರಲಿಲ್ಲ.

ಆಧಾರ: ಇಸ್ರೊ, ಪಿಟಿಐ, ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರ ವೆಬ್‌ಸೈಟ್, ಬಿಬಿಸಿ

ಸಿನಿ ಬಿಟ್ಸ್

ಫೆ.7ಕ್ಕೆ 'ಸೀಟ್ ಎಡ್ಜ್' ಹಾಡು ಬಿಡುಗಡೆ



ಸಿದ್ದು ಮೂಲಿಮನಿ, ರವೀಕ್ಷಾ ಶೆಟ್ಟಿ

ಕಿರುತೆರೆ ಮೂಲಕ ಹೆಸರು ಮಾಡಿರುವ ನಟ ಸಿದ್ದು ಮೂಲಿಮನಿ ನಟನೆಯ 'ಸೀಟ್ ಎಡ್ಜ್' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಫೆ.7ಕ್ಕೆ ಚಿತ್ರದ ಮೊದಲ ಹಾಡು ಬಿಡುಗಡೆಯಾಗಲಿದೆ.

ಸಿದ್ದು ಮೂಲಿಮನಿಗೆ ಜೋಡಿಯಾಗಿ ರವೀಕ್ಷಾ ಶೆಟ್ಟಿ ನಟಿಸಿದ್ದು, ಡಾರ್ಕ್ ಕಾಮಿಡಿಗೆ ಹಾರರ್ ಥ್ರಿಲ್ಲರ್ ಸ್ಪರ್ಶ ಕೊಟ್ಟು ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ ಚೇತನ್ ಶೆಟ್ಟಿ. 'ಕೆಮಿಸ್ಟ್ರಿ ಆಫ್ ಕರಿಯಪ್ಪ' ಹಾಗೂ 'ಕ್ರಿಟಿಕಲ್ ಕೀರ್ತನೆಗಳು' ಸಿನಿಮಾದಲ್ಲಿ ಸಹ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇರುವ ಇವರು ಈ ಸಿನಿಮಾ ಮೂಲಕ ನಿರ್ದೇಶಕರಾಗಿ ಗುರುತಿಸಿಕೊಳ್ಳಲಿದ್ದಾರೆ. ನೈಜ ಘಟನೆಯಿಂದ ಸ್ಫೂರ್ತಿ ಪಡೆದಿರುವ 'ಸೀಟ್ ಎಡ್ಜ್' ಸಿನಿಮಾದಲ್ಲಿ ರಘು ರಾಮನಕೊಪ್ಪ, ಗಿರೀಶ್ ಶಿವಣ್ಣ, ಮಿಮಿಕ್ರಿ ಗೋಪಿ, ಕಿರಣ್, ಪುನೀತ್ ಬಾಬು, ತೇಜು ಪೊನ್ನಪ್ಪ, ಮನಮೋಹನ್ ರೈ ಬಣ್ಣಹಚ್ಚಿದ್ದಾರೆ. ಚೇತನ್ ಶೆಟ್ಟಿ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಚಿತ್ರಕ್ಕೆ ಆಕಾಶ್ ಪರ್ವ ಸಂಗೀತ, ದೀಪಕ್ ಕುಮಾರ್ ಜೆ.ಕೆ. ಛಾಯಾಚಿತ್ರಗ್ರಹಣ ಹಾಗೂ ನಾಗೇಂದ್ರ ಉಜ್ಜನಿ ಸಂಕಲನವಿದೆ. ಎನ್.ಆರ್. ಸಿನಿಮಾ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಗಿರಿಧರ ಟಿ. ವಸಂತಪುರ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ❖

ಫೆ.21ಕ್ಕೆ 'ಒಲವಿನ ಪಯಣ' ಬಿಡುಗಡೆ



ಪ್ರಿಯಾ

ಕಿಶನ್ ಬಲ್ನಾಡ್ ನಿರ್ದೇಶನದ, ಸುನಿಲ್ ಹಾಗೂ ಪ್ರಿಯಾ ಜೋಡಿ ನಟಿಸಿರುವ 'ಒಲವಿನ ಪಯಣ' ಸಿನಿಮಾ ಫೆ.21ರಂದು ಬಿಡುಗಡೆಯಾಗಲಿದ್ದು, ಚಿತ್ರದ ಟೀಸರ್ ಹಾಗೂ ಹಾಡುಗಳು ಇತ್ತೀಚೆಗೆ ಬಿಡುಗಡೆಯಾಯಿತು.

ಧಾರಾವಾಹಿಗಳಲ್ಲಿ ಹಾಗೂ ಒಂದೆರಡು ಚಿತ್ರಗಳಲ್ಲಿ ನಟಿಸಿರುವ ಸುನಿಲ್ ಈ ಸಿನಿಮಾದಲ್ಲಿ ಮಧ್ಯಮ ವರ್ಗದ ಯುವಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆತನ ಬದುಕು, ಪ್ರೀತಿಯ ಕಥೆಯನ್ನು ಈ ಚಿತ್ರ ಹೊಂದಿದೆ. 'ಹುಡುಗನೊಬ್ಬ ಶ್ರೀಮಂತ ಮನೆತನದ ಯುವತಿಯನ್ನು ಪ್ರೀತಿಸಿ, ಆಕೆಯನ್ನು ಪಡೆಯಲು ಆಕೆಯ ತಂದೆಗೇ ಸವಾಲು ಹಾಕುತ್ತಾನೆ. ಕೊನೆಗೆ ಆ ಸವಾಲನ್ನು ಗೆದ್ದು ಅವಳನ್ನು ಮದುವೆಯಾಗಿ ಜೀವನ ಸಾಗಿಸಬೇಕೆನ್ನುವಾಗಲೇ ಆತನ ಜೀವನದಲ್ಲಿ ಎದುರಾಗುವ ಅನಿರೀಕ್ಷಿತ ಘಟನೆಗಳು ಅವನ ಜೀವನದ ದಿಕ್ಕನ್ನೇ ಬದಲಾಯಿಸಿಬಿಡುತ್ತದೆ. ಇದರಿಂದ ಹೊರಬರಲು ಆತ ಪಡುವ ಹರಸಾಹಸವೇ ಚಿತ್ರದ ಕಥಾಹಂದರ' ಎಂದಿದೆ ಚಿತ್ರತಂಡ. ಮುಳಗುಂದ ಕ್ರಿಯೇಷನ್ಸ್ ಮೂಲಕ ನಾಗರಾಜ್ ಎಸ್. ಮುಳಗುಂದ ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಚಿತ್ರದ ಕಥೆ ಕೂಡ ಅವರದೇ. ಚಿತ್ರಕ್ಕೆ ಸೂರ್ಯಕಿರಣ್ ಹಾಗೂ ಸುನಿಲ್ ಚಿತ್ರಕಥೆ, ಸಂಭಾಷಣೆಗಳನ್ನು ರಚಿಸಿದ್ದಾರೆ.



ಸುನಿಲ್

ನಾಗೇಶ್ ಮಯ್ಯ, ಪದ್ಮಜಾ ರಾವ್, ಬಲ ರಾಜವಾಡಿ, ಪೃಥ್ವಿರಾಜ್, ಸುಧಾಕರ ಬನ್ನಂಜೆ, ಸೂರ್ಯಕಿರಣ್, ಧನಂಜಯ್, ರಾಮ್ ಧನುಷ್, ಬೇಬಿ ರಿಧಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಜೀವನ್‌ಗೌಡ ಛಾಯಾಚಿತ್ರಗ್ರಹಣ, ಕೀರ್ತಿರಾಜ್ ಸಂಕಲನ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜನವರಿ 30, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಪ್ರತಿಪದ್ ಗಂ. 16-11 ನಕ್ಷತ್ರ: ಶ್ರವಣ ಗಂ. 07-15 ನಂತರ ಧನಿಷ್ಠ ಗಂ. 29-51 ಯೋಗ: ವ್ಯತೀಪಾತ ಗಂ. 18-33 ಕರಣ: ಬವ ಗಂ. 16-11, ಮಕರ ಮಾಸದ 16 ನೇ ದಿನ, ಮಳೆನಕ್ಷತ್ರ: ಶ್ರವಣ 3.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 07-01 ಸೂರ್ಯಾಸ್ತ : 06-27
ಮುಸ್ಲಿಂ ದಿನಾಂಕ : 29 ರಜಬ್
ದಿನ ವಿಶೇಷ : ಹುತಾತ್ಮರ ದಿನ, ಅದೃಷ್ಟ ಸಂಖ್ಯೆ : 1, 9

ಮೇಷ: ಸಹವರ್ತಿಗಳಲ್ಲಿ ಸಲಹೆ, ಸಹಕಾರಗಳನ್ನು ಕೋರುವುದು ಅನಿವಾರ್ಯ. ದೂರದೃಷ್ಟಿ ಇಟ್ಟುಕೊಂಡು ಕಾರ್ಯಪ್ರವೃತ್ತರಾಗುವುದು ಉತ್ತಮ. ಯಾವುದೇ ಅನಿವಾರ್ಯಗಳಿದ್ದರೂ ದೂರದ ಪ್ರಯಾಣ ಸರಿಯಲ್ಲ.

ವೃಷಭ: ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ಕೆಲಸ ದಾಯಾದಿಗಳಿಂದ ನಡೆಯಬಹುದು. ಜನ ಸಂಪರ್ಕ ಬೆಳೆಸಿಕೊಳ್ಳುವುದನ್ನು ಅಭ್ಯಸಿಸಿಕೊಳ್ಳಿ. ವ್ಯವಹಾರದಲ್ಲಿ ಹೆಚ್ಚಿನ ವಿಚಾರವಂತಿಕೆಯಿಂದ ವ್ಯವಹರಿಸಿ.

ಮಿಥುನ: ವೃತ್ತಿ ಜೀವನಕ್ಕೆ ಸಂಬಂಧಿಸಿದಂತೆ ನಿರ್ಧಾರ ತೆಗೆದುಕೊಳ್ಳುವಾಗ ಗೊಂದಲ ಉಂಟಾಗಬಹುದು. ಶ್ರಮಕ್ಕೆ ಮನೆಯವರ ಸಂಪೂರ್ಣ ಸಹಕಾರಗಳು ಒದಗಲಿವೆ. ಮಹಿಳೆಯರಿಗೆ ಅಧಿಕಾರ ಸಿಗಲಿದೆ.

ಕರ್ಕಾಟಕ: ಸಿನಿಮಾ ರಂಗದಲ್ಲಿ , ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶಗಳು ಸಿಗಲಿವೆ. ಹೊಸ ಬದುಕನ್ನು ಆರಂಭಿಸಲು ಬೇಕಾದ ಅವಕಾಶದ ಬಾಗಿಲು ತೆರೆಯುವುದು. ವದಂತಿಗಳಿಗೆ ಕಿವಿಗೊಡದಿರಿ.

ಸಿಂಹ: ಕೆಲಸವನ್ನು ಸಂಪೂರ್ಣವಾಗಿ ಕೊನೆಗಾಣಿಸುವ ಬಗ್ಗೆ ಜವಾಬ್ದಾರಿ ಇರಲಿ. ಉದ್ಯೋಗದ ಹುಡುಕಾಟ ನಡೆಸುವವರಿಗೆ ಅಪರಿಚಿತ ವ್ಯಕ್ತಿಯಿಂದ ಸಹಾಯ ಸಿಗಲಿದೆ. ಒತ್ತಡಗಳಿಂದ ಹೊರಬರುವಿರಿ.

ಕನ್ಯಾ: ಕಾನೂನು ವಿದ್ಯಾರ್ಥಿಗಳಿಗೆ ಅಥವಾ ನ್ಯಾಯಾಂಗ ಇಲಾಖೆಯವರಿಗೆ ಗೊಂದಲದ ವಾತಾವರಣ ಎದುರಾಗುವುದು. ರಕ್ಷಣಾ ಕ್ಷೇತ್ರದಲ್ಲಿರುವವರಿಗೆ ಅಭಿವೃದ್ಧಿ ತೋರಿ ಬರಲಿದೆ. ವಾಣಿಜ್ಯ ವ್ಯಾಪಾರಗಳಿಂದ ಅಧಿಕ ಲಾಭ.

ತುಲಾ: ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ನಿಮಗೆ ಮಸಿ ಬಳಿಯುವ ಪ್ರಯತ್ನ ನಡೆಯುವುದು. ಪ್ರಮುಖ ಗುರಿ ಸಾಧನೆಗಳಿಗೆ ಮುಂದಿನ ದಿನಗಳಲ್ಲಿ ಒಳ್ಳೆಯ ಬೇಡಿಕೆ ಸಿಗುವುದು.

ವೃಶ್ಚಿಕ: ವೃತ್ತಿಯಲ್ಲಿ ಅಧಿಕಾರಿಗಳು ಕಾರ್ಯಸಾಧನೆ ಗುರುತಿಸಿ, ಸೌಲಭ್ಯ ಒದಗಿಸಿ ಕೊಡುವರು. ಜೀವನ ಶೈಲಿಗೆ ಅತಿ ವಿರುದ್ಧವಾದ ಘಟನೆ ಈ ದಿನ ನಡೆಯಬಹುದು. ವಿವಾಹ ವಿಷಯಗಳು ಚಾಲನೆಗೊಳ್ಳಲಿವೆ.

ಧನು: ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ತೇಜೋವಧೆಯನ್ನು ಮಾಡಿದ ವ್ಯಕ್ತಿಗಳ ಎದುರು ಅವರಿಗಿಂತ ಉತ್ತಮ ಸ್ಥಿತಿಯಲ್ಲಿರುವ ನೀವು ವಿನಯವನ್ನು ಮರೆಯದಿರಿ. ಅದರಿಂದ ಕೀರ್ತಿಗೆ ಪಾತ್ರರಾಗುತ್ತೀರಿ.

ಮಕರ: ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಜನಮನ್ನಣೆ ಲಭ್ಯವಾಗುವುದು. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳವಾಗುವುದು.

ಕುಂಭ: ವೃತ್ತಿಯಲ್ಲಿ ಪರಿಸ್ಥಿತಿಯನ್ನು ಹತೋಟಿಗೆ ತರಲು ನಿಮ್ಮೊಳಗಿನ ನಾಯಕನನ್ನು ಜಾಗೃತಗೊಳಿಸುವಿರಿ. ಹಿರಿಯ ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತವಾದುದು ಎನಿಸಲಿದೆ. ಕೆಲಸದಲ್ಲಿ ಸಮಸ್ಯೆ ಎದುರಾಗಬಹುದು.

ಮೀನ: ಅಭಿವೃದ್ಧಿಯ ದಾರಿಗೆ ಕಗ್ಗಂಟುಗಳನ್ನು ಉಂಟುಮಾಡುವ ಸಂಬಂಧಿಕರಲ್ಲಿ ಯಾವುದೇ ವಿಚಾರ ವಿನಿಮಯ ಮಾಡದಿರುವುದು ಉತ್ತಮ. ಉದ್ಯೋಗಾಕಾಂಕ್ಷಿಗಳಿಗೆ ಬಯಸಿದ ಕ್ಷೇತ್ರದಲ್ಲಿ ಅವಕಾಶ ದೊರೆಯಲಿದೆ.

ತಾತ್ಪೂರ್ತಿಕ ಸತ್ಯ, ತಾತ್ವಿಕ ಸತ್ಯ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

121

ಈ ಜಗತ್ತಿಗೆ ಮಾಯೆ ಅಂತೀವಿ. ಮಾಯೆ ಎಂದರೆ ನಾನು ತಿಳಿದುಕೊಂಡ ಹಾಗೆ ಅದು ಇಲ್ಲ; ಅದು ಇದ್ದ ಹಾಗೆ ನಮಗೆ ತಿಳಿದಿಲ್ಲ. ಅದೇ ಮಾಯೆ. ಗಂಡಿಗೆ ಹೆಣ್ಣು ಮಾಯೆ, ಹೆಣ್ಣಿಗೆ ಗಂಡು ಮಾಯೆ. ಗಂಡು–ಹೆಣ್ಣು ಇಬ್ಬರಿಗೂ ಜಗತ್ತು ಮಾಯೆ. ಯಾವುದು ಸತ್ಯ, ಯಾವುದು ಸುಳ್ಳು ಅಂತ ಹೇಗೆ ಹೇಳೋದು ಈ ಜಗತ್ತಿನಲ್ಲಿ. ಅದಕ್ಕೆ ನಮ್ಮ ಹಿರಿಯರು ಸಂಶೋಧನೆ ಮಾಡಿ ಒಂದು ವಿಷಯ ಹೇಳಿದರು. ಈ ಜಗತ್ತಿನಲ್ಲಿ ಎರಡು ಸತ್ಯ ಇವೆ; ಒಂದು ತಾತ್ಪೂರ್ತಿಕ ಸತ್ಯ, ಇನ್ನೊಂದು ತಾತ್ವಿಕ ಸತ್ಯ. ತಾತ್ಪೂರ್ತಿಕ ಸತ್ಯ ಎಂದರೆ, ಸತ್ಯದಂತೆ ಕಾಣುತ್ತದೆ ಆದರೆ ಸತ್ಯವಲ್ಲ. ಸತ್ಯದಂತೆ ಕಂಡು ಮರೆಯಾಗುತ್ತದೆ. ಕಾಯಂ ಇರೋದಿಲ್ಲ. ತಾತ್ವಿಕ ಸತ್ಯ ಎಂದರೆ ಕಾಯಂ ಇರೋದು; ಶಾಶ್ವತ ಸತ್ಯ.

ಒಂದು ಮನೆ ಇತ್ತು. ಜಗಲಿಯಲ್ಲಿ ಒಂದು ಹಣತೆ ಹಚ್ಚಿಟ್ಟಿದ್ದರು. ಮಗ್ಗುಲಲ್ಲೇ ಬಚ್ಚಲು ಮನೆ ಇತ್ತು. ಅದರಲ್ಲಿ ಒಂದು ಮುಸುರೆ ಗಡಿಗೆ ಇತ್ತು. ಹಣತೆ ಮುಸುರೆ ಗಡಿಗೆಯನ್ನು ನೋಡಿ 'ನಮಗೆ ಎಷ್ಟು ಕಿಮ್ಮತ್ ಐತಿ ನೋಡು. ನಮ್ಮನ್ನು ಮೇಲೆ ಕುಳ್ಳಿರಿಸಿದ್ದಾರೆ. ನಾನು ದೊಡ್ಡವ' ಎಂದಿತು. ಅದಕ್ಕೆ ಮುಸುರೆ ಗಡಿಗೆ 'ಮೇಲೆ ಕುಳ್ಳಿರಿಸಿದ್ದಾರೆ ಎಂದು ದೊಡ್ಡವ ಅಂದುಕೋಬೇಡ. ಮೇಲೆ ಕುಂತವರೆಲ್ಲ ದೊಡ್ಡವರಲ್ಲ. ದೊಡ್ಡವರನ್ನೆಲ್ಲಾ ಮೇಲೆ ಕುಳ್ಳಿರಿಸುವುದೂ ಇಲ್ಲ' ಎಂದಿತು. 'ಹುಚ್ಚಿದಿ ನೀನು. ನಿನ್ನ ಎಲ್ಲಿ ಕುಳ್ಳಿರಿಸಿದ್ದಾರೆ ನೋಡು. ನಿನಗ ಮುಸುರಿ ಹಾಕ್ತಾರ. ನನಗಾದರೆ ಹಾಗಲ್ಲ. ದೇವರ ಮುಂದೆ ಇಟ್ಟಾರ. ದೇವರಿಗೆ ಕೈ ಮುಗಿದವರು ನನಗೂ ಕೈಮುಗೀತಾರೆ' ಎಂದು ಹೇಳಿತು. ಅದೇ ಹೊತ್ತಿಗೆ ಮನೆಯಲ್ಲಿದ್ದ ಇಲಿ ಹೊರಕ್ಕೆ ಬಂತು. ಅದನ್ನು ಬೆಕ್ಕು ಅಟ್ಟಿಸಿಕೊಂಡು ಹೋತು. ಇಲಿ ತಾಗಿ ಹಣತೆ ಬಿದ್ದು ಒಡೆಯಿತು. ಇಲಿ, ಬೆಕ್ಕಿನ ಜಗಳದಲ್ಲಿ ಮುಸುರೆ ಗಡಿಗೆ ಕೂಡಾ ಕೆಳಕ್ಕೆ ಬಿದ್ದು ಅದೂ ಒಡೆಯಿತು. ಮನೆಯ ಯಜಮಾನಿ ಬಂದು ಒಡೆದು ಬಿದ್ದಿದ್ದ ಹಣತೆ ಮತ್ತು ಗಡಿಗೆ ಎರಡನ್ನೂ ಒಟ್ಟಿಗೇ ತೆಗೆದು ಬಿಸಾಕಿದಳು. ಆಗ ಗಡಿಗೆ ಹಣತೆಗೆ 'ನೀವು ದೊಡ್ಡವರಲ್ಲ, ಇಲ್ಯಾಕೆ ಬಂದ್ರಿ' ಎಂದು ಕೇಳಿತು. ಅದಕ್ಕೆ ಹಣತೆ 'ನನಗೆ ಈಗ ಸತ್ಯ ಗೊತ್ತಾಯಿತು' ಎಂದಿತು. 'ನಿನಗೆ ಏನು ಸತ್ಯ ಗೊತ್ತಾತು' ಎಂದು ಹಣತೆ ಕೇಳಿತು. 'ನನ್ನ ಮತ್ತು ನಿನ್ನ ಹೆಸರು, ರೂಪ ಬೇರೆ ಬೇರೆ. ಆದರೆ ಇಬ್ಬರ ಮೂಲ ಮಣ್ಣು ಎಂಬ ಸತ್ಯ ಗೊತ್ತಾಗೈತಿ' ಎಂದು ಹೇಳಿತು.


ಹಣತೆ, ಗಡಿಗೆ ಎನ್ನುವುದು ತಾತ್ಪೂರ್ತಿಕ ಸತ್ಯಗಳು, ಮಣ್ಣು ತಾತ್ವಿಕ ಸತ್ಯ. ಮಣ್ಣು ಇರೋದರಿಂದ ಇವು ಆಕಾರ ಪಡೆದಿವೆ. ಮಣ್ಣು ಬಿಟ್ಟರೆ ಇವಕ್ಕೆ ಅಸ್ತಿತ್ವವೇ ಇಲ್ಲ. ಹಣತೆ, ಗಡಿಗೆ ಇವುಗಳಿಗೆ ಇರುವಿಕೆ ಇಲ್ಲ. ಒಂದು ಕ್ಷಣ ತೋರಿ ಮರೆಯಾಗಿ ಹೋಗುತ್ತವೆ. ಆದರೆ, ಮಣ್ಣಿಗೆ ಇಲ್ಲದಿರುವಿಕೆ ಇಲ್ಲ. ಅದು ಯಾವಾಗಲೂ ಇರುತ್ತದೆ. ಇರುವಿಕೆ ಮತ್ತು ಇಲ್ಲದಿರುವಿಕೆ ಎರಡನ್ನೂ ಯಾರು ಅರಿತು ಬದುಕುತ್ತಾನಲ್ಲ, ಅವನನ್ನು ಜ್ಞಾನಿ ಅಂತ ಕರೀತಾರೆ. ಜಗತ್ತು ಅಂದರೂ ಹಾಗೆ; ಇದ್ದ ಹಾಗೆ ಅದು ಇಲ್ಲ. ಈ ಸತ್ಯವನ್ನು ಅರಿಯಬೇಕು ಮನುಷ್ಯ. ❖

ಪದಬಂಧ 5938

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ (3)
2.ಸೇನಾನಾಯಕನಿವನು (4)
4.ತಿರುಗಿದಾಗ ಕಾಣಿಸಿದ್ದು ಆನೆಗಳ ಗುಂಪಿನ ನಾಯಕ (3)
7.ಸಭೆಯಲ್ಲಿ ಕುಳಿತಿರುವವನು (3)
8.ತೆಳ್ಳಗಿರುವ ಸೊಂಟ (4)
9.ಜಟಿಲತೆಯಿಂದ ಹಿಡಿದಿರುವ ನೀರು (2)
10.ಉತ್ತರದವರ ಚಿಕ್ಕಪ್ಪ (2)
11.ಮಾನವುಳ್ಳ ಒಡೆಯ (4)
13.ದನಕರುಗಳ ಮೂತ್ರ (3)
14.ನರಿ ಹಿಡಿದಿರುವ ಜೇನುತುಪ್ಪ (3)
16.ಜಾತನ ಹತ್ತಿರ ಕಾಣಿಸಿದ ಅಗ್ನಿ (4)
17.ಕಣದೊಳಗೆ ನಡೆದ ಮದುವೆ (3)

ಮೇಲಿಂದ ಕೆಳಕ್ಕೆ
1.ಮಾರ್ಗದಲ್ಲಿ ದೂರವನ್ನು ಸೂಚಿಸುವ ಕಲ್ಲು (4)
2.ನದಿ ಸಮುದ್ರಗಳ ತೀರ (2)
3.ಕಿರೀಟಧಾರಣ ಮಹೋತ್ಸವ (5)
5.ಶಕ್ತಿಯಿಂದ ಕೂಡಿದುದು (3)
6.ಕಾಡಿನಲ್ಲಿ ಮಾಡಿದ ಊಟ (5)
9.ಮಂದಿಗೆಲ್ಲಾ ತಿಳಿದಿರುವಂಥದ್ದು (5)
10.ಅರಣ್ಯ ಇಲ್ಲಿ ಕಾಣುತ್ತಿದೆ (3)
12.ಹರಿಯ ಮುಂದಿರಿಸಿದ ಅಗಲವಾದ ತಟ್ಟೆ (4)
15.ಕಲಾವಿದನ ಮನೆ ಬಾಗಿಲು (2)



5937ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿವರ್ತನೆ 3.ಭಾಜಕ
5.ವರ್ಣಸಂಕರ
7.ನೆಗಡಿ 8.ಅತಿಕ್ರಮಪ್ರವೇಶ
12.ನಿರೀಕ್ಷೆ 13.ಹೊಸಜೀವನ
16.ರಥಾಂಗ 17.ಹೆರಿಗೆಮನೆ

ಮೇಲಿಂದ ಕೆಳಕ್ಕೆ:
1.ಪಲ್ಲವ 2.ವಭಸಂ
4.ಕರಡಿಗೆ 6.ಕಮುಕ್ರ
7.ನೆದವೇ 9.ತಿಕ್ಷೆ
10.ಪ್ರಯಾಸ 11.ಜನಿವಾರ
14.ಜೇರಿಗೆ 15.ನಮೂನೆ

ಸುಡೊಕು 6323

	6			7		2	9	
	8		5	2		1	6	
1		5					8	
4			2		5			1
	9						2	
		9	3				4	
7			9		8	5		2
	5			4			3	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6322 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,957
ಇಂದಿನ ಅಂತ್ಯ	23,163
▲	205
ದಿನದ ಗರಿಷ್ಠ	23,183

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹535
12 ಕ್ಕೆ	₹70
ಮೈಸೂರು	
100ಕ್ಕೆ	₹535

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಪ್ರ.ಕೆ)	₹518-690
ದ್ವಿತಳಿ (ಪ್ರ.ಕೆ)	₹233-890

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹187
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹177

(ಪ್ರತಿ ಕೆ.ಜಿಗೆ)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-36000
ಹಳತು	45500-49500
ಕುಮಟ	
ಬೆಟ್ಟೆ	18000-35000
ಚಾಲಿ	32869-37119
ಚಿಪ್ಪು	15569-25869
ಕೋಕ	6099-20169
ಫ್ಯಾಕ್ಟರಿ	3019-24400
ಹಳೆಚಾಲಿ	36509-39099
ಹೊಸಚಾಲಿ	27089-32099
ಶಿವಮೊಗ್ಗ	
ಬೆಟ್ಟೆ	40366-56919
ಗೊರಬಲು	18000-33089
ರಾಶಿ	36366-51549
ಸರಕು	55119-82600
ಸಿದ್ದಾಪುರ	
ಬಿಳಿಗೋಟು	23209-26900
ಚಾಲಿ	32109-37699
ಕೋಕ	18699-22119
ಹೊಸಚಾಲಿ	22639-30299
ಕೆಂಪುಗೋಟು	20109-23899
ರಾಶಿ	43309-49799
ತಟ್ಟಿಬೆಟ್ಟೆ	27819-41099
ಶಿರಸಿ	
ಬೆಟ್ಟೆ	28221-39899
ಬಿಳಿಗೋಟು	15099-28899
ಚಾಲಿ	35209-40088
ಕೆಂಪುಗೋಟು	12099-24218
ರಾಶಿ	42099-46899

ಖನಿಜ ಮಿಷನ್ ₹16,300 ಕೋಟಿ ನೀಡಲು ಒಪ್ಪಿಗೆ

ನವದೆಹಲಿ (ಪಿಟಿಐ): ನ್ಯಾಷನಲ್ ಕ್ರಿಟಿಕಲ್ ಮಿನರಲ್ ಮಿಷನ್‌ಗೆ ₹16,300 ಕೋಟಿ ನೀಡಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಮಿಷನ್‌ನಡಿ ಮುಂದಿನ ಏಳು ವರ್ಷಗಳಲ್ಲಿ ₹34,300 ಕೋಟಿ ವೆಚ್ಚ ಮಾಡಲು ನಿರ್ಧರಿಸಿದೆ.

ಮಿಷನ್‌ನಡಿ 24 ಅಮೂಲ್ಯ ಖನಿಜಗಳನ್ನು ಗುರುತಿಸಲಾಗಿದೆ. ಈ ನಿರ್ಣಾಯಕ ಖನಿಜಗಳ ಪರಿಶೋಧನೆಗೆ ಆರ್ಥಿಕ ನೆರವು ಲಭಿಸಲಿದೆ.

2024–25ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರವು ಈ ಮಿಷನ್ ಅನ್ನು ಘೋಷಿಸಿತ್ತು. ಹಸಿರು ಶಕ್ತಿ ಪರಿವರ್ತನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಇದರ ಪ್ರಮುಖ ಗುರಿಯಾಗಿದೆ.

ತಾಮ್ರ, ಲಿಥಿಯಂ, ನಿಕ್ಕಲ್, ಕೋಬಾಲ್ಟ್ ಸೇರಿ ಅಪರೂಪದ ಖನಿಜಗಳು ನವೀಕರಿಸಬಹುದಾದ ಇಂಧನ ಉತ್ಪಾದನೆ, ವಿಂಡ್ ಟರ್ಬೈನ್, ಇ.ವಿ ವಾಹನ ಮತ್ತು ಬ್ಯಾಟರಿ ತಯಾರಿಕೆಯಲ್ಲಿ ನಿರ್ಣಾಯಕವಾಗಿವೆ ಎಂದು ಕೇಂದ್ರ ಖನಿಜಗಳ ಸಚಿವಾಲಯ ಹೇಳಿದೆ.

ಚಿನ್ನದ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹910 ಹೆಚ್ಚಳವಾಗಿ, ₹83,750ರಂತೆ ಮಾರಾಟವಾಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಪರಿಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹83,350 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಸಾವಿರ ಹೆಚ್ಚಳವಾಗಿ, ₹93 ಸಾವಿರಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಲೀಟರ್‌ಗೆ ₹1.69 ಹೆಚ್ಚಳ: ರೈತರಿಗೂ ಲಾಭ– ಕೇಂದ್ರ

ಎಥೆನಾಲ್ ದರ ಏರಿಕೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು, ಸಿ-ಹೆವಿ ಮೊಲಾಸಿಸ್‌ನಿಂದ (ಕಾಕಂಬಿ) ಉತ್ಪಾದಿಸುವ ಎಥೆನಾಲ್ ದರವನ್ನು ಶೇ 3ರಷ್ಟು ಹೆಚ್ಚಿಸಲು ಒಪ್ಪಿಗೆ ನೀಡಿದೆ. ಒಟ್ಟಾರೆ ಲೀಟರ್‌ಗೆ ₹1.69 ಹೆಚ್ಚಳವಾಗಲಿದೆ.

ಪ್ರತಿ ಲೀಟರ್ ಬೆಲೆ ₹57.97 ಆಗಲಿದ್ದು, 2024–25ನೇ ಪೂರೈಕೆ ವರ್ಷಕ್ಕೆ (ನವೆಂಬರ್–ಅಕ್ಟೋಬರ್) ಈ ಪರಿಷ್ಕೃತ ದರ ಅನ್ವಯವಾಗಲಿದೆ.

ಪ್ರಸ್ತುತ ಬಿ-ಹೆವಿ ಮೊಲಾಸಿಸ್‌ನಿಂದ ತಯಾರಿಸುವ ಎಥೆನಾಲ್ ದರ ಲೀಟರ್‌ಗೆ ₹60.73 ಇದೆ. ಕಬ್ಬಿನ ಹಾಲು, ಸಕ್ಕರೆ ಹಾಗೂ ಸಕ್ಕರೆ ಪಾಕ ಬಳಸಿ ತಯಾರಿಸುವ ಎಥೆನಾಲ್ ದರವು ಲೀಟರ್‌ಗೆ ₹65.61 ಇದೆ. ಸರ್ಕಾರವು ಈ ಬೆಲೆಯನ್ನು ಪರಿಷ್ಕರಿಸಿಲ್ಲ.

2023ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲ್‌ನೊಂದಿಗೆ ಶೇ 20ರಷ್ಟು ಎಥೆನಾಲ್ ಮಿಶ್ರಣ ಯೋಜನೆಗೆ ಚಾಲನೆ ನೀಡಿದ್ದರು. ಸರ್ಕಾರವು 2030ರೊಳಗೆ ಈ ಗುರಿ ಸಾಧನೆಗೆ ನಿರ್ಧರಿಸಿತ್ತು. ಆದರೆ, 2025–26ನೇ ಆರ್ಥಿಕ ವರ್ಷದಲ್ಲಿಯೇ ಈ ಗುರಿ ಸಾಧಿಸಲು ಮುಂದಾಗಿದೆ.


ಎಥೆನಾಲ್ ಮಿಶ್ರಣದ ಗುರಿ ಈಡೇರಿಕೆಗೆ ಪೂರಕವಾಗಿ ಈ ದರ ಪರಿಷ್ಕರಣೆ ಮಾಡಿದೆ. ಅಲ್ಲದೆ, ಕಬ್ಬಿನ ಉಪ ಉತ್ಪನ್ನಗಳಿಂದ ಎಥೆನಾಲ್ ತಯಾರಿಕೆ ಹೆಚ್ಚಳಕ್ಕೆ ಅನುಕೂಲ ಕಲ್ಪಿಸುವ ಆಶಯವೂ ಇದರ ಹಿಂದಿದೆ.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಸರ್ಕಾರದ ಈ ನಿರ್ಧಾರದಿಂದ ಕಬ್ಬು ಬೆಳೆಗಾರರು ಹಾಗೂ ಪರಿಸರಕ್ಕೂ ಅನುಕೂಲವಾಗಲಿದೆ ಎಂದು ಹೇಳಿದರು.

ಸರ್ಕಾರವು ದರ ಏರಿಕೆ ಮಾಡಿರುವುದರಿಂದ ಸರ್ಕಾರಿ ಸ್ವಾಮ್ಯದ ತೈಲ ಉತ್ಪಾದನಾ ಕಂಪನಿಗಳು 2024–25ನೇ ಪೂರೈಕೆ ವರ್ಷಕ್ಕೆ ಸಂಬಂಧಿಸಿದಂತೆ ಎಥೆನಾಲ್ ಖರೀದಿಸುವ ದರವನ್ನು ಪರಿಷ್ಕರಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

‘ಬಿ-ಹೆವಿ ಮೊಲಾಸಿಸ್ ಹಾಗೂ ಸಕ್ಕರೆ ಪಾಕದಿಂದ ಉತ್ಪಾದಿಸುವ ಎಥೆನಾಲ್ ಬೆಲೆ ಏರಿಕೆ ಮಾಡಿಲ್ಲ. ಆ ಮೂಲಕ ಸಕ್ಕರೆ ಉತ್ಪಾದನೆಯ ಹೆಚ್ಚಳಕ್ಕೆ ಸರ್ಕಾರವು ಮುನ್ನೆಚ್ಚರಿಕೆಯ ಹೆಜ್ಜೆ ಇಟ್ಟಿದೆ’ ಎಂದು ಅಖಿಲ ಭಾರತ ಸಕ್ಕರೆ ವ್ಯಾಪಾರಿಗಳ ಒಕ್ಕೂಟದ (ಎಐಎಸ್‌ಟಿಎ) ಅಧ್ಯಕ್ಷ ಪ್ರಫುಲ್ ವಿಠಲನಿ ಹೇಳಿದ್ದಾರೆ.

707 ಕೋಟಿ ಲೀಟರ್ ಮಿಶ್ರಣ



ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು 2013–14ರಲ್ಲಿ ಪೆಟ್ರೋಲ್‌ನೊಂದಿಗೆ 38 ಕೋಟಿ ಲೀಟರ್‌ನಷ್ಟು ಎಥೆನಾಲ್ ಮಿಶ್ರಣ ಮಾಡಿದ್ದವು. 2023–24ರಲ್ಲಿ ಈ ಪ್ರಮಾಣವು 707 ಕೋಟಿ ಲೀಟರ್‌ಗೆ ಮುಟ್ಟಿದೆ. ಒಟ್ಟಾರೆ ಶೇ 14.60ರಷ್ಟು ಸಾಧನೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಎಥೆನಾಲ್ ಮಿಶ್ರಿತ ಪೆಟ್ರೋಲ್ ಯೋಜನೆಯಡಿ ಕಳೆದ ವರ್ಷದ ಡಿಸೆಂಬರ್ 1ರವರೆಗೆ ₹1.13 ಲಕ್ಷ ಕೋಟಿಯಷ್ಟು ವಿದೇಶಿ ವಿನಿಮಯ ಮೀಸಲು ಉಳಿತಾಯವಾಗಿದೆ. 193 ಲಕ್ಷ ಟನ್‌ನಷ್ಟು ಕಚ್ಚಾ ತೈಲದ ಬದಲಿಗೆ ಎಥೆನಾಲ್ ಬಳಸಲಾಗಿದೆ ಎಂದು ವಿವರಿಸಿದೆ.

₹3,200 ಕೋಟಿ ಜಿಎಸ್‌ಟಿ ವಂಚನೆ

ಒಂದನೇ ಪುಟದಿಂದ...

ಈ ಕಂಪನಿಗಳು ಕಾರ್ಯ ನಿರ್ವಹಿಸುತ್ತಿದ್ದ ಸ್ಥಳಗಳಲ್ಲಿ ನಡೆದ ತಪಾಸಣೆ ವೇಳೆ ನಕಲಿ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೆ, ಈ ಆರೋಪಿಗಳು ಹಲವು ಕಂಪನಿಗಳನ್ನು ನಿರ್ವಹಣೆ ಮಾಡುತ್ತಿದ್ದುದು ಕಂಡುಬಂದಿದೆ ಎಂದು ಹೇಳಿದ್ದಾರೆ.

‘ಇಂತಹ ನಕಲಿ ಕಂಪನಿಗಳು ಜನಸಾಮಾನ್ಯರ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಲಿವೆ. ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು’ ಎಂದು ತಿಳಿಸಿದ್ದಾರೆ.


ಷೇರುಪೇಟೆಯಲ್ಲಿ ನಕಲಿ ಕಂಪನಿ ನೋಂದಣಿ

ಅಧಿಕಾರಿಗಳು ಕಾರ್ಯಾಚರಣೆ ವೇಳೆ 15 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಿದ್ದಾರೆ. ಈ ಪೈಕಿ ಒಂಬತ್ತು ಕಂಪನಿಗಳು ಷೇರುಪೇಟೆಯಲ್ಲಿ ನೋಂದಣಿಯಾಗಿರುವುದು ಬಯಲಾಗಿದೆ.

ಈ ಕಂಪನಿಗಳ ಪ್ರವರ್ತಕರು ವಹಿವಾಟು ಹೆಚ್ಚಳ, ಷೇರಿನ ಮೌಲ್ಯ ಏರಿಕೆ ಹಾಗೂ ಕಂಪನಿಗಳಲ್ಲಿ ಹೂಡಿಕೆ ಮಾಡುವಂತೆ ಜನಸಾಮಾನ್ಯರನ್ನು ಸೆಳೆಯಲು ನಕಲಿ ಇನ್‌ವಾಯ್ಸ್ ಸೃಷ್ಟಿಸಿದ್ದಾರೆ. ಇ–ಇನ್‌ವಾಯ್ಸ್ ಸೇರ್ಪಡೆ ಮಾಡದೆಯೇ ಇ–ವೇ ಬಿಲ್ ಸೃಷ್ಟಿಸಿರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ಡಿಜಿಜಿಐ ಅಧಿಕಾರಿಗಳು ತಿಳಿಸಿದ್ದಾರೆ. ಈ ಕಂಪನಿಗಳು ₹100 ಕೋಟಿಗೂ ಹೆಚ್ಚು ಮೌಲ್ಯದ ಎಫ್‌ಎಂಸಿಜಿ ಸರಕುಗಳನ್ನು ಸ್ವೀಕರಿಸಿವೆ ಎಂದು ದಾಖಲೆ ಸೃಷ್ಟಿಸಲಾಗಿದೆ. ಐ.ಟಿ, ನಿರ್ವಹಣಾ ಸಂಸ್ಥೆ ಮತ್ತು ಜಾಹೀರಾತುಗಳಿಗಷ್ಟೇ ಇನ್‌ವಾಯ್ಸ್ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸಾಮಾನ್ಯ ಐಪಿ ವಿಳಾಸ ಬಳಸಿಕೊಂಡೇ ಈ ಕಂಪನಿಗಳು ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸಿವೆ. ಬಂಧಿತ ಆರೋಪಿಗಳೇ ಈ ಕೃತ್ಯ ಎಸಗಿದ್ದಾರೆ ಎಂದು ಹೇಳಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ದೇವರಾಜು ಎಲ್., ಊರು ತಿಳಿಸಿಲ್ಲ.

- **ಪ್ರಶ್ನೆ: ನಾನು ನ್ಯಾಯಾಲಯ ಆದೇಶದ ಮೇರೆಗೆ ಪಡೆದಿದ್ದ ಪಿತ್ರಾರ್ಜಿತ ಕೃಷಿ ಭೂಮಿಯನ್ನು ಮಾರಾಟ ಮಾಡಲು ಚಿಂತಿಸಿದ್ದೇನೆ. ಇದರ ವಿಸ್ತೀರ್ಣ ಸುಮಾರು 8 ಗುಂಟೆ ಇದೆ. ಇದಕ್ಕೆ ತೆರಿಗೆ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ನನ್ನ ಈ ಮಾಹಿತಿ ಸರಿಯೇ ಎಂಬ ಬಗ್ಗೆ ತಿಳಿಸಿ.**

ಉತ್ತರ: ನೀವು ತಿಳಿಸಿರುವ ಮಾಹಿತಿಯು ಪ್ರಸ್ತುತ ಇರುವ ಆದಾಯ ತೆರಿಗೆ ಕಾನೂನಿನ ಅನ್ವಯ ಸರಿಯಾದುದು. ಬಂಡವಾಳ ಆಸ್ತಿಯ ಪರಿಧಿಯಲ್ಲಿ ಬರುವ ಆಸ್ತಿಗಳು ಮಾತ್ರ ತೆರಿಗೆಗೊಳಪಡುತ್ತವೆ. ಆದರೆ, ಗ್ರಾಮೀಣ ಕೃಷಿ ಭೂಮಿಯನ್ನು ಬಂಡವಾಳ ಆಸ್ತಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಹೀಗಾಗಿ, ಅಂತಹ ಆಸ್ತಿಗಳಿಗೆ ಮಾರಾಟದ ಸಂದರ್ಭದಲ್ಲಿ ಆದಾಯ ತೆರಿಗೆ ಇರುವುದಿಲ್ಲ.

ಅಂತಹ ಕೃಷಿ ಭೂಮಿಯು ನಿಮ್ಮ ಸಮೀಪದ ಮುನಿಸಿಪಾಲಿಟಿ ವ್ಯಾಪ್ತಿಯಿಂದ ಹೊರಗಿರಬೇಕು. ಇದು ಅಲ್ಲಿನ ಜನಸಂಖ್ಯೆಗೆ ಅನುಗುಣವಾಗಿ 10,000ದಿಂದ 1 ಲಕ್ಷ, 1 ಲಕ್ಷದಿಂದ 10 ಲಕ್ಷ ಹಾಗೂ 10 ಲಕ್ಷ ಮೀರಿದ ಸ್ಥಳವಾಗಿದ್ದರೆ ಕ್ರಮವಾಗಿ 2, 6, 8 ಕಿ.ಮೀ ವ್ಯಾಪ್ತಿಯಿಂದ ಹೊರಗಿರಬೇಕು. ಈ ಬಗ್ಗೆ ನಿಮ್ಮ ಕೃಷಿ ಭೂಮಿ ಇರುವ ಸ್ಥಳಕ್ಕೆ ಹೊಂದಿಕೊಂಡು ನಿರ್ಣಯಿಸಿಕೊಳ್ಳಿ. ಅಕಸ್ಮಾತ್ ಪಟ್ಟಣದ ವ್ಯಾಪ್ತಿಯಲ್ಲಿ ಈ ಭೂಮಿ ಬರುವುದಿದ್ದರೆ ತೆರಿಗೆ ಇರುತ್ತದೆ ಅಥವಾ ನಿಗದಿತ ಹೂಡಿಕೆಗಳಲ್ಲಿ ನಿಮ್ಮ ಮಾರಾಟದ ಮೊತ್ತ ಹೂಡಿಕೆ ಮಾಡಿ ತೆರಿಗೆ ತಗ್ಗಿಸುವ ಅವಕಾಶವೂ ಇರುತ್ತದೆ.

ರವಿಕುಮಾರ್, ಕಲ್ಯಾಣ ನಗರ, ಬೆಂಗಳೂರು.

- **ಪ್ರಶ್ನೆ: ನನ್ನ ತಂದೆಯವರು ಇತ್ತೀಚೆಗೆ ಮೃತರಾದರು. ಅವರು ಸರ್ಕಾರಿ ಉದ್ಯೋಗಿಯಾಗಿದ್ದರು. ನಿವೃತ್ತಿ ನಂತರ ಅವರಿಗೆ ಪಿಂಚಣಿ ಬರುತ್ತಿತ್ತು. ಅನೇಕ ಕಂಪನಿಗಳ ಷೇರುಗಳಲ್ಲಿ ಅಲ್ಪಸ್ವಲ್ಪ ಹೂಡಿಕೆ ಇದೆ. ಇದು ಪ್ರಸ್ತುತ ಬೆಲೆಯಲ್ಲಿ ಸುಮಾರು ₹5 ಲಕ್ಷ ಮೌಲ್ಯ ಆಗಬಹುದು. ಅದೇ ರೀತಿ ಮ್ಯೂಚುವಲ್ ಫಂಡ್‌ಗಳಲ್ಲೂ ಹೂಡಿಕೆ ಇದೆ. ಅವರ ಹೆಸರಲ್ಲಿ ಒಂದು ಬಾಡಿಗೆ ಗಳಿಸುತ್ತಿರುವ ಮನೆಯೂ ಇದೆ. ಕಂಪನಿಯ ಹೂಡಿಕೆಯಿಂದ ಡಿವಿಡೆಂಡ್ ಅವರ ಬ್ಯಾಂಕ್ ಖಾತೆಗೆ ನೇರ ಜಮಾ ಆಗುತ್ತಿದೆ. ಆದರೆ, ಅದನ್ನು ನಾವು ತೆಗೆಯಲು ಸಾಧ್ಯ ಆಗುತ್ತಿಲ್ಲ. ಅದೇ ರೀತಿ ಅವರ ಡಿಮ್ಯಾಟ್ ಖಾತೆಯ ಲಾಭದಲ್ಲಿರುವ ಷೇರುಗಳನ್ನು ಆನ್‌ಲೈನ್ ಖಾತೆ ಮೂಲಕ ಮಾರಾಟ ಮಾಡುವ ಬಗ್ಗೆ ಯೋಚಿಸಿದ್ದೇವೆ. ಆದರೆ, ಪುನಃ ಅದೇ ಬ್ಯಾಂಕ್ ಖಾತೆಗೆ ಹಣ ಜಮಾ ಆಗುತ್ತದೆ. ನಮ್ಮ ಪ್ರಶ್ನೆ ಏನೆಂದರೆ ಈ ಮಾರಾಟದ ಮೇಲೆ ತೆರಿಗೆ, ಬ್ಯಾಂಕ್ ಬಡ್ಡಿ, ಬಾಡಿಗೆ ಆದಾಯ, ಡಿವಿಡೆಂಡ್ ಆದಾಯ ಹಾಗೂ ಅವರ ಪಿಂಚಣಿ ಆದಾಯಕ್ಕೆ ತೆರಿಗೆ ಹೇಗೆ ಅನ್ವಯ ಆಗುತ್ತದೆ. ನಾನು ಅಥವಾ ನನ್ನ ತಾಯಿಯವರು ತೆರಿಗೆ ಕಟ್ಟಬೇಕೆ? ಇದೇ ಆರ್ಥಿಕ ವರ್ಷದಲ್ಲಿ ನನ್ನ ತಂದೆಯವರು ಮೃತರಾದ ಕಾರಣ ಅವರ ಪ್ಯಾನ್ ಬಳಸಿ ಅವರ ಹೆಸರಲ್ಲೇ ರಿಟರ್ನ್ಸ್ ಸಲ್ಲಿಕೆ ಹಾಗೂ ತೆರಿಗೆ ಪಾವತಿಸಬೇಕೇ. ಅವರ ಮರಣ ಪತ್ರ ದಾಖಲೆ ಇದೆ. ಮುಂದೆ ನಾವು ಯಾವ ರೀತಿ ಮುಂದುವರಿಯಬೇಕು?**

ಉತ್ತರ: ನಿಮ್ಮ ತಂದೆ ನಿವೃತ್ತಿ ಹೊಂದಿರುವ ಕಾರಣ ಅವರು ಬದುಕಿರುವ ತನಕ ಪಡೆಯುತ್ತಿದ್ದ ಪಿಂಚಣಿಯು ಅವರ ಹೆಸರಲ್ಲೇ ತೆರಿಗೆಗೊಳಪಡುತ್ತದೆ. ಆದರೆ, ಅದೇ ಪಿಂಚಣಿಯನ್ನು ನಿಮ್ಮ ತಾಯಿ ಮುಂದೆ ಗಳಿಸುತ್ತಿದ್ದರೆ, ಅವರಿಗೆ ಅದು ಕೌಟುಂಬಿಕ ಪಿಂಚಣಿ ಆಗಿ ತಾಯಿಯ ಆದಾಯದಲ್ಲಿ ತೆರಿಗೆಗೆ ವರ್ಗವಾಗುತ್ತದೆ. ಇದು ಮುಂದೆ ಇತರೆ ಆದಾಯವಾಗಿ ತೆರಿಗೆಗೊಳಪಡುತ್ತದೆ. ಬದುಕಿದ್ದಾಗ ಸಿಕ್ಕಿದ ಪಿಂಚಣಿ ಅವರ ಉತ್ತರಾಧಿಕಾರಿಗಳಾಗಿ ನಿಮ್ಮ ಮೂಲಕ ಅಥವಾ ತಾಯಿ ಮೂಲಕ ಸಲ್ಲಿಸಬೇಕಾಗುತ್ತದೆ. ಇದೇ ನಿಯಮ ಇತರೆ ಆದಾಯಕ್ಕೂ ಅನ್ವಯಿಸುತ್ತದೆ.

ಆದಾಯ ತೆರಿಗೆಯ ಸೆಕ್ಷನ್ 159ರ ಪ್ರಕಾರ ಮೃತರ ಉತ್ತರಾಧಿಕಾರಿಗಳು ಮರಣದ ತನಕ ಗಳಿಸಿದ ಆದಾಯಕ್ಕೆ ಮೃತರ ಪರವಾಗಿ ಬಾಧ್ಯಸ್ಥರು. ಆದರೆ, ತದನಂತರ ಬರುವ ಆದಾಯಕ್ಕೆ ಆಸ್ತಿ ಯಾರ ಹೆಸರಲ್ಲಿ ವರ್ಗಾವಣೆ ಆಗಿದೆಯೋ ಅವರೇ ಅದಕ್ಕೆ ಜವಾಬ್ದಾರರಾಗಿರುತ್ತಾರೆ.

ಯಾವುದೇ ಷೇರು, ಮ್ಯೂಚುವಲ್ ಫಂಡ್‌ಗಳಾಗಿದ್ದರೆ ನಿಮ್ಮ ಹೆಸರಿಗೆ ವರ್ಗವಾದ ನಂತರ ಬಂದ ಆದಾಯಕ್ಕೆ ನೀವೇ ತೆರಿಗೆ ಕಟ್ಟಬೇಕು ಹಾಗೂ ಕ್ಯಾಪಿಟಲ್ ಗೈನ್‌ಗೆ ನೀವೇ ಬಾಧ್ಯಸ್ಥರು. ಆದರೆ, ಅವರು ಖರೀದಿಸಿದಾಗ ಪಾವತಿಸಿದ ಮೌಲ್ಯ, ನಿಮ್ಮ ಅಸಲು ಮೊತ್ತವೆಂದು ಪರಿಗಣಿಸಲಾಗುತ್ತದೆ. ಅದೇ ಅವಧಿಯನ್ನು ದೀರ್ಘಾವಧಿ, ಅಲ್ಪಾವಧಿ ಹೂಡಿಕೆಯ ನಿರ್ಣಯಕ್ಕೆ ಪರಿಗಣಿಸಲಾಗುತ್ತದೆ. ಅದೇ ರೀತಿ ಮನೆಯ ಬಾಡಿಗೆ ಆದಾಯವೂ ಮರಣದ ನಂತರ ಯಾರ ಹೆಸರಿಗೆ ವರ್ಗವಾಗುತ್ತದೋ ಅವರೇ ತೆರಿಗೆ ಕಟ್ಟಬೇಕು. ಡಿವಿಡೆಂಡ್ ಹಾಗೂ ಬ್ಯಾಂಕ್ ಬಡ್ಡಿಗೂ ಇದೇ ನಿಯಮ ಅನ್ವಯಿಸುತ್ತದೆ.

ಇನ್ನು ಕಾನೂನು ಪ್ರಕಾರ ನಿಮ್ಮ ತಂದೆಯವರ ಹೆಸರಲ್ಲಿರುವ ಷೇರು, ಮ್ಯೂಚುವಲ್ ಫಂಡ್ ಹಾಗೂ ಬ್ಯಾಂಕ್ ಖಾತೆಯಲ್ಲಿರುವ ಶಿಲ್ಕು ನಿಮ್ಮ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ನಿಮ್ಮಲ್ಲಿ ಈಗಾಗಲೇ ಇರುವ ದಾಖಲೆಗಳನ್ನು ಸಂಬಂಧಿತ ಸಂಸ್ಥೆಗೆ ಸಲ್ಲಿಸಿ ಸಮರ್ಪಕಗೊಳಿಸಬೇಕು. ನಿಮ್ಮ ಹೆಸರು ಈಗಾಗಲೇ ನಾಮಿನಿ ವರ್ಗದಲ್ಲಿ ದಾಖಲಾಗಿದ್ದರೆ ಹೆಚ್ಚೇನೂ ಸಮಸ್ಯೆ ಇರಲಾರದು.

ವಾರ್ಷಿಕ ರಿಟರ್ನ್ಸ್ ಸಲ್ಲಿಸುವಾಗ ಮರಣದ ತನಕ ಇರುವ ಆದಾಯವನ್ನು ಪ್ರತ್ಯೇಕವಾಗಿ ಲೀಗಲ್ ಹೈಯರ್ಸ್ ವರ್ಗದಲ್ಲಿ ನಿಮ್ಮ ಇಬ್ಬರಲ್ಲಿ ಒಬ್ಬರು ರಿಟರ್ನ್ಸ್ ಸಲ್ಲಿಸಬೇಕು. ಇದಕ್ಕೆ ಅಗತ್ಯ ಇರುವ ಪೂರ್ವ ತಯಾರಿಯಾಗಿ ನಿಮ್ಮ ಪ್ಯಾನ್ ಲಾಗಿನ್ ಮೂಲಕ ಮೃತರ ಪ್ರತಿನಿಧಿ ಎಂಬ ಹಿನ್ನೆಲೆಯಲ್ಲಿ ದಾಖಲಿಸಬೇಕು. ನಂತರದ ಆದಾಯ ನಿಮ್ಮ ರಿಟರ್ನ್ಸ್‌ಗಳಲ್ಲಿ ಮುಂದೆ ಸಹಜವಾಗಿ ಘೋಷಿಸಬೇಕಾಗುತ್ತದೆ. ಈ ವರ್ಷದ ಒಟ್ಟು ರಿಟರ್ನ್ಸ್ ಸಲ್ಲಿಕೆ ಪ್ರಕ್ರಿಯೆಯನ್ನು ಸ್ವತಃ ನೀವೇ ನಿಭಾಯಿಸಲು ಹೋಗದೆ ಅನುಭವಿ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಷೇರು ಸೂಚ್ಯಂಕ ಶೇ 1ರಷ್ಟು ಏರಿಕೆ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಬುಧವಾರವೂ ದೇಶದ ಷೇರುಪೇಟೆಯಲ್ಲಿ ಗೂಳಿ ಓಟ ಮುಂದುವರಿಯಿತು.

ಐ.ಟಿ, ಬಂಡವಾಳ ಸರಕು ಮತ್ತು ಇಂಡಸ್ಟ್ರಿಯಲ್ ಷೇರುಗಳ ಖರೀದಿ ಹೆಚ್ಚಳದಿಂದಾಗಿ ಸೂಚ್ಯಂಕಗಳು ಶೇ 1ರಷ್ಟು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 631 ಅಂಶ ಏರಿಕೆ ಕಂಡು 76,532 ಅಂಶಗಳಲ್ಲಿ ಮುಕ್ತಾಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 205 ಅಂಶ ಏರಿಕೆ ಕಂಡು 23,163 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಜೊಮಾಟೊ ಷೇರಿನ ಮೌಲ್ಯದಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ. ಟಾಟಾ ಮೋಟರ್ಸ್, ಇನ್ಫೊಸಿಸ್, ಅಲ್ಟ್ರಾಟೆಕ್ ಸಿಮೆಂಟ್, ಟೆಕ್ ಮಹೀಂದ್ರ, ಮಹೀಂದ್ರ ಆ್ಯಂಡ್ ಮಹೀಂದ್ರ, ಬಜಾಜ್ ಫೈನಾನ್ಸ್ ಷೇರಿನ ಮೌಲ್ಯವೂ ಏರಿಕೆಯಾಗಿದೆ.

ಐಟಿಸಿ ಹೋಟೆಲ್ಸ್, ಭಾರ್ತಿ ಏರ್‌ಟೆಲ್, ಮಾರುತಿ, ಏಷ್ಯನ್ ಪೇಂಟ್ಸ್ ಷೇರಿನ ಮೌಲ್ಯ ಕುಸಿದಿದೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,920 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಕಾರ್ಬನ್ ಡೈ ಆಕ್ಸೈಡ್ ಬ್ಯಾಟರಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕೂಡಗಿಯಲ್ಲಿರುವ ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) ಅತ್ಯಾಧುನಿಕ ಕಾರ್ಬನ್ ಡೈ ಆಕ್ಸೈಡ್ ಬ್ಯಾಟರಿಯನ್ನು ಬಿಡುಗಡೆ ಮಾಡಿದೆ.

ಎನ್‌ಟಿಪಿಸಿಯ ಎನರ್ಜಿ ಟೆಕ್ನಾಲಜಿ ರಿಸರ್ಚ್ ಅಲೆಯನ್ಸ್‌ನಿಂದ ಇದನ್ನು ಅಭಿವೃದ್ಧಿಪಡಿಸಲಾಗಿದೆ. ತ್ರಿವೇಣಿ ಟರ್ಬೈನ್ ಲಿಮಿಟೆಡ್ ಮತ್ತು ಇಟಲಿಯ ಎನರ್ಜಿ ಡೋಮ್ ಸಹಯೋಗದಡಿ ಕಾರ್ಯಗತಗೊಳಿಸಲಾಗುತ್ತದೆ ಎಂದು ಕಂಪನಿ ತಿಳಿಸಿದೆ.

ಪ್ರತಿ ಗಂಟೆಗೆ 160 ಮೆಗಾವಾಟ್ ಸಾಮರ್ಥ್ಯ ಹೊಂದಿರುವ ಈ ಬ್ಯಾಟರಿಯನ್ನು ಕೂಡಗಿಯಲ್ಲಿ ಸ್ಥಾಪಿಸಲಾಗುವುದು. ಈ ಯೋಜನೆಯು ಇಂಧನ ವಲಯದ ವೈವಿಧ್ಯಕ್ಕೆ ಸಹಕಾರಿಯಾಗಲಿದೆ. ಜೊತೆಗೆ, ಕಂಪನಿಯ ನವೀಕರಿಸಬಹುದಾದ ಇಂಧನ ಉತ್ಪಾದನೆ ಹೆಚ್ಚಳಕ್ಕೆ ನೆರವಾಗಲಿದೆ. ಇದು ‘ಮೇಕ್ ಇನ್ ಇಂಡಿಯಾ’ ಮತ್ತು ‘ಆತ್ಮನಿರ್ಭರ ಭಾರತ’ ನಿರ್ಮಾಣದ ಗುರಿ ಸಾಧನೆಯ ಬದ್ಧತೆಗೆ ಕನ್ನಡಿ ಹಿಡಿದಿದೆ ಎಂದು ತಿಳಿಸಿದೆ.

‘ದೀರ್ಘಾವಧಿಯ ಶಕ್ತಿ ಸಂಗ್ರಹಣೆ ಕ್ಷೇತ್ರದಲ್ಲಿ ಇದು ಹೆಗ್ಗುರುತಾಗಿದೆ. ಕೂಡಗಿ ಸ್ಥಾವರದಲ್ಲಿ ಕಾರ್ಬನ್ ಡೈ ಆಕ್ಸೈಡ್ ಬ್ಯಾಟರಿ ಶಕ್ತಿ ಸಂಗ್ರಹ ತಂತ್ರಜ್ಞಾನ ಅನುಷ್ಠಾನಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿ’ ಎಂದು ಎನ್‌ಟಿಪಿಸಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಗುರುದೀಪ್ ಸಿಂಗ್ ತಿಳಿಸಿದ್ದಾರೆ.

‘ಭಾರತದ ಮೀನುಗಾರರ ಮೇಲೆ ಆಕಸ್ಮಿಕವಾಗಿ ಗುಂಡು ಹಾರಿದೆ’

ಕೊಲಂಬೊ (ಪಿಟಿಐ): ಶ್ರೀಲಂಕಾ ಜಲ ಗಡಿಯೊಳಗೆ ಮೀನುಗಾರಿಕೆ ನಡೆಸುತ್ತಿದ್ದ ಭಾರತದ 13 ಮೀನುಗಾರರನ್ನು ಬಂಧಿಸುವ ವೇಳೆ ನೌಕಾಪಡೆ ಸಿಬ್ಬಂದಿಯೊಬ್ಬರ ಬಂದೂಕಿನಿಂದ ಆಕಸ್ಮಿಕವಾಗಿ ಗುಂಡು ಹಾರಿದೆ. ಇದು ಉದ್ದೇಶಪೂರ್ವಕವಾಗಿ ಆಗಿಲ್ಲ ಎಂದು ಶ್ರೀಲಂಕಾ ನೌಕಾಪಡೆಯ ವೈಸ್ ಅಡ್ಮಿರಲ್ ಕಾಂಚನ ಬನಗೋಡಾ ತಿಳಿಸಿದ್ದಾರೆ.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, ‘ಆಕಸ್ಮಿಕವಾಗಿ ಗುಂಡು ಹಾರಿದ್ದರಿಂದ ಭಾರತದ ಐವರು ಮೀನುಗಾರರಿಗೆ ಗಾಯಗಳಾಗಿವೆ. ಈ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ’ ಎಂದರು.

ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೀನುಗಾರರ ಆರೋಗ್ಯವನ್ನು ಶ್ರೀಲಂಕಾದಲ್ಲಿರುವ ರಾಯಭಾರ ಕಚೇರಿಯ ಅಧಿಕಾರಿಗಳು ವಿಚಾರಿಸಿದರು. ಕೊಲಂಬೊದಲ್ಲಿರುವ ಭಾರತದ ಹೈಕಮಿಷನ್ ಅಲ್ಲಿನ ವಿದೇಶಾಂಗ ಸಚಿವರಲ್ಲಿ ತನ್ನ ಅಸಮಾಧಾನವನ್ನು ದಾಖಲಿಸಿದೆ. ಜೊತೆಗೆ, ನವದೆಹಲಿಯಲ್ಲಿರುವ ಶ್ರೀಲಂಕಾ ಹೈಕಮಿಷನರ್ ಅವರನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಚೇರಿಗೆ ಕರೆಸಿ ಭಾರತವು ತನ್ನ ಪ್ರತಿಭಟನೆಯನ್ನು ದಾಖಲಿಸಿದೆ.

ಭಾರತದ 13 ಮೀನುಗಾರರನ್ನು ಜ.27ರಂದು ವೆಲ್‌ವೆಟ್ಟಿತುರೈ ಕರಾವಳಿ ಪ್ರದೇಶದಲ್ಲಿ ಬಂಧಿಸಲಾಯಿತು. ಫೆ.10ರವರೆಗೆ ಇವರನ್ನು ಪೊಲೀಸರ ವಶಕ್ಕೆ ನೀಡಲಾಗಿದೆ.

ಯಾವುದೇ ಕಾರಣಕ್ಕೂ ಯಾವುದೇ ಹಂತದಲ್ಲಿಯೂ ಭದ್ರತಾ ಪಡೆಗಳು ಇಂಥ ಕಾರ್ಯಾಚರಣೆ ನಡೆಸುವುದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ
ಭಾರತದ ವಿದೇಶಾಂಗ ಸಚಿವಾಲಯ

ಕರ್ತವ್ಯಕ್ಕೆ ಅಡ್ಡಿ ಆರೋಪ

‘ಶ್ರೀಲಂಕಾ ಜಲ ಗಡಿಯೊಳಗೆ ಭಾರತೀಯ ಮೀನುಗಾರರ ದೋಣಿ ಕಾಣಿಸಿತು. ವಾಪಸು ತೆರಳುವಂತೆ ನಾವು ಸೂಚನೆ ನೀಡಿದೆವು. ಆದರೆ, ಅವರು ಇದಕ್ಕೆ ಕಿವಿಗೊಡಲಿಲ್ಲ. ಬಳಿಕ, ನೌಕಾ ಪಡೆಯ ಸಿಬ್ಬಂದಿಯು ಭಾರತೀಯ ಮೀನುಗಾರರ ದೋಣಿಯೊಳಗೆ ಹೋದರು.

ಈ ವೇಳೆ ಮೀನುಗಾರರು ಬಹಳ ಆಕ್ರಮಕಾರಿಯಾಗಿ ವರ್ತಿಸಿದರು. ನಮ್ಮ ಸಿಬ್ಬಂದಿಯ ಕರ್ತವ್ಯಕ್ಕೆ ಅಡ್ಡಿ ಪಡಿಸಿದರು. ಈ ಸಂಘರ್ಷದ ಮಧ್ಯೆ ಸಿಬ್ಬಂದಿಯ ಬಂದೂಕಿನಿಂದ ಆಕಸ್ಮಿಕವಾಗಿ ಗುಂಡು ಹಾರಿದೆ’ ಎಂದು ಶ್ರೀಲಂಕಾ ನೌಕಾ ಪಡೆಯ ವೈಸ್ ಅಡ್ಮಿಲರ್ ಕಾಂಚನ ಬನಗೋಡಾ ಮಾಹಿತಿ ನೀಡಿದರು.

ಜೈಪುರ ಸಾಹಿತ್ಯ ಉತ್ಸವ ಇಂದಿನಿಂದ; ಚಿಂತಕರ ಚಾವಡಿಯಲ್ಲಿ ಮಾತು

‘ಜಗದ ಗಾಯ’ಕ್ಕೆ ಸಾಹಿತ್ಯ ಮದ್ದು

● ವಿಕ್ರಂ ಕಾಂತಿಕೆರೆ

ಜೈಪುರ (ರಾಜಸ್ಥಾನ): ಯುದ್ಧದಿಂದ ಜರ್ಜರಿತವಾಗಿರುವ ಪ್ರದೇಶಗಳ ಮತ್ತು ದ್ವೇಷದ ವರ್ತುಲದಲ್ಲಿ ಸಿಲುಕಿ ಕ್ಷೋಭೆಗೆ ಒಳಗಾಗಿರುವ ಜನರ ಗಾಯಕ್ಕೆ ಸಾಹಿತ್ಯ, ಚಿಂತನೆ, ಕಲೆಯ ಮೂಲಕ ಮದ್ದು ಹುಡುಕುವ ಆಶಯದೊಂದಿಗೆ ಜೈಪುರ ಸಾಹಿತ್ಯ ಉತ್ಸವ ಗುರುವಾರ ಆರಂಭವಾಗಲಿದೆ.

‘ಪಿಂಕ್ ಸಿಟಿ’ ಎಂದೇ ಹೆಸರು ಗಳಿಸಿಕೊಂಡಿರುವ ಜೈಪುರದ ಲಾಲ್‌ಬಹದ್ದೂರ್ ನಗರದ ಕ್ಲಾರ್ಕ್ಸ್ ಆಮೆರ್ ಹೋಟೆಲ್ ಐದು ದಿನಗಳ ಜೈಪುರ ಲಿಟ್‌ಫೆಸ್ಟ್‌ಗೆ ವೇದಿಕೆಯಾಗಲಿದೆ. ಚಿಂತಕರು ಮತ್ತು ಕಲಾವಿದರು ಒಳಗೊಂಡಂತೆ ಸಮಾಜದ ವಿವಿಧ ಕ್ಷೇತ್ರಗಳ ಪ್ರಮುಖರು ಸಮಕಾಲೀನ ವಿಷಯಗಳು, ಸಮಾಜದ ವ್ಯಥೆಗಳ ಕುರಿತು ಮಾತನಾಡಲಿದ್ದು ಸಾಹಿತಿಗಳು ಬರವಣಿಗೆಯ ಹಿಂದಿನ ‘ಕಥೆ’ಯನ್ನು ಸಹೃದಯರ ಮುಂದಿಡಲಿದ್ದಾರೆ.

ನೊಬೆಲ್, ಬೂಕರ್‌ನಿಂದ ಹಿಡಿದು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಮತ್ತು ಇತರ ಸಾಧಕರು ಒಳಗೊಂಡಂತೆ ದೇಶ–ವಿದೇಶಗಳ 300 ಮಂದಿಯ ಮಾತು, ಅನುಭವದ ನುಡಿಗಳಿಗೆ ಸಾಕ್ಷಿಯಾಗಲು ಹಸಿರು ಹುಲ್ಲಿನ ಅಂಗಣ, ದರ್ಬಾರ್ ಹಾಲ್ ಸೇರಿದಂತೆ 7 ವೇದಿಕೆಗಳು ಸಜ್ಜಾಗಿವೆ. ಉತ್ಸವದ ನಿತ್ಯದ ಕಾರ್ಯಕ್ರಮಗಳಿಗೆ ಮುಂಜಾನೆಯ ಸಂಗೀತ ಲಯ ತುಂಬಲಿದ್ದು ಸಂಜೆಗಳನ್ನು ಗಾಯಕರು ರಾಗ–ತಾಳದ ಸೊಬಗಿನಿಂದ ರಂಗಾಗಿಸಲಿದ್ದಾರೆ. ಪುಸ್ತಕ ಮೇಳ, ಉತ್ಸವ ಬಜಾರ್, ಹೊನಲು ಬೆಳಕಿನ ಮಾರುಕಟ್ಟೆ, ಜಾಗತಿಕ ಪ್ರಕಾಶನ ಸಂಸ್ಥೆಗಳ ಒಗ್ಗೂಡುವಿಕೆಯೂ ಉತ್ಸವದಲ್ಲಿ ಇದೆ.

ಅಪರಾಧ ಜಗತ್ತಿಗೆ ಸಂಬಂಧಿಸಿದ ಕಾಲ್ಪನಿಕ ಸಾಹಿತ್ಯ ಲಿಟ್‌ಫೆಸ್ಟ್‌ನ 18ನೇ ಆವೃತ್ತಿಯ ಮುಖ್ಯ ಆಶಯವಾಗಿದ್ದು ‘ಗಾಯಗೊಂಡ ಜಗತ್ತು’ ಎಂಬ ವಿಷಯದಲ್ಲಿ ಪಶ್ಚಿಮ ಏಷ್ಯಾ ಹಾಗೂ ಉಕ್ರೇನ್‌ನ ಯುದ್ಧಪೀಡಿತ ಪ್ರದೇಶ, ಪ್ರಾದೇಶಿಕ ರಾಜಕೀಯ ಮತ್ತು ಸಂಘರ್ಷಗಳು ಚರ್ಚೆಗೆ ಬರಲಿವೆ. ಭಾರತದ 16 ಭಾಷೆ ಸೇರಿದಂತೆ ಒಟ್ಟು 32 ಭಾಷೆಗಳಲ್ಲಿ ಸಂವಹನ ಆಗಲಿದೆ.



ಆತಿಥಿ ಸತ್ಕಾರಕ್ಕೆ ಸಿದ್ಧತೆ ನಡೆಸುತ್ತಿರುವ ಕಾರ್ಯಕರ್ತರು

ಗಾಯಗೊಂಡಿರುವ ವಿಶ್ವವು ಯುದ್ಧ, ದ್ವೇಷದಿಂದ ತತ್ತರಿಸಿದೆ. ಈ ಬಾರಿಯ ಸಾಹಿತ್ಯ ಉತ್ಸವದ ಅನೇಕ ಗೋಷ್ಠಿಗಳ ಚರ್ಚೆಯಲ್ಲಿ ಇಂಥ ವಿಷಯಗಳು ಪ್ರತಿಫಲನಗೊಳ್ಳಲಿವೆ
ನಮಿತಾ ಗೋಖಲೆ, ಜೆಎಲ್‌ಎಫ್ ಸಹ ನಿರ್ದೇಶಕಿ

ಸಂಗೀತದ ಅಲೆ

ಸಾಹಿತ್ಯ ಉತ್ಸವದಲ್ಲಿ ಸಂಗೀತದ ಅಲೆ ಎಬ್ಬಿಸಲು ಪ್ರತ್ಯೇಕ ವೇದಿಕೆ ಕಲ್ಪಿಸಲಾಗಿದೆ. ಸೂಫಿ ಸಂತ ಅಮೀರ್ ಖುಸ್ರೊ ಮತ್ತು ಅನುಭಾವದ ಕವಿ ಸಂತ ಕಬೀರ್ ದಾಸ್ ನೆನಪಿನೊಂದಿಗೆ ಮೊದಲ ದಿನ ಸಂಜೆ ಸಂಗೀತ ಕುಸುಮ ಅರಳುವ ವೇದಿಕೆಯಲ್ಲಿ ಶಾಸ್ತ್ರೀಯ, ಜನಪದ, ರಾಕ್ ಮತ್ತು ಫ್ಯೂಷನ್ ಸಂಗೀತ ಹರಿಯಲಿದೆ.

97 ವಿಷಯಗಳು: ಸಾಹಿತ್ಯ, ಕಲೆ, ಪರಿಸರ, ಹವಾಮಾನ ಬದಲಾವಣೆ, ಕ್ರೀಡೆ, ಪ್ರಯಾಣ, ಇತಿಹಾಸ, ವನಿತೆಯರ ಚರಿತ್ರೆ, ವೈದ್ಯಕೀಯ, ರಾಜಕೀಯ ಸೇರಿದಂತೆ 97 ವಸ್ತು ವಿಷಯಗಳು ಗೋಷ್ಠಿಗಳ ಪಟ್ಟಿಯಲ್ಲಿವೆ. ಅಫ್ಗಾನಿಸ್ತಾನ, ನೆದರ್ಲೆಂಡ್, ಐರ್ಲೆಂಡ್, ಚೀನಾ, ಅಸ್ಸಾಂ, ಗುಜರಾತ್ ಮತ್ತು ಆತಿಥೇಯ ರಾಜಸ್ಥಾನದ ಬಗ್ಗೆಯೂ ಚರ್ಚೆ ನಡೆಯಲಿದ್ದು ಮಹಿಳೆ, ಸಂಸ್ಕೃತಿ, ಮನರಂಜನೆ, ಆವಿಷ್ಕಾರ, ಬುದ್ಧಿಸಂ, ರಂಗಭೂಮಿ, ಸಿನಿಮಾ, ಹಾಸ್ಯ, ಅಪರಾಧ, ಶಿಕ್ಷಣ, ಡಿಜಿಟಲ್ ಲೋಕ ಇತ್ಯಾದಿಗಳ ಮೇಲೆಯೂ ಬೆಳಕು ಹರಡಲಿದೆ.

ಅಮೆರಿಕ: 19 ವರ್ಷದೊಳಗೆ ಲಿಂಗ ಪರಿವರ್ತನೆ ನಿಷೇಧ

ವಾಷಿಂಗ್ಟನ್ (ಎಪಿ): 19 ವರ್ಷದ ಒಳಗೆ ಲಿಂಗ ಪರಿವರ್ತಿಸಿಕೊಳ್ಳುವುದನ್ನು ನಿಷೇಧಿಸುವ ಆದೇಶಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಸಹಿ ಹಾಕಿದ್ದಾರೆ.

‘ಒಂದು ಲಿಂಗದಿಂದ ಇನ್ನೊಂದು ಲಿಂಗಕ್ಕೆ ಪರಿವರ್ತನೆ ಆಗುವುದಕ್ಕೆ ಅಮೆರಿಕವು ಯಾವುದೇ ಅನುದಾನ ನೀಡುವುದಿಲ್ಲ. ಇಂಥ ಚಿಕಿತ್ಸೆಯ ಬಗ್ಗೆ ಪ್ರಚಾರವನ್ನಾಗಲಿ, ಸಹಕಾರವನ್ನಾಗಲಿ ಅಮೆರಿಕ ನೀಡುವುದಿಲ್ಲ. ಲಿಂಗಪರಿವರ್ತನೆಯನ್ನು ನಿಷೇಧಿಸುವ ಎಲ್ಲ ರೀತಿಯ ಕಾನೂನು, ನಿಯಮಗಳನ್ನು ಅಮೆರಿಕ ಜಾರಿ ಮಾಡಲಿದೆ’ ಎಂದು ಟ್ರಂಪ್ ಹೇಳಿದ್ದಾರೆ.

ಲಿಂಗ ಪರಿವರ್ತನೆಗಾಗಿ, ಲಿಂಗ ಪರಿವರ್ತಿತ ವ್ಯಕ್ತಿಗಳ ರಕ್ಷಣೆಗಾಗಿ ಮಾಜಿ ಅಧ್ಯಕ್ಷ ಜೋ ಬೈಡನ್ ಅವರು ರೂಪಿಸಿದ್ದ ನೀತಿಗೆ ಸಂಪೂರ್ಣ ವಿರುದ್ಧವಾಗಿರುವ ನೀತಿಯನ್ನು ಟ್ರಂಪ್ ಘೋಷಿಸಿದ್ದಾರೆ. ಬೈಡನ್ ಅವರ ನೀತಿಗಳಿಗೆ ಸಂಪೂರ್ಣ ವಿರುದ್ಧವಾಗಿ ನೀತಿಗಳನ್ನು ಟ್ರಂಪ್ ಘೋಷಿಸುತ್ತಿದ್ದಾರೆ. ಈ ಹೊಸ ಘೋಷಣೆಗಳ ಪಟ್ಟಿಗೆ ಲಿಂಗ ಪರಿವರ್ತನೆ ಮೇಲಿನ ನಿಷೇಧ ನೀತಿಯು ಹೊಸ ಸೇರ್ಪಡೆಯಾಗಿದೆ.

ಅತ್ಯಾಚಾರ, ಕೊಲೆ ಪ್ರಕರಣ: ಮರಣ ದಂಡನೆಗೆ ಗುರಿಯಾಗಿದ್ದ ವ್ಯಕ್ತಿ ಖುಲಾಸೆ

ನವದೆಹಲಿ (ಪಿಟಿಐ): 23 ವರ್ಷ ವಯಸ್ಸಿನ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬಳ ಹತ್ಯೆ ಪ್ರಕರಣದಲ್ಲಿ ಮರಣ ದಂಡನೆಗೆ ಗುರಿಯಾಗಿದ್ದ ಚಂದ್ರಭಾನ್ ಸುದಾಮ್ ಸನಪ್ ಎನ್ನುವವರನ್ನು ಸುಪ್ರೀಂ ಕೋರ್ಟ್ ಮಂಗಳವಾರ ಖುಲಾಸೆಗೊಳಿಸಿದೆ.

ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಮಂಡಿಸಿದ ವಾದದಲ್ಲಿ ಬಹಳ ಲೋಪಗಳು ಇವೆ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಕೆ.ವಿ. ವಿಶ್ವನಾಥನ್ ನೇತೃತ್ವದ ತ್ರಿಸದಸ್ಯ ಪೀಠ ಹೇಳಿದೆ.

ಆಂಧ್ರಪ್ರದೇಶದ ಮಚಿಲಿಪಟ್ಟಣಂನ ಯುವತಿಯು ಪಾಲಕರ ಜೊತೆ ಕ್ರಿಸ್ಮಸ್ ರಜೆ ಕಳೆದು 2014ರ ಜನವರಿ 5ರಂದು ಮುಂಬೈಗೆ ಮರಳಿದ್ದರು. ಆಕೆಯ ದೂರವಾಣಿಗೆ ಮತ್ತೆ ಮತ್ತೆ ಕರೆ ಮಾಡಿದಾಗಲೂ ಸಂಪರ್ಕಕ್ಕೆ ಸಿಗದಿದ್ದರಿಂದ ಆಕೆಯ ತಂದೆಯು ದೂರು ನೀಡಿದ್ದರು.

10 ದಿನಗಳ ಶೋಧದ ನಂತರ ಆಕೆಯ ಮೃತದೇಹವು ಸುಟ್ಟ ಹಾಗೂ ಕೊಳೆತ ಸ್ಥಿತಿಯಲ್ಲಿ ಕಂಜುಮಾರ್ಗ್ ಪ್ರದೇಶದಲ್ಲಿ ಪೊದೆಗಳ ನಡುವೆ ಸಿಕ್ಕಿತ್ತು. ಸನಪ್ ಅವರನ್ನು ಬಂಧಿಸಿದ ಮುಂಬೈ ಪೊಲೀಸರು, ಅತ್ಯಾಚಾರ ಹಾಗೂ ಕೊಲೆ ಆರೋಪ ಹೊರಿಸಿದ್ದರು. ವಿಚಾರಣೆಯ ನಂತರ ಸನಪ್ ಅವರಿಗೆ ಗಲ್ಲು ಶಿಕ್ಷೆ ವಿಧಿಸಲಾಗಿತ್ತು.

ಸನಪ್ ಅಪರಾಧಿ ಎಂಬುದನ್ನು ಎತ್ತಿಹಿಡಿದ ಬಾಂಬೆ ಹೈಕೋರ್ಟ್ ಆದೇಶವನ್ನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್, ಸಂದರ್ಭಗಳನ್ನು ಒಗ್ಗೂಡಿಸಿ ಅವಲೋಕಿಸಿದಾಗ ಈತ ಅಪರಾಧಿ ಎಂಬುದು ಸಾಬೀತಾಗುವುದಿಲ್ಲ ಎಂದು ಹೇಳಿದೆ.

ಈ ಪ್ರಕರಣದಲ್ಲಿ ಕಣ್ಣಿಗೆ ಗೋಚರಿಸುತ್ತಿರುವುದಕ್ಕಿಂತ ಹೆಚ್ಚಿನ ಸಂಗತಿಗಳು ಇವೆ ಎಂದು ಪೀಠ ಹೇಳಿದೆ. ಪ್ರಾಸಿಕ್ಯೂಷನ್ ತನ್ನ ಆರೋಪವನ್ನು ಸಕಾರಣದ ಅನುಮಾನದ ಆಚೆಗೆ ಸಾಬೀತು ಮಾಡುವಲ್ಲಿ ವಿಫಲವಾಗಿದೆ ಎಂದು ಹೇಳಿದೆ. ವಿಚಾರಣಾ ನ್ಯಾಯಾಲಯವು ಸನಪ್ ಅವರಿಗೆ 2015ರಲ್ಲಿ ಗಲ್ಲು ಶಿಕ್ಷೆ ವಿಧಿಸಿತ್ತು. ಈ ಶಿಕ್ಷೆಯನ್ನು ಬಾಂಬೆ ಹೈಕೋರ್ಟ್ 2018ರಲ್ಲಿ ಎತ್ತಿಹಿಡಿದಿತ್ತು.

‘ದೇವರಿಗೆ ಬಿಟ್ಟಿದ್ದೇನೆ’

ಮಚಿಲಿಪಟ್ಟಣಂ (ಪಿಟಿಐ): ಆರೋಪಿಯನ್ನು ಖುಲಾಸೆಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ಪ್ರತಿಕ್ರಿಯೆ ನೀಡಿರುವ ಯುವತಿಯ ತಂದೆ, ‘ನಾನು ಇದನ್ನು ದೇವರ ಮರ್ಜಿಗೆ ಬಿಟ್ಟಿದ್ದೇನೆ’ ಎಂದು ಹೇಳಿದ್ದಾರೆ.

‘ನಾವು ಏನು ಮಾಡುವುದು? ಏನಾಗುತ್ತಿದೆ ಎಂಬುದು ನಮಗೆ ಗೊತ್ತಿರಲಿಲ್ಲ. ಸನಪ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು ನಮಗೆ ಗೊತ್ತಿಲ್ಲ... ನಾನು ದೇವರಿಗೆ ಬಿಟ್ಟಿದ್ದೇನೆ, ನನಗೆ ನನ್ನ ಮಗಳು ವಾಪಸ್ ಸಿಗುವುದಿಲ್ಲ’ ಎಂದು ಯುವತಿಯ ತಂದೆ ಹೇಳಿದ್ದಾರೆ.

ಮುಂಬೈ ಪೊಲೀಸರನ್ನು ಶ್ಲಾಘಿಸಿದ ಅವರು, ‘ಅವರು ಬಹಳಷ್ಟು ಮುತುವರ್ಜಿ ವಹಿಸಿದ್ದರು. ಮಗಳ ಐ.ಡಿ. ಕಾರ್ಡ್ ಮತ್ತು ಇತರ ಕೆಲವು ವಸ್ತುಗಳನ್ನು ಆರೋಪಿಯ ಮನೆಯಲ್ಲಿ ಪತ್ತೆ ಮಾಡಿದ್ದರು’ ಎಂದಿದ್ದಾರೆ. ಈ ಪ್ರಕರಣದಲ್ಲಿ ಪ್ರತ್ಯಕ್ಷದರ್ಶಿಗಳು ಇರಲಿಲ್ಲ. ಆದರೆ ಪೊಲೀಸರು ಸಾಕಷ್ಟು ಸಾಂದರ್ಭಿಕ ಸಾಕ್ಷ್ಯಗಳನ್ನು ಒಗ್ಗೂಡಿಸಿದ್ದರು. ಈ ಪ್ರಕರಣದಲ್ಲಿ ಮತ್ತೆ ಹೋರಾಟ ನಡೆಸುವ ಆಸಕ್ತಿ ಇಲ್ಲ, ಕೊನೆಯ ದಿನಗಳನ್ನು ಶಾಂತಿಯಿಂದ ಕಳೆಯಬೇಕಿದೆ ಎಂದಿದ್ದಾರೆ.

ಓಡಿ ಹೋಗಿ ಜೀವ ಉಳಿಸಿಕೊಂಡೆವು...



ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭದಲ್ಲಿ 'ಮೌನಿ ಅಮಾವಾಸ್ಯೆ' ದಿನವಾದ ಬುಧವಾರ ಸಂಭವಿಸಿದ ಕಾಲ್ತುಳಿತದ ವೇಳೆ ಭಕ್ತರ ಚೀಲಗಳು ಹಾಗೂ ಇತರ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು – ಪಿಟಿಐ ಚಿತ್ರಗಳು

• ರವಿ ಸೂರಿ

ಪ್ರಯಾಗ್‌ರಾಜ್ (ಉತ್ತರ ಪ್ರದೇಶ): 'ಶಾಹಿ ಸ್ನಾನ ಮಾಡುವ ತವಕದಲ್ಲಿ ಮಂಗಳವಾರ ತಡರಾತ್ರಿ ತ್ರಿವೇಣಿ ಸಂಗಮದ ಬಳಿ ಸಾಗುತ್ತಿದ್ದಂತೆ ಪೊಲೀಸರು ನಮ್ಮೆಲ್ಲರನ್ನು ಹಿಮ್ಮೆಟ್ಟಿಸಿದರು. ಜನರು ಗುಂಪು ಗುಂಪಾಗಿ ಓಡತೊಡಗಿದರು. ನಾವೂ ಬಹುದೂರ ಓಡಿ ಬಂದ ಬಳಿಕ, 700 ಮೀಟರ್ ಅಂತರದಲ್ಲಿ ಕಾಲ್ತುಳಿತ ಸಂಭವಿಸಿದ್ದು ಗೊತ್ತಾಯಿತು'.

ಹೀಗೆ ದೊಡ್ಡ ಅಪಾಯದಿಂದ ಪಾರಾಗಿ ಬಂದ ಸಮಾಧಾನದೊಂದಿಗೆ ಕಾಲ್ತುಳಿತದ ಘಟನೆಯನ್ನು ಹತ್ತಿರದಿಂದ ಕಂಡ ಗೋಕರ್ಣದ ಗಣೇಶ ಮೂಳೆ 'ಪ್ರಜಾವಾಣಿ' ಪ್ರತಿನಿಧಿಗೆ ವಿವರಿಸಿದರು. ಅವರೂ ಸೇರಿ ಗೋಕರ್ಣದ 10ಕ್ಕೂ ಹೆಚ್ಚು ಮಂದಿ ಗೋಕರ್ಣದಿಂದ ಪ್ರಯಾಗರಾಜ್‌ಗೆ ತೆರಳಿದ್ದಾರೆ.

'ಸಂಗಮದ ಬಳಿ ಲಕ್ಷಾಂತರ ಜನ ಸೇರಿದ್ದರು. ಸರಾಗವಾಗಿ ನಡೆಯಲು ಆಗದಷ್ಟು ಜನಸಂದಣಿ ಇತ್ತು. ಕಾಲ್ತುಳಿತದ ಘಟನೆ ನಡೆದ ಸ್ಥಳದಿಂದ ಹಲವು ಕಿಲೋ ಮೀಟರ್ ದೂರದವರೆಗೂ ಜನರು ಓಡುತ್ತಿದ್ದರು. ಕೆಲ ಮಹಿಳೆಯರು ಕೆಳಗೆ ಬಿದ್ದರು. ಅವರನ್ನು ಮೇಲೆತ್ತಲು ಪ್ರಯತ್ನಿಸಿದಾಗ, ಜನರು ಹಿಂದಿನಿಂದ ಒಮ್ಮೆಲೆ ಒಬ್ಬರ ಮೇಲೆ ಒಬ್ಬರು ಬಿದ್ದರು. ಕೆಳಗೆ ಬಿದ್ದ ಒಬ್ಬ ಮಹಿಳೆಯನ್ನು ಎಲ್ಲರೂ ಮೆಟ್ಟಿಕೊಂಡೇ ಹೋದರು. ಪೊಲೀಸರು ಬಂದು ರಕ್ಷಿಸುವಷ್ಟರಲ್ಲಿ ಆಕೆ ಅಸುನೀಗಿದ್ದಳು' ಎಂದು ಪ್ರತ್ಯಕ್ಷದರ್ಶಿ, ಸೊಲ್ಲಾಪುರದ ಉದ್ಯಮಿ ರಾಜ್ ರಜಪೂತ ತಿಳಿಸಿದರು.

'ದುರ್ಘಟನೆ ನಡೆದ ನಂತರ ಸಂಗಮ ಸ್ನಾನಕ್ಕೆ ಅವಕಾಶ ನೀಡದೆ ಹಿಂದಕ್ಕೆ ಕಳುಹಿಸಲಾಯಿತು. ಗಂಗಾ ನದಿ ಸ್ನಾನಕ್ಕೆ ಮಾತ್ರ ಅವಕಾಶ ಕೊಟ್ಟರು. ನಾವು ತಂಗಿದ್ದ ಟೆಂಟ್‌ಗೆ ಮರಳಿ ಹಲವು ಗಂಟೆ ಬಳಿಕ ಮೊದಲು ಗಂಗಾ, ಆಮೇಲೆ ಸಂಗಮದಲ್ಲಿ ಸ್ನಾನ ಮಾಡಿದೆವು. ನಾವಿದ್ದ ಜಾಗದಿಂದ 5 ಕಿ.ಮಿ ದೂರ. ನಡೆದುಕೊಂಡೆ ಹೋಗಿ ಸ್ನಾನ ಮಾಡಿ ಬಂದಿದ್ದೇವೆ' ಎಂದು ಗೋಕರ್ಣದ ಪ್ರವಾಸಿಗರು ತಿಳಿಸಿದರು.

'ನಮಗೆ 20ಕ್ಕೂ ಹೆಚ್ಚು ಜನ ಕನ್ನಡಿಗರು ಸಿಕ್ಕಿದ್ದರು. ಎಲ್ಲರೂ ಸುರಕ್ಷಿತವಾಗಿದ್ದಾರೆ' ಎಂದು ಹೇಳಿದರು.

ಕಾಲ್ತುಳಿತ: ಪ್ರಮುಖ ಘಟನೆಗಳು

ಮುಂಬೈ(ರಾಯಿಟರ್ಸ್):ಭಾರತದಲ್ಲಿ ಈ ಹಿಂದಿನ ವರ್ಷಗಳಲ್ಲಿ ಹಲವು ಕಾಲ್ತುಳಿತದ ದುರ್ಘಟನೆಗಳು ಸಂಭವಿಸಿ, ಅಪಾರ ಸಾವು–ನೋವಿಗೆ ಕಾರಣವಾಗಿವೆ. ಬಹುತೇಕ ಕಾಲ್ತುಳಿತ ಘಟನೆಗಳು ಧಾರ್ಮಿಕ ಕಾರ್ಯಕ್ರಮಗಳು/ಸಮಾವೇಶಗಳಲ್ಲಿಯೇ ನಡೆದಿವೆ

ಜನವರಿ 2025: ಆಂಧ್ರಪ್ರದೇಶದ ತಿರುಪತಿಯ ವೆಂಕಟೇಶ್ವರ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ನಿಮಿತ್ತ ವಿತರಿಸಲಾಗುತ್ತಿದ್ದ ಉಚಿತ ಪಾಸ್ ಪಡೆಯುವ ವೇಳೆ ಉಂಟಾದ ನೂಕುನುಗ್ಗಲಿನಲ್ಲಿ 6 ಮಂದಿ ಮೃತಪಟ್ಟು, 35 ಜನರಿಗೆ ಗಾಯ

ಜುಲೈ 2024: ಉತ್ತರ ಪ್ರದೇಶದ ಹಾಥರಸ್‌ದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂತರೊಬ್ಬರ ಆಶೀರ್ವಾದ ಪಡೆಯಲು ಏಕಾ ಏಕಿ ಸಾವಿರಾರು ಜನರು ನುಗ್ಗಿದ್ದರಿಂದ ಕಾಲ್ತುಳಿತ ಉಂಟಾಗಿ 121 ಮಂದಿ ಸಾವು

ಜನವರಿ 2022: ಜಮ್ಮು–ಕಾಶ್ಮೀರದ ವೈಷ್ಣೋದೇವಿ ದೇಗುಲ ದ್ವಾರ ಕಿರಿದಾಗಿದ್ದು, ನೂರಾರು ಜನರು ಏಕಕಾಲಕ್ಕೆ ಪ್ರವೇಶಿಸಲು ಮುಂದಾದಾಗ ಕಾಲ್ತುಳಿತ ಉಂಟಾಗಿ 12 ಮಂದಿ ಸಾವು, ಹಲವರಿಗೆ ಗಾಯ

ಅಕ್ಟೋಬರ್ 2013: ಮಧ್ಯಪ್ರದೇಶದ ರತನಗಢದ ದೇವಾಲಯವೊಂದರಲ್ಲಿ ನವರಾತ್ರಿ ಅಂಗವಾಗಿ ನಡೆದ ದುರ್ಗಾ ಪೂಜೆಯಲ್ಲಿ 1.50 ಲಕ್ಷಕ್ಕೂ ಅಧಿಕ ಜನರು ಸೇರಿದ್ದರು. ಈ ವೇಳೆ ಉಂಟಾದ ಕಾಲ್ತುಳಿತದಲ್ಲಿ 115 ಮಂದಿ ಮೃತಪಟ್ಟು, ನೂರಕ್ಕೂ ಅಧಿಕ ಜನರಿಗೆ ಗಾಯ

ಮಾರ್ಚ್ 2010: ಉತ್ತರ ಪ್ರದೇಶದ ದೇವಸ್ಥಾನವೊಂದರಲ್ಲಿ ವಿತರಿಸಲಾಗುತ್ತಿದ್ದ ಆಹಾರ ಮತ್ತು ಬಟ್ಟೆಗಳನ್ನು ಪಡೆಯಲು ಭಾರಿ ಸಂಖ್ಯೆ ಜನರು ಸೇರಿದ್ದ ವೇಳೆ ಉಂಟಾದ ಕಾಲ್ತುಳಿತದಲ್ಲಿ 63 ಮಂದಿ ಸಾವು

ಸೆಪ್ಟೆಂಬರ್ 2008: ರಾಜಸ್ಥಾನದ ಚಾಮುಂಡಾ ದೇವಿ ದೇವಸ್ಥಾನದಲ್ಲಿ ನವರಾತ್ರಿ ಆಚರಣೆ ವೇಳೆ ಕಾಲ್ತುಳಿತ. ಈ ದುರ್ಘಟನೆಯಲ್ಲಿ 250 ಮಂದಿ ಸಾವು

ಆಗಸ್ಟ್ 2008: ಹಿಮಾಚಲ ಪ್ರದೇಶದ ಪರ್ವತವೊಂದರ ಮೇಲಿರುವ ನೈನಾ ದೇವಿ ದೇವಸ್ಥಾನದಲ್ಲಿ ನಡೆದ ಉತ್ಸವದಲ್ಲಿ ಸಾವಿರಾರು ಜನರು ಸೇರಿದ್ದರು. ಭೂಕುಸಿತವಾಗಿದೆ ಎಂಬ ವದಂತಿಯಿಂದ ಕಾಲ್ತುಳಿತ ಉಂಟಾಗಿ 145 ಮಂದಿ ಮೃತಪಟ್ಟರು

ಜನವರಿ 2005: ಮಹಾರಾಷ್ಟ್ರದ ವಾಯಿ ಪಟ್ಟಣದಲ್ಲಿರುವ ಮಂದಾರದೇವಿ ದೇವಸ್ಥಾನಕ್ಕೆ ಸಂಪರ್ಕಿಸುವ ಮಾರ್ಗದಲ್ಲಿ ಜಾರುವ ಮೆಟ್ಟಿಲುಗಳಿವೆ. ಈ ಕಾರಣದಿಂದ ಉಂಟಾದ ಕಾಲ್ತುಳಿತದಲ್ಲಿ 265ಕ್ಕೂ ಅಧಿಕ ಜನರ ಸಾವು

ಬಾಳ್ ರಷ್ ಅದ ಜೋಪಾನ ಬರ್ರಿ...

• ಸಂತೋಷ ಈ. ಚಿನಗುಡಿ

ಬೆಳಗಾವಿ: 'ನಾವು ಪ್ರಯಾಗ್‌ರಾಜ್ ಬಂದೇವಿ. ಇಲ್ಲಿ ಬಾಳ್ ಜನಾ ಸೇರಿದಾರಿ. ಬಾಳ್ ಅಂದರ ಬಾಳ್ ರಷ್ ಐತಿ. ಎಲ್ಲಾರೂ ಜೋಪಾನವಾಗಿ ಬರ್ರಿ...'

ಮಹಾಕುಂಭ ಮೇಳದಲ್ಲಿ ಪಾಲ್ಗೊಳ್ಳಲು ತೆರಳಿದ್ದ ಇಲ್ಲಿನ ವಡಗಾವಿಯ ನಿವಾಸಿ ಮೇಘಾ ದೀಪಕ್ ಹತ್ತರವಾಟ ಅವರು ಮಂಗಳವಾರ ರಾತ್ರಿ ಮಾಡಿದ ಕೊನೆಯ ಫೇಸ್‌ಬುಕ್ ಲೈವ್ ಮಾತುಗಳಿವು. ಸದಾ ನಗುಮೊಗದಿಂದ ಅರಳು ಹುರಿದಂತೆ ಮಾತನಾಡುತ್ತಿದ್ದ ಆ ಜೀವ ಶಾಶ್ವತವಾಗಿ ಮೌನವಾಗಿದೆ.

ರೀಲ್ಸ್ ಮತ್ತು ಕಿರುಚಿತ್ರಗಳನ್ನು ಮಾಡುವ ಹವ್ಯಾಸ ರೂಢಿಸಿಕೊಂಡ ಮೇಘಾ, ಪ್ರಯಾಗ್‌ರಾಜ್‌ನ ತಮ್ಮ ಭೇಟಿ ಕ್ಷಣಗಳನ್ನು ಸೆರೆ ಹಿಡಿದಿದ್ದರು. ಈ ವಿಡಿಯೊ ಮಾಡಿದ ಕೆಲವೇ ನಿಮಿಷಗಳಲ್ಲಿ ಅವರು ಕಾಲ್ತುಳಿತಕ್ಕೆ ಸಿಕ್ಕು ಪ್ರಾಣ ಬಿಟ್ಟರು. ವಿಡಿಯೊದಲ್ಲಿ ಅವರೊಂದಿಗೆ ಇರುವ ಅರುಣ ಕೋಪರ್ಡೆ ಕೂಡ ಬಲಿಯಾಗಿದ್ದು, ಇವರ ಪತ್ನಿ ಕಾಂಚನ್ ಗಾಯಗೊಂಡಿದ್ದಾರೆ.

ಪದವಿ ಮುಗಿಸಿದ ಮೇಘಾ ನಗರದ ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದರು. ಇವರ ತಂದೆ ದೀಪಕ್ ನೀರಾವರಿ ಇಲಾಖೆಯಲ್ಲಿ ಅಕೌಂಟ್ ಸೂಪರಿಂಟೆಂಡೆಂಟ್ ಆಗಿದ್ದಾರೆ. ವಡಗಾವಿಯಲ್ಲಿ ಸ್ವಂತ ಮನೆ ಕಟ್ಟಿಸಿಕೊಂಡು ಕುಟುಂಬ ಸಮೇತ ವಾಸವಿದ್ದಾರೆ. ಇವರ ಇನ್ನೊಬ್ಬ ಪುತ್ರಿಯನ್ನು ಹುಕ್ಕೇರಿಗೆ ಮದುವೆ ಮಾಡಿಕೊಡಲಾಗಿದೆ.

ಪತ್ನಿ– ಪುತ್ರಿಯನ್ನು ಕಳೆದುಕೊಂಡ ದೀಪಕ್ ಅವರಿಗೆ ಬರಸಿಡಿಲು ಬಡಿದಂತಾಗಿದೆ. ಕೈ–ಕಾಲು ನಡುಗುತ್ತಿದ್ದ ವೇಳೆಯೇ ಅವರು ಮಾಹಿತಿ ಸಂಗ್ರಹಿಸಲು ಪರದಾಡಿದರು.

ದಿಕ್ಕು ತೋಚದಾದ ವೃದ್ಧೆ: 'ಶೆಟ್ಟಿ ಗಲ್ಲಿಯಲ್ಲಿರುವ ಅರುಣ ಕೋಪರ್ಡೆ ಅವರು ಕಾಲ್ತುಳಿತದಲ್ಲಿ ಸಾವನ್ನಪ್ಪಿದ್ದಾರೆ. ಅವರ ಪತ್ನಿ ಕಾಂಚನ್ ತೀವ್ರ ಗಾಯಗೊಂಡಿದ್ದಾರೆ' ಎಂದು ತಹಶೀಲ್ದಾರ್ ಕಚೇರಿಯ ಸಿಬ್ಬಂದಿಯೊಬ್ಬರು ಮನೆಗೆ ಮಾಹಿತಿ ತಲುಪಿಸಿದರು. ಆಗ ಮನೆಯಲ್ಲಿದ್ದ 80 ವರ್ಷದ ವೃದ್ಧೆಯೊಬ್ಬರು ಕುಸಿದರು. ಯಾರು, ಎಲ್ಲಿ ಸತ್ತಿದ್ದಾರೆ? ಏನಾಗಿದೆ ಎಂಬುದೇ ಅವರಿಗೆ ಕೆಲಕಾಲ ಅರಿವಿಗೆ ಬರದಾಯಿತು.

ಸುತ್ತಮುತ್ತಲಿನ ಜನ ಅವರನ್ನು ಸಂತೈಸಲು ಮುಂದಾದರು. ಪದೇಪದೇ ಅರುಣ ಅವರ ಮೊಬೈಲ್‌ಗೆ ಕರೆ ಮಾಡುತ್ತಿದ್ದ ವೃದ್ಧೆಯ ಸ್ಥಿತಿ ಕಂಡು ಮರುಕಪಡದವರೇ ಇಲ್ಲ.

ಮಾರ್ಚ್‌ನಲ್ಲಿ ಹಸೆಮಣೆ ಏರಬೇಕಿದ್ದವಳು ಮಸಣಕ್ಕೆ

'ಮಗಳಿಗೆ ಮದುವೆ ಮಾಡಲು ನಿಶ್ಚಯಿಸಿದ್ದೆ. ಮಾತುಕತೆ ನಡೆದಿತ್ತು. ಮಾರ್ಚ್‌ನಲ್ಲಿ ಮದುವೆ ಮಾಡುತ್ತೇನೆ ಮಗಳೇ ಎಂದು ಹೇಳಿದ್ದೆ. ಅದಕ್ಕೆ ಅವಳೂ ಒಪ್ಪಿದ್ದಳು. ಮದುವೆ ಬಳಿಕ ಪ್ರಯಾಗ್‌ರಾಜ್‌ಗೆ ಹೋಗಲು ಅವಕಾಶ ಸಿಗುವುದೋ ಇಲ್ಲವೋ, ಈಗಲೇ ಹೋಗಿಬರುತ್ತೇನೆ ಎಂದು ಹೇಳಿದ್ದಳು' ಎಂದು ಮೇಘಾ ತಂದೆ ದೀಪಕ್ ನೆನಪಿಸಿಕೊಂಡರು.

'ಮೇಘಾಳನ್ನು ಪ್ರೀತಿಯಿಂದ ಮ್ಯಾಗಿ ಅನ್ನುತ್ತಿದ್ದೆವು. ಆಕೆ ಮೊದಲಿನಿಂದಲೂ ಧಾರ್ಮಿಕ ಸ್ವಭಾವದವಳು. ಮನೆಯಲ್ಲಿ ಹಠ ಮಾಡಿ ಮಹಾಕುಂಭ ಮೇಳಕ್ಕೆ ತೆರಳಿದ್ದಳು. ಹೋಗುವ ಮುನ್ನ ಎಲ್ಲರೂ ಖುಷಿಯಿಂದ ಕಳಿಸಿದ್ದೆವು. ಈಗ ಅವಳು ಇಲ್ಲ ಎನ್ನುವ ಸುದ್ದಿ ಸಹಿಸಿಕೊಳ್ಳಲು ಆಗುತ್ತಿಲ್ಲ' ಎಂದು ಮೇಘಾ ಅವರ ಸಹಪಾಠಿಗಳು ದುಃಖ ವ್ಯಕ್ತಪಡಿಸಿದರು.



ಕಾಲ್ತುಳಿತದಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಕುಟುಂಬ ಸದಸ್ಯರು ಆಸ್ಪತ್ರೆಯ ಶವಾಗಾರದ ಹೊರಗೆ ರೋದಿಸಿದರು

'ಕಾಲಿಗೆ ಏಟಾಯಿತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೌನಿ ಅಮಾವಾಸ್ಯೆ'ಯ ಸ್ನಾನ ಮುಗಿಸಿ ವಾಪಸ್ ಬರುತ್ತಿರುವಾಗ, ಇದ್ದಕ್ಕಿಂತೆ ಜನದಟ್ಟಣೆ ಹೆಚ್ಚಾಗಿ, ಮೇಲಿನಿಂದ ಜನರು ಉರುಳಿದರು. ತಳ್ಳಾಟದ ವೇಳೆ ನನಗೂ ಕಾಲಿಗೆ ಗಾಯವಾಯಿತು. ದಟ್ಟಣೆ ಕಡಿಮೆಯಾಗುವವರೆಗೂ ಒಂದು ಬದಿಯಲ್ಲೇ ನಿಂತು, ಅಲ್ಲಿಂದ ಹೊರಟು ಬಂದೆವು...'

ಕಾಲ್ತುಳಿತದಿಂದ ಪಾರಾಗಿ ಬಂದ ಬೆಂಗಳೂರಿನ ವಕೀಲ ಹಾಗೂ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ್ ಕುಮಾರ್, ಅಲ್ಲಿನ ಅನುಭವವನ್ನು 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡರು.

'ನನ್ನ ಸಹೋದರಿಯೊಂದಿಗೆ ಕುಂಭಮೇಳಕ್ಕೆ ಬಂದಿದ್ದೆ. ಸ್ನಾನಕ್ಕೆ ಹೋಗಿ ವಾಪಸಾಗುವಾಗ, ಈ ಘಟನೆ ಸಂಭವಿಸಿತು. ಅಲ್ಲಿಂದ ಕಿಲೋಮೀಟರ್‌ಗಟ್ಟಲೆ ನಡೆಯಬೇಕಾಯಿತು. ಕಾಲು ಊದಿತ್ತು' ಎಂದರು. 'ಮೊದಲೇ ಬುಕ್ ಮಾಡಿ ಬಂದಿದ್ದೆವು. ಆದರೂ ಇಲ್ಲಿ ಊಟ–ವಸತಿ ವ್ಯವಸ್ಥೆ ಸರಿಯಾಗಿರಲಿಲ್ಲ. ಮೇಳದಲ್ಲಿ ಸರಿಯಾಗಿ ಮಾರ್ಗದರ್ಶನ ನೀಡುವವರಿರಲಿಲ್ಲ' ಎಂದರು.

ಅಪಘಾತ: ಕುಂಭಮೇಳಕ್ಕೆ ತೆರಳಿದ್ದ ಅರ್ಚಕ ಸಾವು

ಪಾಂಡವಪುರ (ಮಂಡ್ಯ ಜಿಲ್ಲೆ): ಕುಂಭಮೇಳಕ್ಕೆ ತೆರಳಿದ್ದ ತಾಲ್ಲೂಕಿನ ಕೆ.ಆರ್.ಎಸ್.ಹಿನ್ನೀರಿನ ವೇಣುಗೋಪಾಲಸ್ವಾಮಿ ದೇವಸ್ಥಾನದ ಸಹಾಯಕ ಅರ್ಚಕ ರಾಮಕೃಷ್ಣ ಶರ್ಮಾ (31) ಅವರು ಮಿರ್ಜಾಪುರದಲ್ಲಿ ಬುಧವಾರ ನಡೆದ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಕುಂಭಮೇಳದಲ್ಲಿ ಪವಿತ್ರ ಸ್ನಾನದ ನಂತರ ಕಾಶಿಗೆ ತಮ್ಮ ಕಾರಿನಲ್ಲಿ ತೆರಳುವಾಗ ಮಿರ್ಜಾಪುರ ಬಳಿ ಎದುರಿನಿಂದ ಬಂದ ಗ್ಯಾಸ್ ಟ್ಯಾಂಕರ್ ಡಿಕ್ಕಿ ಹೊಡೆಯಿತು. ತಲೆಗೆ ತೀವ್ರ ಗಾಯಗಳಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕಾರು ಚಾಲಕ ಅರುಣ್ ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ರಸ್ತೆಯಲ್ಲೇ ಸಿಲುಕಿದ ಭಕ್ತರು

ಪ್ರಜಾವಾಣಿ ವಾರ್ತೆ

ಲಖನೌ: ಪ್ರಯಾಗರಾಜ್ ಕಡೆ ಸಾಗುವ ರಸ್ತೆಗಳನ್ನು ಅಧಿಕಾರಿಗಳು ಕಾಲ್ತುಳಿತದ ನಂತರ ಬಂದ್ ಮಾಡಿದ ಕಾರಣದಿಂದಾಗಿ, ಸಹಸ್ರಾರು ಮಂದಿ ಭಕ್ತರು ಮುಂದಕ್ಕೆ ಹೋಗಲೂ ಆಗದ, ಮರಳಲೂ ಆಗದ ಸ್ಥಿತಿಗೆ ಸಿಲುಕಿದ್ದಾರೆ.

ಲಖನೌ–ಪ್ರಯಾಗರಾಜ್ ಹೆದ್ದಾರಿ, ಬುಂದೇಲ್‌ಖಂಡ ಎಕ್ಸ್‌ಪ್ರೆಸ್ ಹೆದ್ದಾರಿ ಮತ್ತು ಇತರ ರಸ್ತೆಗಳಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ ಎಂದು ವರದಿಗಳು ಹೇಳಿವೆ. ಕೆಲವರನ್ನು ವಾಪಸ್ ಕಳುಹಿಸಲಾಗುತ್ತಿದೆ.

'ನಾವು ಇನ್ನೂ ಎಷ್ಟು ಹೊತ್ತು ಇಲ್ಲಿರಬೇಕು ಎಂಬುದು ಗೊತ್ತಾಗಿಲ್ಲ... ಮಹಾಕುಂಭದ ಸ್ಥಳದಲ್ಲಿ ಭಕ್ತರು ಭಾರಿ ಸಂಖ್ಯೆಯಲ್ಲಿ ಸೇರಿದ್ದಾರೆ, ಅಲ್ಲಿ ಜನರ ಸಂಖ್ಯೆ ಕಡಿಮೆ ಆದ ನಂತರವೇ ನಮ್ಮನ್ನು ಮುಂದಕ್ಕೆ ಬಿಡಲಾಗುತ್ತದೆ ಎಂದು ಹೇಳಲಾಗಿದೆ' ಎಂದು ರಾಯ್‌ಬರೇಲಿಯಲ್ಲಿ ನಿಂತಿರುವ ಭಕ್ತರೊಬ್ಬರು ತಿಳಿಸಿದ್ದಾರೆ.

ಕೆಲವು ಭಕ್ತರು ವಾಹನಗಳಿಂದ ಇಳಿದು ಕಾಲ್ನಡಿಗೆಯಲ್ಲೇ ಸಾಗುತ್ತಿದ್ದಾರೆ. ಇನ್ನು ಕೆಲವರು ಮಹಾಕುಂಭ ನಡೆಯುತ್ತಿರುವ ಸ್ಥಳಕ್ಕೆ ತೆರಳುವ ಬದಲು ವಿಶ್ವನಾಥನ ದರ್ಶನಕ್ಕೆ ಕಾಶಿಗೆ ತೆರಳುತ್ತಿದ್ದಾರೆ.



ಗಾಯಗೊಂಡ ವ್ಯಕ್ತಿಯನ್ನು ರಕ್ಷಣಾ ಸಿಬ್ಬಂದಿ ಸ್ಟ್ರೆಚರ್ ಮೇಲೆ ಆಸ್ಪತ್ರೆಗೆ ಕರೆದೊಯ್ದರು

ಹಾಸನ: ಪ್ರವಾಸಿಗರು ಸುರಕ್ಷಿತ

ಹಾಸನ: 'ಜಿಲ್ಲೆಯಿಂದ ಕುಂಭಮೇಳಕ್ಕೆ ತೆರಳಿರುವವರ ನಿಖರ ಮಾಹಿತಿ ಇಲ್ಲ. ಆದರೆ, ಇದುವರೆಗೆ ಯಾವುದೇ ವ್ಯಕ್ತಿ ಗಾಯಗೊಂಡಿರುವ ಅಥವಾ ನಾಪತ್ತೆಯಾಗಿರುವ ಬಗ್ಗೆ ಮಾಹಿತಿ ಬಂದಿಲ್ಲ. ಜಿಲ್ಲೆಯಿಂದ ತೆರಳಿರುವ ಪ್ರವಾಸಿಗರು ಸುರಕ್ಷಿತವಾಗಿದ್ದಾರೆ' ಎಂದು ಎಸ್ಪಿ ಮೊಹಮ್ಮದ್ ಸುಜೀತಾ ತಿಳಿಸಿದ್ದಾರೆ.



ನಿರ್ಬಂಧಗಳ ಹೊರತಾಗಿಯೂ, ಕಾಲ್ತುಳಿತದ ನಂತರ ಭಕ್ತರು ತಡೆಗೋಡೆಗಳನ್ನು ದಾಟಲು ಯತ್ನಿಸಿದರು

ಪುಣ್ಯಸ್ನಾನದ ಬಗ್ಗೆ ಇರುವ ನಂಬಿಕೆ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದು ದುರ್ಘಟನೆ ನಡೆದಿದೆ. ಪರಿಸ್ಥಿತಿಯನ್ನು ನೋಡಿಕೊಂಡು ಬನ್ನಿ ಎಂದು ಕುಂಭಮೇಳ ಸಮಿತಿ ಮನವಿ ಮಾಡಿತ್ತು. ಸೂಕ್ತ ಕ್ರಮ ಕೈಗೊಳ್ಳುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಪ್ರಧಾನಿ ನಿರ್ದೇಶನ ನೀಡಿದ್ದಾರೆ

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಮಹಾಕುಂಭ ಮೇಳಕ್ಕೆ ಹೋದವರು ಪ್ರಾಣ ಕಳೆದುಕೊಂಡಿದ್ದು ಕೇಳಿ ಆಘಾತವಾಗಿದೆ. ಉಳಿದವರನ್ನು ಸುರಕ್ಷಿತವಾಗಿ ಕರೆತರುವ ಯತ್ನ ನಡೆಸಿದ್ದೇವೆ

ಅಭಯ ಪಾಟೀಲ, ಶಾಸಕ

ಇಂಥ ದೊಡ್ಡ ಕಾರ್ಯಕ್ರಮದಲ್ಲಿ ಭಾರಿ ಜನಸ್ತೋಮ ಸೇರಿದಾಗ ಇಂತಹ ಸಣ್ಣ ಘಟನೆ ನಡೆದಿರುವುದು ಸರ್ವೇಸಾಮಾನ್ಯ

ಸಂಜಯ್ ನಿಶಾದ್, ಉತ್ತರ ಪ್ರದೇಶದ ಸಚಿವ

ವಿಪಕ್ಷಗಳ ಟೀಕೆ

ಮಹಾಕುಂಭ ಮೇಳದಲ್ಲಿ ಕಾಲ್ತುಳಿತ ಉಂಟಾಗಿ, ಹಲವರು ಮೃತಪಟ್ಟಿರುವ ಘಟನೆ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದುಃಖ ವ್ಯಕ್ತಪಡಿಸಿದ್ದಾರೆ.

ಆದರೆ, ಈ ದುರಂತ ಸಂಭವಿಸಲು 'ವಿಐಪಿ ಸಂಸ್ಕೃತಿ'ಯೇ ಕಾರಣ ಎಂದು ಅವರು ಟೀಕಿಸಿದ್ದಾರೆ.

ಈ ದುರ್ಘಟನೆ ಕುರಿತು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ ಹಾಗೂ ಬಿಎಸ್‌ಪಿ ನಾಯಕಿ ಮಾಯಾವತಿ ಅವರೂ ಸಂತಾಪ ಸೂಚಿಸಿದ್ದು, ಗಾಯಾಳುಗಳಿಗೆ ಸಾಧ್ಯವಿರುವ ಎಲ್ಲ ವೈದ್ಯಕೀಯ ನೆರವು ನೀಡಲು ಕ್ರಮ ತೆಗೆದುಕೊಳ್ಳಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

'ಇದು ವಿಶ್ವದರ್ಜೆಯ ವ್ಯವಸ್ಥೆಯ ಮತ್ತೊಂದು ಮುಖವನ್ನು ಬಹಿರಂಗಪಡಿಸಿದೆ. ಈ ದುರಂತಕ್ಕೆ ಕಾರಣರಾದವರು ರಾಜೀನಾಮೆ ನೀಡಬೇಕು. ದಟ್ಟಣೆ ನಿರ್ವಹಣೆ ಜವಾಬ್ದಾರಿಯನ್ನು ಸೇನೆಗೆ ವಹಿಸಬೇಕು' ಎಂದು ಅಖಿಲೇಶ್ ಯಾದವ್ ಒತ್ತಾಯಿಸಿದ್ದಾರೆ.

ಪುಣ್ಯಸ್ನಾನಕ್ಕೆ ಮಹತ್ವ

ಸಂಪ್ರದಾಯದಂತೆ, 'ಮೌನಿ ಅಮಾವಾಸ್ಯೆ'ಯಂದು ಸನ್ಯಾಸಿ, ಬೈರಾಗಿ ಮತ್ತು ಉದಾಸೀನ ಪಂಥಗಳಿಗೆ ಸಂಬಂಧಿಸಿದ ಅಖಾಡಗಳ ಅನುಯಾಯಿಗಳು ಪುಣ್ಯಸ್ನಾನ ಮಾಡುತ್ತಾರೆ. ಈ ವೇಳೆ ಅವರು, ಸಂಗಮ ಘಾಟ್ ವರೆಗೂ ಮೆರವಣಿಗೆ ನಡೆಸುತ್ತಾರೆ.

'ತ್ರಿವೇಣಿ ಸಂಗಮ'ವು ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳು ಒಂದೆಡೆ ಸೇರುವ ಸ್ಥಳವಾಗಿದೆ. ಮೌನಿ ಅಮಾವಾಸ್ಯೆಯಂದು ಈ ಸಂಗಮದಲ್ಲಿ ಸ್ನಾನ ಮಾಡುವುದರಿಂದ ಪಾಪ ನಾಶವಾಗಿ, ಮೋಕ್ಷ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಇದೆ.

12 ವರ್ಷಗಳಿಗೊಮ್ಮೆ ನಡೆಯುವ ಮಹಾ ಕುಂಭವು ಈ ಬಾರಿ ಜನವರಿ 13ರಂದು ಆರಂಭವಾಗಿದ್ದು, ಫೆಬ್ರುವರಿ 26ರ ವರೆಗೆ ನಡೆಯಲಿದೆ.

ನಾಲ್ವರ ಸಾವು

ಒಂದನೇ ಪುಟದಿಂದ...

ವಡಗಾವಿಯ ನಿವಾಸಿ, ನೀರಾವರಿ ಇಲಾಖೆಯಲ್ಲಿ ಅಕೌಂಟ್ ಸೂಪರಿಂಟೆಂಡೆಂಟ್ ಆಗಿರುವ ದೀಪಕ್ ಹತ್ತರವಾಟ ಅವರ ಪತ್ನಿ ಜ್ಯೋತಿ ಹಾಗೂ ಪುತ್ರಿ ಮೇಘನಾ ಸಾವನ್ನಪ್ಪಿದ ಸುದ್ದಿ ಮೊದಲು ದೀಪಕ್ ಅವರಿಗೇ ಖಾತ್ರಿಯಾಯಿತು. ಹಿಂದಿ ಸುದ್ದಿವಾಹಿನಿಯಲ್ಲಿ ಬರುತ್ತಿದ್ದ ವಿಡಿಯೊದಲ್ಲಿ ಅವರು ತಮ್ಮ ಪತ್ನಿಯನ್ನು ಗುರುತಿಸಿದ್ದರು.

ಇಬ್ಬರು ಮೃತಪಟ್ಟ ಸುದ್ದಿ ಕಾಳ್ಗಿಚ್ಚಿನಂತೆ ನಗರದೆಲ್ಲೆಡೆ ಹರಡಿತು. ಯಾತ್ರೆಗೆ ತೆರಳಿದವರ ಬಗ್ಗೆ ಮಾಹಿತಿ ಪಡೆಯಲು ಕುಟುಂಬದವರೆಲ್ಲ ಆತಂಕದಿಂದ ದೂರವಾಣಿ ಕರೆ ಮಾಡಿದರು. ಆಗ ಅರುಣ ಕೋಪರ್ಡೆ ಮತ್ತು ಮಹಾದೇವಿ ಅವರೂ ಕೊನೆಯುಸಿರೆಳೆದ ಬಗ್ಗೆ ತಿಳಿಯಿತು. ಈ ಇಬ್ಬರೂ ಇನ್ನೊಂದು ಟ್ರಾವೆಲ್ ಏಜೆನ್ಸಿ ಮೂಲಕ ಪ್ರಯಾಣ ಬೆಳೆಸಿದ್ದರು. ಸಂಸದ ಜಗದೀಶ ಶೆಟ್ಟರ್, ಶಾಸಕರಾದ ಅಭಯ ಪಾಟೀಲ, ಆಸಿಫ್ ಸೇಠ್, ಜಿಲ್ಲಾಧಿಕಾರಿ ಕಚೇರಿ ಹಾಗೂ ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ಇವರ ಮನೆಗಳಿಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಶವ ತರಲು ವಿಶೇಷ ತಂಡ

'ಕಾಲ್ತುಳಿತದಲ್ಲಿ ಮೃತಪಟ್ಟ ಬೆಳಗಾವಿಯ ನಾಲ್ವರ ಶವಗಳನ್ನು ಮರಳಿ ಮನೆಗೆ ತರಲು ಕ್ರಮ ವಹಿಸಲಾಗಿದೆ. ವಿಶೇಷ ಜಿಲ್ಲಾಧಿಕಾರಿ ಹರ್ಷಾ ಶೆಟ್ಟಿ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ಎಸ್.ಶ್ರುತಿ ಅವರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

'ತಂಡವು ಬುಧವಾರವೇ ಪ್ರಯಾಗ್‌ರಾಜ್‌ಗೆ ಪ್ರಯಾಣ ಬೆಳೆಸಿದೆ. ಉತ್ತರ ಪ್ರದೇಶದ ಅಧಿಕಾರಿಗಳ ಜತೆಗೂ ಸಂಪರ್ಕದಲ್ಲಿದ್ದೇವೆ. ಇನ್ನಷ್ಟು ಜನರ ಸಂಪರ್ಕ ಕಡಿತಗೊಂಡಿದೆ. ಸಂಪರ್ಕ ಸಾಧಿಸುವ ಯತ್ನ ಮುಂದುವರಿದಿದೆ' ಎಂದರು.

'ಆರಾಮವಾಗಿದ್ದೇವೆ'

'ನಾವು ಆರಾಮಾವಾಗಿದ್ದೇವೆ' ಎಂದು ಬೆಳಗಾವಿಯ ಇತರ 56 ಮಂದಿ ಯಾತ್ರಾರ್ಥಿಗಳು ವಿಡಿಯೊ ಮಾಡಿ ಕಳುಹಿಸಿದ್ದಾರೆ. ಎರಡು ಬಸ್‌ಗಳಲ್ಲಿ ಬೆಳಗಾವಿಯಿಂದ 60 ಮಂದಿ ಪ್ರಯಾಗ್‌ರಾಜ್‌ಗೆ ಪ್ರಯಾಣ ಬೆಳೆಸಿದ್ದರು.

ಕಾಲ್ತುಳಿತ: 30 ಸಾವು

ಒಂದನೇ ಪುಟದಿಂದ...

ಪ್ರಧಾನಿ ಆಘಾತ: ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ, ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.

'ಗಾಯಾಳುಗಳು ತ್ವರಿತವಾಗಿ ಚೇತರಿಸಿಕೊಳ್ಳಲಿ. ಪ್ರಯಾಗ್‌ರಾಜ್ ಜಿಲ್ಲಾಡಳಿತವು ಸಂತ್ರಸ್ತರಿಗೆ ಸಾಧ್ಯವಿರುವ ಎಲ್ಲ ನೆರವು ನೀಡುತ್ತಿದೆ' ಎಂದೂ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಕಾಲ್ತುಳಿತ ಸಂಭವಿಸಿದ ಮಹಾ ಕುಂಭ ನಗರದ 'ಸಂಗಮ'ದ ಬಳಿ, ಆಂಬುಲೆನ್ಸ್‌ಗಳು ಓಡಾಟದ ದೃಶ್ಯಗಳಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಒಂದೆಡೆ, ಆಸ್ಪತ್ರೆಯಲ್ಲಿ ಮೃತದೇಹಗಳು ಕಂಡುಬಂದರೆ ಮತ್ತೊಂದೆಡೆ, ನಾಪತ್ತೆಯಾಗಿರುವ ತಮ್ಮ ಸಂಬಂಧಿಕರನ್ನು ಹುಡುಕುವುದರಲ್ಲಿ ಜನರು ನಿರತರಾಗಿದ್ದರು. ಗಾಯಗಳಿಂದಾಗಿ, ತಮ್ಮವರು ನಾಪತ್ತೆಯಾಗಿದ್ದಕ್ಕಾಗಿ ಇಲ್ಲವೇ ಮೃತಪಟ್ಟಿದ್ದಕ್ಕಾಗಿ ಗೋಗರೆಯುತ್ತಿರುವ ಜನರು, ಗಾಯಾಳುಗಳನ್ನು ಸ್ಟ್ರೆಚರ್ ಮೇಲೆ ಕರೆದೊಯ್ಯುತ್ತಿದ್ದ ಚಿತ್ರಗಳು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಮಹಾಕುಂಭ ವೇಳೆ ಕಾಲ್ತುಳಿತ

1954: ಪ್ರಯಾಗ್‌ರಾಜ್‌ನಲ್ಲಿ ನಡೆದ 'ಮೌನಿ ಅಮಾವಾಸ್ಯೆ' ಪುಣ್ಯಸ್ನಾನದ ಸಂದರ್ಭದಲ್ಲಿ, 800ಕ್ಕೂ ಹೆಚ್ಚು ಜನರ ಸಾವು

1986: ಹರಿದ್ವಾರದಲ್ಲಿ ನಡೆದ ಕುಂಭ ವೇಳೆ 200 ಭಕ್ತರ ಸಾವು

2003: ಮಹಾರಾಷ್ಟ್ರದ ನಾಸಿಕ್‌ನಲ್ಲಿ ಕುಂಭದ ಅಂಗವಾಗಿ ಗೋದಾವರಿ ನದಿ ತೀರದಲ್ಲಿ 39 ಜನರ ಸಾವು

2013: ಕುಂಭ ನಡೆಯುತ್ತಿದ್ದ ಸಂದರ್ಭದಲ್ಲಿ ಅಲಹಾಬಾದ್ ರೈಲು ನಿಲ್ದಾಣದ ಪಾದಚಾರಿ ಸೇತುವೆ ಕುಸಿದಾಗ ಉಂಟಾದ ಕಾಲ್ತುಳಿತದಲ್ಲಿ 42 ಮಂದಿ ಸಾವು

ಶ್ರೀಹರಿಕೋಟ: 'ಎನ್‌ವಿಎಸ್‌-02' ಉಪಗ್ರಹ ಉಡ್ಡಯನ ಯಶಸ್ವಿ

ಇಸ್ರೊಗೆ 100ನೇ ಉಡ್ಡಯನ ಸಾಧನೆ ಗರಿ



'ಎನ್‌ವಿಎಸ್–02' ಉಡ್ಡಯನ ಯಶಸ್ವಿಗೊಂಡಿದ್ದರಿಂದ ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಸಹೋದ್ಯೋಗಿಗಳೊಂದಿಗೆ ಸಂಭ್ರಮಿಸಿದರು – ಪಿಟಿಐ ಚಿತ್ರ

ಶ್ರೀಹರಿಕೋಟ (ಆಂಧ್ರಪ್ರದೇಶ) (ಪಿಟಿಐ): ಇಲ್ಲಿನ 'ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡ್ಡಯನ ನೆಲೆಯಿಂದ ಬೆಳಿಗ್ಗೆ 6.23ಕ್ಕೆ 'ಎನ್‌ವಿಎಸ್-02' ಉಪಗ್ರಹ ಹೊತ್ತ ರಾಕೆಟ್ ಜಿಎಸ್‌ಎಲ್‌ವಿ–ಎಫ್15 ಆಗಸಕ್ಕೆ ಚಿಮ್ಮಿ, ಉಪಗ್ರಹವನ್ನು ಉದ್ದೇಶಿತ ಕಕ್ಷೆಗೆ ಸೇರಿಸಿತು' ಎಂದು ಇಸ್ರೊ ಮುಖ್ಯಸ್ಥ ವಿ.ನಾರಾಯಣನ್ ಬುಧವಾರ ಪ್ರಕಟಿಸಿದರು.

ವಿ. ನಾರಾಯಣನ್ ಅವರು ಇಸ್ರೊ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ನಂತರ ನಡೆದ ಮೊದಲ ಉಡ್ಡಯನ ಹಾಗೂ ಈ ವರ್ಷ, ಇಸ್ರೊ ಯಶಸ್ವಿಯಾಗಿ ನಿಭಾಯಿಸಿದ ಮೊದಲ ಬಾಹ್ಯಾಕಾಶ ಯೋಜನೆಯೂ ಇದಾಗಿದೆ.

'ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡ್ಡಯನ ನೆಲೆಯಿಂದ ಬೆಳಿಗ್ಗೆ 6.23ಕ್ಕೆ 'ಎನ್‌ವಿಎಸ್-02' ಉಪಗ್ರಹ ಹೊತ್ತ ರಾಕೆಟ್ ಜಿಎಸ್‌ಎಲ್‌ವಿ–ಎಫ್15 ಆಗಸಕ್ಕೆ ಚಿಮ್ಮಿ, ಉಪಗ್ರಹವನ್ನು ಉದ್ದೇಶಿತ ಕಕ್ಷೆಗೆ ಸೇರಿಸಿತು' ಎಂದು ವಿ.ನಾರಾಯಣನ್ ಪ್ರಕಟಿಸಿದರು.

ಮಿಷನ್ ಕಂಟ್ರೋಲ್ ರೂಮ್‌ನಿಂದ ಮಾತನಾಡಿದ ಅವರು, 'ನಮ್ಮ ಉಡ್ಡಯನ ನೆಲೆಯಿಂದ ಕೈಗೊಂಡ 100ನೇ ಉಡ್ಡಯನ ಇದಾಗಿದ್ದು, ಭಾರತದ ಪಾಲಿಗೆ ಇದು ಮಹತ್ವದ ಮೈಲುಗಲ್ಲು' ಎಂದರು.

'ಈ ಬಾಹ್ಯಾಕಾಶ ಕಾರ್ಯಕ್ರಮವು ದೂರದೃಷ್ಟಿಯುಳ್ಳ ನಮ್ಮ ನಾಯಕ ಪ್ರೊ.ವಿಕ್ರಮ್ ಸಾರಾಭಾಯಿ ಅವರ ಪರಿಕಲ್ಪನೆ. ಅವರು ಆರಂಭಿಸಿದ ಈ ಕಾರ್ಯವನ್ನು ನಂತರ ಪೀಳಿಗೆಯ ನಾಯಕರು ಮುಂದುವರಿಸಿಕೊಂಡು ಬಂದಿದ್ದಾರೆ' ಎಂದು ಹೇಳಿದ ಅವರು, ವಿಐಪಿ ಗ್ಯಾಲರಿಯಲ್ಲಿ ಕುಳಿತಿದ್ದ ಇಸ್ರೊ ಮಾಜಿ ಮುಖ್ಯಸ್ಥರಾದ ಎಸ್. ಸೋಮನಾಥ್ ಹಾಗೂ ಎ.ಎಸ್.ಕಿರಣ್ ಕುಮಾರ್ ಅವರತ್ತ ಕೈತೋರಿದರು.

ದೇಶೀಯವಾಗಿಯೇ ಅಭಿವೃದ್ಧಿಪಡಿಸಿರುವ 'ಪರಮಾಣು ಗಡಿಯಾರ' ಅಳವಡಿಸಿರುವ 2ನೇ ಉಪಗ್ರಹ ಇದಾಗಿದೆ ಎಂದು ಅವರು ಹೇಳಿದರು.

'ಮುಂದಿನ 5 ವರ್ಷದಲ್ಲಿ 100 ಉಡ್ಡಯನಗಳು ಸಾಧ್ಯ'

'ಇಸ್ರೊ ಮುಂದಿನ 5 ವರ್ಷಗಳಲ್ಲಿ 100 ಉಡ್ಡಯನಗಳನ್ನು ಪೂರೈಸಲು ಸಾಧ್ಯವಿದೆ' ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮುಂದಿನ ಯೋಜನೆಗಳ ಕುರಿತು ಮಾಹಿತಿ ನೀಡುವ ವೇಳೆ, ಸುದ್ದಿಗಾರರು ಕೇಳಿದ ಪ್ರಶ್ನೆಯೊಂದಕ್ಕೆ ಅವರು ಮೇಲಿನಂತೆ ಉತ್ತರಿಸಿದರು.

'100 ಉಡ್ಡಯನಗಳ ಮೈಲುಗಲ್ಲು ಸಾಧಿಸುವುದಕ್ಕೆ ಇಸ್ರೊ 46 ವರ್ಷ ತೆಗೆದುಕೊಂಡಿತು. ಮುಂದಿನ 5 ವರ್ಷಗಳಲ್ಲಿ ಇಷ್ಟೇ ಸಂಖ್ಯೆಯ ಬಾಹ್ಯಾಕಾಶ ಕಾರ್ಯಕ್ರಮಗಳನ್ನು ಇಸ್ರೊ ಕಾರ್ಯಗತಗೊಳಿಸಬಲ್ಲದೇ' ಎಂಬ ಪ್ರಶ್ನೆ ಸುದ್ದಿಗಾರರಿಂದ ತೂರಿಬಂತು.

ಇದಕ್ಕೆ ಪ್ರತಿಕ್ರಿಯಿಸಿದ ನಾರಾಯಣನ್, 'ನೀವು ಸರಿಯಾದ ಪ್ರಶ್ನೆಯನ್ನೇ ಕೇಳುತ್ತಿದ್ದೀರಿ. ಮುಂದಿನ 5 ವರ್ಷಗಳಲ್ಲಿ ಈ ಸಾಧನೆ ಮಾಡಲು ಸಾಧ್ಯವಿದೆ' ಎಂದು ಉತ್ತರಿಸಿದರು.

'ನಾಸಾ ಸಹಯೋಗದೊಂದಿಗೆ ಕೈಗೊಂಡಿರುವ 'ಎನ್‌ಐಎಸ್‌ಎಆರ್' (ನಾಸಾ–ಇಸ್ರೊ ಸಿಂಥೆಟಿಕ್ ಅಪರ್ಚರ್ ರಾಡಾರ್) ಯೋಜನೆಯ ಒಂದು ರಾಡಾರ್ ಅನ್ನು ಇಸ್ರೊ ಹಾಗೂ ಮತ್ತೊಂದು ರಾಡಾರ್ ಅನ್ನು ನಾಸಾ ಅಭಿವೃದ್ಧಿಪಡಿಸಿದೆ. ಇವುಗಳನ್ನು ಒಳಗೊಂಡ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿರುವ ಯು.ಆರ್.ರಾವ್ ಉಪಗ್ರಹ ಕೇಂದ್ರದಲ್ಲಿ ಜೋಡಣೆ ಮಾಡಿ, ಪರೀಕ್ಷಿಸಲಾಗಿದೆ. ಇದು, ಶ್ರೀಹರಿಕೋಟಕ್ಕೆ ಸಾಗಿಸಲು ಸಿದ್ಧಗೊಂಡಿದೆ' ಎಂದರು.

'ಎನ್‌ಜಿಎಲ್‌ವಿ (ನೆಕ್ಸ್ಟ್ ಜನರೇಷನ್ ಲಾಂಚ್ ವೆಹಿಕಲ್) ಅಭಿವೃದ್ಧಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ರಾಕೆಟ್‌ಗಳನ್ನು ಚಂದ್ರಯಾನ–4 ಮತ್ತು ಚಂದ್ರಯಾನ–5ರಲ್ಲಿ ಬಳಸಬಹುದಾಗಿದೆ' ಎಂದು ಹೇಳಿದರು.

ರಣಜಿ ಟ್ರೋಫಿ ಕ್ರಿಕೆಟ್ • ಕರ್ನಾಟಕ– ಹರಿಯಾಣ ಮುಖಾಮುಖಿ ಇಂದಿನಿಂದ

ರಾಹುಲ್ ಆಕರ್ಷಣೆ: ನಾಕೌಟ್ ಸವಾಲ್

• ಗಿರೀಶ ದೊಡ್ಡಮನಿ



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ಅಭಿಮಾನಿಗಳಿಗೆ ಹಸ್ತಾಕ್ಷರ ನೀಡಿದ ಕೆ.ಎಲ್. ರಾಹುಲ್
ಪ್ರಜಾವಾಣಿ ಚಿತ್ರಗಳು: ಎಸ್.ಕೆ. ದಿನೇಶ್

ಬೆಂಗಳೂರು: ಈ ಸಲದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯು ಕರ್ನಾಟಕ ತಂಡದ ಮಟ್ಟಿಗೆ ಪ್ರವಾಹದ ವಿರುದ್ಧದ ಈಜು. ಏಕೆಂದರೆ; ಸಿ ಗುಂಪಿನಲ್ಲಿ ಆಡಿದ ಆರು ಪಂದ್ಯಗಳಲ್ಲಿ ಒಂದೂ ಸೋತಿಲ್ಲ. ಆದರೂ ಕ್ವಾರ್ಟರ್‌ಫೈನಲ್ ಪ್ರವೇಶದ ಹಾದಿ ಡೋಲಾಯಮಾನವಾಗಿದೆ.

ಗುಂಪಿನ ಕೊನೆಯ ಪಂದ್ಯವು ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. ಮಯಂಕ್ ಅಗರವಾಲ್ ಬಳಗವು ಅಂಕಪಟ್ಟಿಯ ಅಗ್ರಸ್ಥಾನದಲ್ಲಿರುವ ಹರಿಯಾಣವನ್ನು ಎದುರಿಸಲಿದೆ. ಈ ಪಂದ್ಯವು ಆತಿಥೇಯರಿಗೆ ನಿರ್ಣಾಯಕ. ಇದರಲ್ಲಿ ಸೋತರೆ ನಾಕೌಟ್ ಹಂತದ ಬಾಗಿಲು ಮುಚ್ಚಲಿದೆ. ಈ ಪಂದ್ಯದಲ್ಲಿ ಜಯಿಸುವುದರ ಜೊತೆಗೆ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕೇರಳವು ಬಿಹಾರದ ವಿರುದ್ಧ ಸೋಲಬೇಕು ಅಥವಾ ಡ್ರಾ ಆಗಬೇಕು ಎಂದು ಪ್ರಾರ್ಥಿಸುವ ಅನಿವಾರ್ಯತೆ ಇದೆ.

ಕರ್ನಾಟಕ 19 (ಎರಡು ಪಂದ್ಯ ಜಯ, ನಾಲ್ಕು ಡ್ರಾ), ಹರಿಯಾಣ 26 ಮತ್ತು ಕೇರಳ 21 ಅಂಕ ಗಳಿಸಿವೆ. ಗುಂಪಿನಲ್ಲಿ ದುರ್ಬಲ ತಂಡವಾಗಿರುವ ಬಿಹಾರವನ್ನ ಕೇರಳವು ತನ್ನ ತವರು (ತುಂಭಾ) ಕ್ರೀಡಾಂಗಣದಲ್ಲಿಯೇ ಎದುರಿಸಲಿದೆ. ಅದರಿಂದಾಗಿ ಕೇರಳ ಜಯಿಸುವ ನೆಚ್ಚಿನ ತಂಡವಾಗಿದೆ. ಬೋನಸ್ ಅಂಕ ಪಡೆದರೂ ಅಚ್ಚರಿಯೇನಿಲ್ಲ. ಆದರೆ ಒಂದೊಮ್ಮೆ ಡ್ರಾ ಆದರೆ ಹೆಚ್ಚೆಂದರೆ 3 ಅಂಕ ಪಡೆಯಬಹುದಷ್ಟೆ. ಆ ಸಂದರ್ಭದಲ್ಲಿ ಇಲ್ಲಿ ಕರ್ನಾಟಕವು ಗೆದ್ದು ಸಂಪೂರ್ಣ ಅಂಕ (7) ಗಳಿಸಿದ್ದರೆ ಕ್ವಾರ್ಟರ್‌ಫೈನಲ್ ಸ್ಥಾನ ಖಚಿತವಾಗಲಿದೆ. ಆದರೆ ಕರ್ನಾಟಕವು ಹರಿಯಾಣ ಎದುರು ಪಂದ್ಯ ಡ್ರಾ ಮಾಡಿಕೊಂಡರೂ ಪ್ರಯೋಜನವಿಲ್ಲ. ಕಳೆದ ಆರು ಪಂದ್ಯಗಳಲ್ಲಿ ಕರ್ನಾಟಕವು ಎರಡರಲ್ಲಿ ಜಯಿಸಿದೆ. ಉಳಿದದ್ದು ಡ್ರಾ ಆಗಿದೆ. ಅದರಲ್ಲೂ ಎರಡು ಪಂದ್ಯಗಳು ಮಳೆಯಿಂದಾಗಿ ಪೂರ್ಣಗೊಂಡಿರಲಿಲ್ಲ.

ಸಂಕ್ರಮಣ ಘಟ್ಟ: ಎಂಟರ ಘಟ್ಟಕ್ಕೆ ಅರ್ಹತೆ ಸಿಗುವುದೋ ಇಲ್ಲವೋ ಎಂಬ ಕುತೂಹಲದ ಆಚೆ ಈ ಪಂದ್ಯವು ಸಂಕ್ರಮಣ ಹಂತದಲ್ಲಿರುವ ಕರ್ನಾಟಕ ತಂಡ ತನ್ನ ನವತಾರೆಗಳನ್ನು ಕಂಡುಕೊಳ್ಳುವ ಹಾದಿಯಲ್ಲಿದೆ.

ಈ ಋತುವಿನಲ್ಲಿ ಪದಾರ್ಪಣೆ ಮಾಡಿರುವ ಬ್ಯಾಟರ್ ಸ್ಮರಣ್ ರವಿಚಂದ್ರನ್, ವಿಕೆಟ್‌ಕೀಪರ್ ಬ್ಯಾಟರ್ ಕೃಷ್ಣನ್ ಶ್ರೀಜಿತ್, ಎಡಗೈ ವೇಗಿ ಅಭಿಷೇಕ್ ಶೆಟ್ಟಿ, ಬೌಲಿಂಗ್ ಆಲ್‌ರೌಂಡರ್ ಯಶೋವರ್ಧನ್ ಪರಂತಾಪ್ ಅವರು ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಅವರಲ್ಲದೇ ಅನುಭವಿಗಳಾದ ಮಯಂಕ್ ಅಗರವಾಲ್, ಮಧ್ಯಮವೇಗಿ ವಿ.ಕೌಶಿಕ್, ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರೂ ಉತ್ತಮ ಲಯದಲ್ಲಿದ್ದಾರೆ.



ಕರ್ನಾಟಕ ತಂಡದ ನಾಯಕ ಮಯಂಕ್ ಅಗರ್‌ವಾಲ್

ಇವರೆಲ್ಲರೊಂದಿಗೆ ಈಗ ಕೆ.ಎಲ್. ರಾಹುಲ್ ಕೂಡ ಸೇರಿಕೊಂಡಿದ್ದಾರೆ. ಗಾಯದಿಂದ ಚೇತರಿಸಿಕೊಂಡಿರುವ ವೇಗಿ ವಿದ್ವತ್ ಕಾವೇರಪ್ಪ ಕೂಡ ತಂಡಕ್ಕೆ ಮರಳಿದ್ದಾರೆ. ಇದರಿಂದಾಗಿ ಬ್ಯಾಟರ್ ಕೆ.ವಿ. ಅನೀಶ್ ಮತ್ತು ಯಶೋವರ್ಧನ್ ಅವರಿಗೆ ವಿಶ್ರಾಂತಿ ನೀಡಿ ರಾಹುಲ್ ಮತ್ತು ವಿದ್ವತ್ ಅವರಿಗೆ ಅವಕಾಶ ನೀಡುವ ಸಾಧ್ಯತೆ ದಟ್ಟವಾಗಿದೆ. ಇನ್ನುಳಿದಂತೆ ದೇವದತ್ತ ಪಡಿಕ್ಕಲ್ ಅವರು ಆಟಕ್ಕೆ ಕುದುರಿಕೊಂಡರೆ ಮಧ್ಯಮಕ್ರಮಾಂಕ ಬಲಿಷ್ಠವಾಗಲಿದೆ.

ಕರ್ನಾಟಕದ ಅಭಿಮಾನಿಗಳು ಬಹುಕಾಲದ ನಂತರ 'ಆಪ್ತಮಿತ್ರ' ರಾದ ಮಯಂಕ್ ಮತ್ತು ರಾಹುಲ್ ಇನಿಂಗ್ಸ್ ಆರಂಭಿಸುವುದನ್ನು ನೋಡುವ ಅವಕಾಶ ಸಿಗುವುದು ಬಹುತೇಕ ಖಚಿತವಾಗಿದೆ. ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ರಾಹುಲ್ 10 ಇನಿಂಗ್ಸ್‌ಗಳಿಂದ 276 ರನ್ ಗಳಿಸಿದ್ದರು. ಅದರಲ್ಲಿ ಎರಡು ಅರ್ಧಶತಕಗಳಿದ್ದವು. ಅವರು ಅಲ್ಲಿಯ ಲಯವನ್ನೇ ಇಲ್ಲಿ ಮುಂದುವರಿಸುವರೇ ಎಂಬುದೇ ಈಗ ಕುತೂಹಲದ ವಿಷಯ. ರಾಷ್ಟ್ರೀಯ ತಂಡದ ಆಟಗಾರರು ದೇಶಿ ಟೂರ್ನಿಯಲ್ಲಿ ಆಡುವುದನ್ನು ಕಡ್ಡಾಯ ಮಾಡಿದ್ದರಿಂದ ರಾಹುಲ್ ಈ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ. ಹಳೆ ಬೇರು ಮತ್ತು ಹೊಸ ಚಿಗುರು ಮೇಳೈಸುವ ರೀತಿಯಲ್ಲಿ ಅನುಭವಿ ಹಾಗೂ ನವ ಪ್ರತಿಭಾನ್ವಿತ ಆಟಗಾರರು ಒಂದಾಗಿ ಆಡಿದರೆ ಗೆಲುವು ಅಸಾಧ್ಯವೇನಲ್ಲ. ಅಲ್ಲದೇ ಕರ್ನಾಟಕದ ಕ್ರಿಕೆಟ್‌ಗೆ ಚೆಂದದ ಭವಿಷ್ಯ ಚಿಗುರೊಡೆಯಬಹುದು.

ಹರಿಯಾಣ ತಂಡದಲ್ಲಿ ಮಿನುಗುವ ತಾರೆಗಳಿಲ್ಲ ನಿಜ. ಅಂಕಿತ್ ಕುಮಾರ್ ನಾಯಕತ್ವದ ಬಳಗದಲ್ಲಿ ಆಲ್‌ರೌಂಡರ್ ಜಯಂತ್ ಯಾದವ್ ಅವರು ಭಾರತ ತಂಡದಲ್ಲಿ ಆಡಿರುವ ಅನುಭವಿಯಾಗಿದ್ದಾರೆ. ತಂಡವು ಆರು ಪಂದ್ಯಗಳ ಪೈಕಿ 3ರಲ್ಲಿ ಗೆದ್ದು, ಉಳಿದಿದ್ದರಲ್ಲಿ ಡ್ರಾ ಮಾಡಿಕೊಂಡಿದೆ. ಬ್ಯಾಟರ್ ಅಂಕಿತ್ ಕುಮಾರ್, ಲಕ್ಷ್ಯ ದಯಾಲ್ ಅವರು ಉತ್ತಮ ಲಯದಲ್ಲಿದ್ದಾರೆ. ಬೌಲಿಂಗ್‌ನಲ್ಲಿ ಇದುವರೆಗೆ ಅನ್ಶುಲ್ ಕಾಂಭೋಜ್ ಅವರು ಉತ್ತಮ ಸಾಧನೆ ಮಾಡಿದ್ದಾರೆ. ಅವರು ಕರ್ನಾಟಕದ ಬ್ಯಾಟರ್‌ಗಳಿಗೂ ಸವಾಲೊಡ್ಡಬಲ್ಲರು.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಜಿಯೊ ಸಿನಿಮಾ

ರಣಜಿ ಟ್ರೋಫಿ ಎಲೀಟ್ ಸಿ ಗುಂಪು

ತಂಡ	ಪಂದ್ಯ	ಜಯ	ಸೋಲು	ಡ್ರಾ	ಅಂಕ
ಹರಿಯಾಣ	6	3	0	3	26
ಕೇರಳ	6	2	0	4	21
ಕರ್ನಾಟಕ	6	2	0	4	19
ಬಂಗಾಳ	6	1	1	3	14
ಉತ್ತರಪ್ರದೇಶ	6	1	1	4	13
ಪಂಜಾಬ್	6	1	3	2	11
ಮಧ್ಯಪ್ರದೇಶ	6	1	1	4	10
ಬಿಹಾರ	6	0	5	0	1

* ಬಂಗಾಳ ಮತ್ತು ಬಿಹಾರದ ಒಂದು ಪಂದ್ಯ ರದ್ದಾಗಿದೆ

ವಿರಾಟ್ ಕೊಹ್ಲಿ ಪ್ರಮುಖ ಆಕರ್ಷಣೆ



ನವದೆಹಲಿ (ಪಿಟಿಐ): ಭಾರತ ತಂಡದ ತಾರಾ ಬ್ಯಾಟರ್ ವಿರಾಟ್ ಕೊಹ್ಲಿ ಅವರು ದೀರ್ಘ ಕಾಲದ ನಂತರ ರಣಜಿ ಟ್ರೋಫಿಯಲ್ಲಿ ಕಣಕ್ಕಿಳಿಯುತ್ತಿರುವುದು ಟೂರ್ನಿಯ ಹೆಚ್ಚಿನ ಆಕರ್ಷಣೆ ಮೂಡಿಸಿದೆ. ಎಲ್ಲದ್ದಕ್ಕಿಂತ ಮುಖ್ಯವಾಗಿ ದೆಹಲಿ ತಂಡದ ನೈತಿಕ ಸ್ಥೈರ್ಯವನ್ನು ವೃದ್ಧಿಸಿದೆ. ರೈಲ್ವೇಸ್ ವಿರುದ್ಧ ಗುರುವಾರ ಇಲ್ಲಿ ನಡೆಯುವ 'ಡಿ' ಗುಂಪಿನ ಪಂದ್ಯದಲ್ಲಿ ಅವರು ಆಡಲಿದ್ದಾರೆ.

ದೆಹಲಿ (6 ಪಂದ್ಯಗಳಿಂದ 14) ನಾಕೌಟ್ ಹಂತಕ್ಕೇರುವುದು ಕಷ್ಟ. ಗುಂಪಿನಲ್ಲಿ ನಾಲ್ಕು ತಂಡಗಳು (ತಮಿಳುನಾಡು, ಚಂಡಿಗಢ, ಸೌರಾಷ್ಟ್ರ ಮತ್ತು ರೈಲ್ವೇಸ್) ಪಾಯಿಂಟ್ಸ್ ಗಳಿಕೆಯಲ್ಲಿ ದೆಹಲಿಗಿಂತ ಮೇಲೆ ಇವೆ.

ಸಾವಿರಾರು ಪ್ರೇಕ್ಷಕರು ಪಂದ್ಯಕ್ಕೆ ಬರುವ ನಿರೀಕ್ಷೆಯಿದ್ದು, ಫಲಿತಾಂಶದ ಬಗ್ಗೆ ಅವರು ತಲೆಕೆಡಿಸಿಕೊಳ್ಳುವ ಸಾಧ್ಯತೆಯಿಲ್ಲ. ವಿರಾಟ್ ಕೊಹ್ಲಿ ಬ್ಯಾಟಿಂಗ್ ನೋಡುವುದು ಅವರ ಪಾಲಿಗೆ ಮುಖ್ಯವಾಗಿದೆ.

ಫೈನಲ್‌ಗೆ ರಮಿತಾ

ಡೆಹ್ರಾಡೂನ್ (ಪಿಟಿಐ): ಏಷ್ಯನ್ ಗೇಮ್ಸ್ ಕಂಚಿನ ಪದಕ ಗೆದ್ದಿರುವ ಶೂಟರ್ ರಮಿತಾ ಜಿಂದಾಲ್ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕೀಡಾ ಕೂಟದ ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಅಮೋಘ ಗುರಿಯೊಂದಿಗೆ ಫೈನಲ್‌ಗೆ ಅರ್ಹತೆ ಪಡೆದರು.

ರಮಿತಾ ಅವರೊಂದಿಗೆ ಕರ್ನಾಟಕದ ಮೇಘನಾ ಸಜ್ಜಾನಾರ್ ಪ್ರಶಸ್ತಿ ಸುತ್ತಿಗೆ ಮುನ್ನಡೆದರು.

ಕರ್ನಾಟಕದ ಈಜುಪಟುಗಳ ಪಾರಮ್ಯ

38ನೇ ರಾಷ್ಟ್ರೀಯ ಕ್ರೀಡಾಕೂಟ: ಧಿನಿಧಿಗೆ ಮೂರು ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಈಜುಪಟುಗಳು ಉತ್ತರಾಖಂಡದಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದ ಆರಂಭದ ದಿನವಾದ ಬುಧವಾರ ಈಜು ಸ್ಪರ್ಧೆಯಲ್ಲಿ ಪ್ರಾಬಲ್ಯ ಮೆರೆದರು. ಒಲಿಂಪಿಯನ್ ಧಿನಿಧಿ ದೇಸಿಂಗು ಅವರು ಕೂಟ ದಾಖಲೆಯೊಂದಿಗೆ ಮೂರು ಚಿನ್ನ ಗೆದ್ದರು.

ಐದು ಚಿನ್ನ ಮತ್ತು ಎರಡು ಬೆಳ್ಳಿ ಸೇರಿ ಒಟ್ಟು ಏಳು ಪದಕಗಳೊಂದಿಗೆ ಕರ್ನಾಟಕದ ತಂಡವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನದೊಂದಿಗೆ ದಿನದ ಅಭಿಯಾನ ಮುಗಿಸಿತು.

14 ವರ್ಷ ವಯಸ್ಸಿನ ಧಿನಿಧಿ ಮಹಿಳೆಯರ 200 ಮೀಟರ್ ಫ್ರೀಸ್ಟೈಲ್ ಮತ್ತು 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಚಿನ್ನಕ್ಕೆ ಕೊರಳೊಡ್ಡಿದರು. ಅದರ ಬೆನ್ನಲ್ಲೇ 4x100 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಧಿನಿಧಿ ಅವರನ್ನು ಒಳಗೊಂಡ ತಂಡವು ಚಾಂಪಿಯನ್ ಆಯಿತು.

200 ಮೀಟರ್ ಫ್ರೀಸ್ಟೈಲ್‌ನಲ್ಲಿ ಧಿನಿಧಿ 2 ನಿಮಿಷ 03.24 ಸೆಕೆಂಡ್‌ನಲ್ಲಿ ಗುರಿ ತಲುಪಿ, ಕೂಟ ದಾಖಲೆ ನಿರ್ಮಿಸಿದರು. ಈ ಮೂಲಕ 2022ರ ಆವೃತ್ತಿಯಲ್ಲಿ ಹಾಶಿಕಾ ರಾಮಚಂದ್ರ (2 ನಿ. 07.08 ಸೆ) ನಿರ್ಮಿಸಿದ್ದ ದಾಖಲೆಯನ್ನು ಮುಳುಗಿಸಿದರು.

ಪುರುಷರ ವಿಭಾಗದ 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ರಾಜ್ಯದ ಈಜುಪಟುಗಳು ನಿರಾಸೆ ಮೂಡಿಸಿದರು. ಆದರೆ, 200 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕದ ಮತ್ತೊಬ್ಬ ಒಲಿಂಪಿಯನ್ ಶ್ರೀಹರಿ ನಟರಾಜ್ (1ನಿ.50.57ಸೆ) ಚಿನ್ನ ಗೆದ್ದರು. ರಾಜ್ಯದ ಇನ್ನೊಬ್ಬ ಸ್ಪರ್ಧಿ ಅನೀಶ್ ಎಸ್.ಗೌಡ (1ನಿ.52.42ಸೆ) ಬೆಳ್ಳಿ ಜಯಿಸಿದರು.




ಪುರುಷರ 4x100 ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಕರ್ನಾಟಕ ತಂಡ

ಪುರುಷರ 4x100 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕರ್ನಾಟಕ ತಂಡವು ಕೂಟ ದಾಖಲೆ ನಿರ್ಮಿಸಿತು. ಆಕಾಶ್ ಮಣಿ, ಚಿಂತನ್ ಎಸ್.ಶೆಟ್ಟಿ, ಅನೀಶ್ ಎಸ್.ಗೌಡ ಮತ್ತು ನಟರಾಜ್ ಅವರನ್ನು ಒಳಗೊಂಡ ತಂಡ 2 ನಿಮಿಷ 26.26 ಸೆಕೆಂಡ್‌ನಲ್ಲಿ ಗುರಿ ತಲುಪಿ, ಕಳೆದ ಆವೃತ್ತಿಯಲ್ಲಿ ತಮ್ಮದೇ ತಂಡ ನಿರ್ಮಿಸಿದ್ದ ದಾಖಲೆಯನ್ನು ಸುಧಾರಿಸಿಕೊಂಡಿತು.

ಫಲಿತಾಂಶ: ಪುರುಷರು: 200 ಮೀ. ಫ್ರೀಸ್ಟೈಲ್: ಶ್ರೀಹರಿ ನಟರಾಜ್ (ಕರ್ನಾಟಕ, ಕಾಲ 1ನಿ. 50.57ಸೆ)–1; ಅನೀಶ್ ಎಸ್. ಗೌಡ (ಕರ್ನಾಟಕ)–2; ಸಜನ್ ಪ್ರಕಾಶ್ (ಕೇರಳ)–3. **4x100 ಮೀ. ಫ್ರೀಸ್ಟೈಲ್ ರಿಲೆ:** ಕರ್ನಾಟಕ (ಆಕಾಶ್ ಮಣಿ, ಚಿಂತನ್ ಎಸ್.ಶೆಟ್ಟಿ, ಅನೀಶ್ ಎಸ್.ಗೌಡ, ಶ್ರೀಹರಿ ನಟರಾಜ್; ಕಾಲ 2ನಿ.26.26ಸೆ)–1. ತಮಿಳುನಾಡು–2, ಗುಜರಾತ್–3

ಮಹಿಳೆಯರು: 200 ಮೀ. ಫ್ರೀಸ್ಟೈಲ್: ಧಿನಿಧಿ ದೇಸಿಂಗು (ಕರ್ನಾಟಕ, ಕಾಲ: 2ನಿ.03.24ಸೆ)–1, ಭವ್ಯಾ ಸಚ್‌ದೇವ (ದೆಹಲಿ)–2, ಅದಿತಿ ಸತೀಶ್ ಹೆಗ್ಡೆ (ಮಹಾರಾಷ್ಟ್ರ)–3. **100 ಮೀ. ಬಟರ್‌ಫ್ಲೈ:** ಧಿನಿಧಿ ದೇಸಿಂಗು (ಕರ್ನಾಟಕ; ಕಾಲ: 1ನಿ.03.62ಸೆ)–1, ನೈಶಾ ಶೆಟ್ಟಿ (ಕರ್ನಾಟಕ)–2, ಸೃಷ್ಟಿ ಉಪಾಧ್ಯ (ಒಡಿಶಾ)–3. **4x100 ಮೀ. ಫ್ರೀಸ್ಟೈಲ್ ರಿಲೆ:** ಕರ್ನಾಟಕ (ನೀನಾ ವೆಂಕಟೇಶ್, ಶಾಲಿನಿ ಆರ್.ದೀಕ್ಷಿತ್, ಲತೀಶಾ ಮಂದಾನ, ಧಿನಿಧಿ ದೇಸಿಂಗು, ಕಾಲ: 4ನಿ.01.58ಸೆ)–1, ಮಹಾರಾಷ್ಟ್ರ–2, ತಮಿಳುನಾಡು–3.



ಚಿನ್ನದ ಪದಕದೊಂದಿಗೆ ಧಿನಿಧಿ ದೇಸಿಂಗು

ರಾಷ್ಟ್ರೀಯ ಕ್ರೀಡಾಕೂಟ: ಪದಕ ಪಟ್ಟಿ

ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಕರ್ನಾಟಕ	5	2	0	7
ತಮಿಳುನಾಡು	1	1	1	3
ಮಹಾರಾಷ್ಟ್ರ	0	2	1	3
ದೆಹಲಿ	0	1	0	1
ಕೇರಳ	0	0	2	2

ಟೆಸ್ಟ್‌ನಲ್ಲಿ 10 ಸಾವಿರ ರನ್ ದಾಟಿದ ಸ್ಟೀವ್ ಸ್ಮಿತ್

ಖ್ವಾಜಾ, ಸ್ಮಿತ್ ಅಜೇಯ ಶತಕ

ಗಾಲೆ (ಶ್ರೀಲಂಕಾ), (ಪಿಟಿಐ): ಮೊದಲ ಎಸೆತದಲ್ಲೇ ಒಂದು ರನ್ ಹೊಡೆದು ಟೆಸ್ಟ್‌ನಲ್ಲಿ 10 ಸಾವಿರ ರನ್‌ಗಳ ಮೈಲಿಗಲ್ಲು ದಾಟಿದ ಸ್ಟೀವ್ ಸ್ಮಿತ್ ನಂತರ ಶತಕವನ್ನೂ (ಔಟಾಗದೇ 104) ಪೋಣಿಸಿದರು. ಶ್ರೀಲಂಕಾ ಧವಾರ ಆರಂಭವಾದ ಮೊದಲ ಟೆಸ್ಟ್ ಕ್ರಿಕೆಟ್‌ನಲ್ಲಿ ಆರಂಭ ಆಟಗಾರ ಉಸ್ಮಾನ್ ಖ್ವಾಜಾ (ಔಟಾಗದೇ 147) ಕೂಡ ಶತಕ ಬಾರಿಸಿದರು.

ದಿನದಾಟ ಮುಗಿದಾಗ ಆಸ್ಟ್ರೇಲಿಯಾ 81.1 ಓವರುಗಳಲ್ಲಿ 2 ವಿಕೆಟ್‌ಗೆ 330 ರನ್ ಗಳಿಸಿ ಸುಭದ್ರ ಸ್ಥಿತಿಯಲ್ಲಿದೆ. 8.5 ಓವರುಗಳು ಬಾಕಿಯಿರುವಾಗ ಮಳೆಯಿಂದಾಗಿ ಆಟ ಬೇಗ ಸ್ಥಗಿತಗೊಂಡಿತು. ಎರಡು ಟೆಸ್ಟ್‌ಗಳ ಸರಣಿಯ ಮೊದಲ ಪಂದ್ಯದಲ್ಲಿ ಟಾಸ್ ಗೆದ್ದ ಪ್ರವಾಸಿ ತಂಡಕ್ಕೆ ಸ್ಮಿತ್ ಮತ್ತು ಟ್ರಾವಿಸ್ ಹೆಡ್ 92 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದ್ದರು. ಹೆಡ್, ಸ್ಯಾಮ್ ಕೊನ್‌ಸ್ಟಾಸ್ ಬದಲು ಅವಕಾಶ ಪಡೆದಿದ್ದರು.

ಎಡಗೈ ಆಟಗಾರ ಖ್ವಾಜಾ ಮತ್ತು ಸ್ಮಿತ್ ನಂತರ ಮುರಿಯದ ಮೂರನೇ ವಿಕೆಟ್‌ಗೆ 195 ರನ್ ಸೇರಿಸಿದ್ದಾರೆ. 38 ವರ್ಷ ವಯಸ್ಸಿನ ಖ್ವಾಜಾ (210 ಎಸೆತ) ಮತ್ತು ಸ್ಮಿತ್ (188 ಎಸೆತ) ತಲಾ 10 ಬೌಂಡರಿ, 1 ಸಿಕ್ಸರ್ ಬಾರಿಸಿದ್ದಾರೆ. ಖ್ವಾಜಾಗೆ ಇದು 16ನೇ ಶತಕ.

ಇದು ಸ್ಮಿತ್‌ಗೆ ನಾಲ್ಕು ಪಂದ್ಯಗಳಲ್ಲಿ ಮೂರನೇ ಶತಕ. ಸ್ಮಿತ್ ಈ ಪಂದ್ಯಕ್ಕೆ ಮೊದಲು 9999 ರನ್ ಗಳಿಸಿದ್ದರು. ಇನಿಂಗ್ಸ್‌ನ ಆರಂಭದಲ್ಲಿ ಸ್ಪಿನ್ನರ್ ಪ್ರಭಾತ್ ಜಯಸೂರ್ಯ ತಮ್ಮದೇ ಬೌಲಿಂಗ್‌ನಲ್ಲಿ ಸ್ಮಿತ್ ಅವರಿಂದ ಬಂದ ಸ್ವಲ್ಪ ಕಷ್ಟದ ಕ್ಯಾಚನ್ನು ಬಿಟ್ಟಿದ್ದರು.



ಶತಕ ದಾಖಲಿಸಿದ ಸಂಭ್ರಮದಲ್ಲಿ ಉಸ್ಮಾನ್ ಖ್ವಾಜಾ. ಸ್ಟೀವ್ ಸ್ಮಿತ್ ಚಿತ್ರದಲ್ಲಿದ್ದಾರೆ –ಎಎಫ್‌ಪಿ ಚಿತ್ರ

ಸ್ಕೋರುಗಳು: ಆಸ್ಟ್ರೇಲಿಯಾ: 81.1 ಓವರುಗಳಲ್ಲಿ 2 ವಿಕೆಟ್‌ಗೆ 330 (ಉಸ್ಮಾನ್ ಖ್ವಾಜಾ ಔಟಾಗದೇ 147, ಟ್ರಾವಿಸ್ ಹೆಡ್ 57, ಸ್ಟೀವ್ ಸ್ಮಿತ್ ಔಟಾಗದೇ 104)

ಐಸಿಸಿ ಟಿ20 ರ‍್ಯಾಂಕಿಂಗ್: ಎರಡನೇ ಸ್ಥಾನಕ್ಕೇರಿದ ತಿಲಕ್

ದುಬೈ (ಪಿಟಿಐ): ಪ್ರತಿಭಾನ್ವಿತ ಆಟಗಾರ ತಿಲಕ್ ವರ್ಮಾ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟಿ20 ರ‍್ಯಾಂಕಿಂಗ್ ಪಟ್ಟಿಯಲ್ಲಿ ಒಂದು ಸ್ಥಾನ ಬಡ್ತಿ ಪಡೆದು ಎರಡನೇ ಸ್ಥಾನದಲ್ಲಿದ್ದಾರೆ. 'ಮಿಸ್ಟರಿ' ಸ್ಪಿನ್ನರ್ ವರುಣ್ ಚಕ್ರವರ್ತಿ 25 ಸ್ಥಾನಗಳಷ್ಟು ಬಡ್ತಿ ಪಡೆದು ಮೊದಲ ಸಲ ಅಗ್ರ ಐದರಲ್ಲಿ ಸ್ಥಾನ ಪಡೆದಿದ್ದಾರೆ.

ಆಸ್ಟ್ರೇಲಿಯಾ ಟ್ರಾವಿಸ್ ಹೆಡ್ (855 ರೇಟಿಂಗ್ ಪಾಯಿಂಟ್ಸ್) ಅವರು ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಎಡಗೈ ಆಟಗಾರ ವರ್ಮಾ (832) ಅವರು 23 ಪಾಯಿಂಟ್ಸ್ ಹಿಂದೆ ಇದ್ದಾರೆ. ಇಂಗ್ಲೆಂಡ್ ವಿರುದ್ಧ ಹಾಲಿ ಸರಣಿಯಲ್ಲಿ ಅವರು ಅಜೇಯ 10, ಅಜೇಯ 72 ಮತ್ತು 18 ರನ್ ಗಳಿಸಿದ್ದು ಉತ್ತಮ ಲಯದಲ್ಲಿದ್ದಾರೆ.

ಸರಣಿಯಲ್ಲಿ ಇನ್ನೂ ಎರಡು ಪಂದ್ಯಗಳು ಉಳಿದಿದ್ದು ವರ್ಮಾ ಅವರಿಗೆ ಹೆಡ್ ಅವರನ್ನು ಹಿಂದೆಹಾಕಿ ಅಗ್ರಸ್ಥಾನಕ್ಕೇರಿದ ಅತಿ ಕಿರಿಯ ಬ್ಯಾಟರ್ ಎಂಬ ದಾಖಲೆಗೆ ಪಾತ್ರರಾಗುವ ಅವಕಾಶ ಇದೆ. 23 ವರ್ಷ 105 ದಿನಗಳಿದ್ದಾಗ ಅಗ್ರಸ್ಥಾನಕ್ಕೇರಿದ ಬಾಬರ್ ಆಜಂ ಅವರು ಈ ದಾಖಲೆ ಹೊಂದಿದ್ದಾರೆ.



ತಿಲಕ್ ವರ್ಮಾ

ಚಕ್ರವರ್ತಿಗೆ ಬಡ್ತಿ: ಮೂರನೇ ಪಂದ್ಯದಲ್ಲಿ 24 ರನ್ನಿಗೆ 5 ವಿಕೆಟ್ ಪಡೆದು ಪಂದ್ಯದ ಆಟಗಾರನಾಗಿದ್ದ ವರುಣ್ ಚಕ್ರವರ್ತಿ (679 ಪಾಯಿಂಟ್ಸ್) ಬೌಲರ್‌ಗಳ ವಿಭಾಗದಲ್ಲಿ ಐದನೇ ಸ್ಥಾನಕ್ಕೆ ಜಿಗಿದಿದ್ದಾರೆ. ಅಕ್ಷರ್ ಪಟೇಲ್ ಅವರೂ ಅಗ್ರ 10ರ ಬಳಿ ಧಾವಿಸಿದ್ದು 11ನೇ ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್‌ನ ಸ್ಪಿನ್ನರ್ ಅದಿಲ್ ರಶೀದ್ ಅವರು ಅಗ್ರಸ್ಥಾನ ಮರಳಿ ಪಡೆದುಕೊಂಡಿದ್ದಾರೆ.

ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ಜಸ್‌ಪ್ರೀತ್ ಬೂಮ್ರಾ ಅಗ್ರಸ್ಥಾನದಲ್ಲೇ ಉಳಿದಿದ್ದಾರೆ.

ಗೋಕುಲಂ ಕೇರಳಕ್ಕೆ ಮಣಿದ ಬೆಂಗಳೂರು

ಕೋಯಿಕ್ಕೋಡ್ (ಪಿಟಿಐ): ಗೋಕುಲಂ ಕೇರಳ ಎಫ್‌ಸಿ ತಂಡ ಐ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಬುಧವಾರ 2–0 ಗೋಲುಗಳಿಂದ ಎಸ್‌ಸಿ ಬೆಂಗಳೂರು ತಂಡವನ್ನು ಸೋಲಿಸಿ, ತವರಿನಲ್ಲಿ ಎರಡನೇ ಜಯ ದಾಖಲಿಸಿತು.

ಇಗ್ನೇಸಿಯೊ ಡಿ ಲೊಯೋಲಾ ಅಬೆಲೆಡೊ ಅವರು ಎರಡೂ ಗೋಲುಗಳನ್ನು ಕ್ರಮವಾಗಿ 8 ಮತ್ತು 90ನೇ ನಿಮಿಷ ಗಳಿಸಿದರು. ಈ ಗೆಲುವಿನಿಂದ ಗೋಕುಲಂ ಎಫ್‌ಸಿ 11ಪಂದ್ಯಗಳಿಂದ 19 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನಕ್ಕೇರಿದೆ. ಬೆಂಗಳೂರು ತಂಡ ತಳದಲ್ಲಿದೆ.

ವನಿತೆಯರ ತಂಡಕ್ಕೆ ಹಾಲ್ನೆಸ್ ಕೋಚ್



ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಹಾಗೂ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ವಿಜೇತರಾದ ಎಲೇನ್ ಥಾಂಪ್ಸನ್ ಹಾಗೂ ನೆಸ್ಟಾ ಕಾರ್ಟರ್ ಅವರ ತರಬೇತುದಾರ ಜೆರ್ರಿ ಲೀ ಹಾಲ್ನೆಸ್ ಅವರು ಭಾರತದ 400 ಮೀಟರ್ ವನಿತೆಯರ ತಂಡಕ್ಕೆ ಕೋಚ್ ಆಗಿ ನೇಮಕಗೊಂಡಿದ್ದಾರೆ.

'ತಿರುವನಂತಪುರದ ನ್ಯಾಷನಲ್ ಸೆಂಟರ್ ಆಫ್ ಎಕ್ಸಲೆನ್ಸ್ ಕೇಂದ್ರದಲ್ಲಿ ತರಬೇತಿ ಪಡೆಯಲಿರುವ 400 ಮೀ. ಓಟ ಹಾಗೂ 400 ಮೀ. ಹರ್ಡಲ್ಸ್‌ನ ಮಹಿಳಾ ಅಥ್ಲೀಟ್‌ಗಳಿಗೆ ಅವರು ತರಬೇತಿ ನೀಡಲಿದ್ದಾರೆ' ಎಂದು ಭಾರತ ಅಥ್ಲೆಟಿಕ್ಸ್‌ನ ಮುಖ್ಯ ಕೋಚ್ ರಾಧಾಕೃಷ್ಣನ್ ನಾಯರ್ ತಿಳಿಸಿದ್ದಾರೆ.

65 ವರ್ಷ ವಯಸ್ಸಿನ ಹಾಲ್ನೆಸ್ ಅವರ ಗುತ್ತಿಗೆ ಅವಧಿ 2026ರವರೆಗೆ ಇದೆ. ಹಿಮಾ ದಾಸ್, ಶುಭಾ ವೆಂಕಟೇಶನ್ ರುಪಾಲ್, ಕಿರಣ್ ಪಹಲ್ ಹಾಗೂ ವಿದ್ಯಾ ರಾಮರಾಜ್ ಅವರಂಥ ಅಥ್ಲೀಟ್‌ಗಳು ಅವರಿಂದ ತರಬೇತಿ ಪಡೆಯಲಿದ್ದಾರೆ. ಭಾರತದ ವನಿತೆಯರ ತಂಡಕ್ಕೆ ಈವರೆಗೂ ಸ್ತಾಶುಕ್ ವಲೇರಿ ತರಬೇತುದಾರರಾಗಿದ್ದರು.

ಅಥ್ಲೆಟಿಕ್ಸ್‌ನಲ್ಲಿ ಹಾಲ್ನೆಸ್ ಅವರ ಸೇರ್ಪಡೆಯ ಬೆನ್ನಲ್ಲೇ, ಜಾವೆಲಿನ್ ಎಸೆತ ತಂಡಕ್ಕೆ ಕೋಚ್ ಆಗಿ ರಷ್ಯಾದ ಸರ್ಗಿ ಮಕರೋವ್ ಅಲೆಕ್ಸಾಂಡ್ರೊವಿಚ್ ಸೇರಿದ್ದಾರೆ.

ಬ್ಯಾಡ್ಮಿಂಟನ್: ಶ್ರೀಕಾಂತ್ ಮುನ್ನಡೆ

ಪತುಮ್‌ವಾನ್ (ಥಾಯ್ಲೆಂಡ್), (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಅವರು ಥಾಯ್ಲೆಂಡ್ ಮಾಸ್ಟರ್ಸ್ ಬಿಡಬ್ಲ್ಯುಎಫ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದರು.

ಅವರು ಬುಧವಾರ ಮೊದಲ ಸುತ್ತಿನಲ್ಲಿ 21–13, 21–18 ರಿಂದ ಇಸ್ರೇಲ್‌ನ ದಾನಿ ಡುವೊವೆಂಕೊ ಅವರನ್ನು ಮಣಿಸಿದರು. ಮುಂದಿನ ಸುತ್ತಿನಲ್ಲಿ ಹಾಂಗ್‌ಕಾಂಗ್‌ನ ಜೇಸನ್ ಗುನವಾನ್ ಅವರನ್ನು ಎದುರಿಸಲಿದ್ದಾರೆ.

ಶಂಕರ್ ಮುತ್ತುಸ್ವಾಮಿ ಸುಬ್ರಮಣಿಯನ್ 15–21, 21–15, 21–19 ರಿಂದ ಮಲೇಷ್ಯಾದ ಜೂನ್ ವೀ ಚಿಯಾಮ್ ಅವರನ್ನು ಹಿಮ್ಮೆಟ್ಟಿಸಿದರು. ಆದರೆ ಆಯುಷ್ ಶೆಟ್ಟಿ ಮತ್ತು ಮಿಥುನ್ ಮಂಜುನಾಥ್ ಹೊರಬಿದ್ದರು

ಪ್ರೊ ಲೀಗ್ ಹಾಕಿ: ತಂಡಕ್ಕೆ ಮರಳಿದ ಕಟಾರಿಯಾ

ನವದೆಹಲಿ (ಪಿಟಿಐ): ಅನುಭವಿ ಆಟಗಾರ್ತಿ ವಂದನಾ ಕಟಾರಿಯಾ ಅವರು ಎಫ್‌ಐಎಚ್ ಪ್ರೊ ಲೀಗ್ ಭುವನೇಶ್ವರ ಲೆಗ್‌ನಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಮುಂದಿನ ತಿಂಗಳ ಪ್ರೊ ಲೀಗ್‌ಗೆ 24 ಆಟಗಾರ್ತಿಯರ ತಂಡ ಪ್ರಕಟಿಸಲಾಗಿದ್ದು ಸಲಿಮಾ ನಾಯಕಿಯಾಗಿದ್ದಾರೆ.

ಭಾರತ ತಂಡವು ಫೆ. 15 ರಿಂದ ನಡೆಯುವ ಲೀಗ್‌ನಲ್ಲಿ ಇಂಗ್ಲೆಂಡ್, ನೆದರ್ಲೆಂಡ್ಸ್, ಸ್ಪೇನ್ ಮತ್ತು ಜರ್ಮನಿ ವಿರುದ್ಧ ತಲಾ ಎರಡು ಬಾರಿ ಆಡಲಿದೆ. ಕಟಾರಿಕಾ ಜೊತೆಗೆ ಡಿಫೆಂಡರ್‌ಗಳಾದ ನಿಕಿ ಪ್ರಧಾನ್, ಜ್ಯೋತಿ ಚೆಟ್ರಿ, ಮಿಡ್‌ಫೀಲ್ಡರ್ ಬಲಜೀತ್ ಕೌರ್ ಕೂಡ ತಂಡಕ್ಕೆ ಮರಳಿದ್ದಾರೆ.

ತಂಡ ಹೀಗಿದೆ: ಗೋಲ್ ಕೀಪರ್ಸ್: ಸವಿತಾ ಮತ್ತು ಬಿಚು ದೇವಿ ಖರಿಬಮ್; **ಡಿಫೆಂಡರ್ಸ್:** ಸುಶೀಲಾ ಚಾನು, ನಿಕಿ ಪ್ರಧಾನ್, ಉದಿತಾ, ಜ್ಯೋತಿ, ಇಶಿಕಾ ಚೌಧರಿ ಮತ್ತು ಜ್ಯೋತಿ ಚೆಟ್ರಿ; **ಮಿಡ್‌ಫೀಲ್ಡರ್ಸ್:** ವೈಷ್ಣವಿ ವಿಠಲ್ ಫಾಲ್ಕೆ, ನೇಹಾ, ಮನಿಷಾ ಚೌಹಾನ್, ಸಲಿಮಾ ಟೆಟೆ, ಸುನೆಲಿಟಾ ಟೊಪ್ಪೊ, ಲಾಲ್ರೆಮ್‌ಸಿಯಾಮಿ, ಬಲಜೀತ್ ಕೌರ್ ಮತ್ತು ಶರ್ಮಿಳಾ ದೇವಿ. **ಫಾರ್ವರ್ಡ್ಸ್:** ನವನೀತ್ ಕೌರ್, ಮುಮ್ತಾಜ್, ಪ್ರೀತಿ ದುಬೆ, ರುತುಜಾ ದಾದಾಸೊ ಪಿಸಾಳ್, ಬ್ಯೂಟಿ ಡಂಗ್ಡಂಗ್; ಸಂಗೀತಾ ಕುಮಾರಿ, ದೀಪಿಕಾ ಮತ್ತು ವಂದನಾ ಕಟಾರಿಯಾ.

ಒಂಟಿ ಅಗ್ರಸ್ಥಾನಕ್ಕೆ ಗುಕೇಶ್



ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಸ್ವದೇಶದ ಲಿಯಾನ್ ಲ್ಯೂಕ್ ಮೆಂಡೋನ್ಸಾ ಅವರ ರಕ್ಷಣಾವ್ಯೂಹ ಛಿದ್ರಗೊಳಿಸಿದ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನ ನಂತರ ಏಕಾಂಗಿಯಾಗಿ ಅಗ್ರಸ್ಥಾನಕ್ಕೆ ಏರಿದರು.

ಗುಕೇಶ್ ಈ ಗೆಲುವಿನಿಂದ 6.5 ಪಾಯಿಂಟ್ಸ್ ಕಲೆಹಾಕಿದ್ದಾರೆ. ಎಂಟನೇ ಸುತ್ತಿನವರೆಗೆ ಮುನ್ನಡೆ ಹಂಚಿಕೊಂಡಿದ್ದ ಪ್ರಜ್ಞಾನಂದ (5.5) ಅವರು ಡಚ್ ಗ್ರ್ಯಾಂಡ್‌ಮಾಸ್ಟರ್ ಅನಿಶ್ ಗಿರಿ (4.5) ಎದುರು ಸೋಲನುಭವಿಸಿ ಮೊದಲ ಬಾರಿ ಹಿನ್ನಡೆ ಕಂಡರು. ರಷ್ಯಾ ಮೂಲದ ಸ್ಲೊವೇನಿಯನ್ ಗ್ರ್ಯಾಂಡ್‌ಮಾಸ್ಟರ್ ವ್ಲಾದಿಮಿರ್ ಫೆಡೊಸೀವ್ (6) ಅವರು ಭಾರತದ ಇನ್ನೊಬ್ಬ ಆಟಗಾರ ಪೆಂಟ್ಯಾಲ ಹರಿಕೃಷ್ಣ (4) ಅವರನ್ನು ಮಣಿಸಿದರು.

'ಇಂದು ಉತ್ತಮ ಆಟವಾಡಿದ್ದರಿಂದ ಖುಷಿಯಾಗಿದೆ. ಇನ್ನೂ ನಾಲ್ಕು ಸುತ್ತುಗಳು ಆಡಲುಳಿದಿವೆ. ಈಗ ಸ್ಥಾನಗಳ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ. ಆಡುತ್ತಿರುವ ರೀತಿಯಿಂದ ಸಂತಸವಾಗಿದೆ' ಎಂದು ಗುಕೇಶ್ ಅವರು ಪಂದ್ಯದ ನಂತರ ಹೇಳಿದರು.

ಉಜ್ಬೇಕ್ ಆಟಗಾರ ನದಿರ್ಬೆಕ್ ಅಬ್ದುಸತ್ತಾರೋವ್ ಮತ್ತು ಫೆಡೊಸೀವ್ ತಲಾ ಆರು ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನದಲ್ಲಿದ್ದಾರೆ. ಪ್ರಜ್ಞಾನಂದ (5.5) ನಾಲ್ಕನೇ ಸ್ಥಾನದಲ್ಲಿದ್ದಾರೆ. ಇತರ ಪಂದ್ಯಗಳಲ್ಲಿ ಚೀನಾದ ವೀ ಯಿ (5) ಅವರು ಭಾರತದ ಅರ್ಜುನ್ ಇರಿಗೇಶಿ (2.5) ಜೊತೆ, ರಷ್ಯಾ ಮೂಲದ ಸರ್ಬಿಯಾ ಆಟಗಾರ ಅಲೆಕ್ಸಿ ಸರನ (5) ಅವರು ಜರ್ಮನಿಯ ವಿನ್ಸೆಂಟ್ ಕೀಮರ್ (3.5) ಜೊತೆ, ಫ್ಯಾಬಿಯಾನೊ ಕರುವಾನ (5), ಅಬ್ದುಸತ್ತಾರೋವ್ (6) ಜೊತೆ, ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೊರೀಸ್ಟ್ (3.5), ಸ್ವದೇಶದ ಮ್ಯಾಕ್ಸ್ ವಾರ್ಮರ್‌ಮನ್ (3.5) ಜೊತೆ ಡ್ರಾ ಮಾಡಿಕೊಂಡರು.

ಬೆಂಗಳೂರು ನಗರ ವಿವಿ ರನ್ನರ್ ಅಪ್

ಮೈಸೂರು: ಸುಬ್ಬಹರಿಣಿ ಅವರ ಆಲ್‌ರೌಂಡ್ ಪ್ರದರ್ಶನದ (37 ರನ್ ಹಾಗೂ 12ಕ್ಕೆ 3 ವಿಕೆಟ್) ನೆರವಿನಿಂದ ಮದ್ರಾಸ್ ವಿಶ್ವವಿದ್ಯಾಲಯವು ಬುಧವಾರ ಇಲ್ಲಿ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಮಹಿಳಾ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಬೆಂಗಳೂರು ನಗರ ವಿ.ವಿ. ತಂಡವನ್ನು 8 ವಿಕೆಟ್ ಅಂತರದಿಂದ ಮಣಿಸಿ ಪ್ರಶಸ್ತಿ ಎತ್ತಿ ಹಿಡಿಯಿತು.

ಮಾನಸ ಗಂಗೋತ್ರಿಯ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಬೆಳಿಗ್ಗೆ ನಡೆದ ಪಂದ್ಯದಲ್ಲಿ ಬೆಂಗಳೂರು ನಗರ ವಿ.ವಿ. ನಿಗದಿತ 25 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 104 ರನ್ ಕಲೆ ಹಾಕಿತು. ಸೌಮ್ಯಾ ವರ್ಮ 38 ರನ್ ಗಳಿಸಿ ಹೋರಾಟ ಪ್ರದರ್ಶಿಸಿದರು.

ಮದ್ರಾಸ್ ತಂಡವು 16.2 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಎಂ.ಎಸ್. ಐಶ್ವರ್ಯ 42 ರನ್ ಗಳಿಸಿ ಅಜೇಯರಾಗಿ ಉಳಿದರು.


ಪ್ರೊ ಕಬಡ್ಡಿ: ಬೆಂಗಳೂರು ತಂಡಕ್ಕೆ ಮುಖ್ಯ ಕೋಚ್ ಆಗಿ ಮರಳಿ ನೇಮಕ

ರಮೇಶ್ ಹೆಗಲಿಗೆ 'ಬುಲ್ಸ್' ಪಳಗಿಸುವ ಹೊಣೆ

• ಜಿ.ಶಿವಕುಮಾರ

ದಾವಣಗೆರೆ: ಕನ್ನಡಿಗ, ಅರ್ಜುನ ಪ್ರಶಸ್ತಿ ಪುರಸ್ಕೃತ ಬಿ.ಸಿ.ರಮೇಶ್ ಅವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಆಡುವ ಬೆಂಗಳೂರು ಬುಲ್ಸ್ ತಂಡದ ಮುಖ್ಯ ಕೋಚ್ ಆಗಿ ಬುಧವಾರ ನೇಮಕಗೊಂಡಿದ್ದಾರೆ.

2018ರಲ್ಲಿ (6ನೇ ಆವೃತ್ತಿ) ಬುಲ್ಸ್, ಚೊಚ್ಚಲ ಟ್ರೋಫಿ ಗೆದ್ದಿದ್ದಾಗ ರಮೇಶ್ ಕೂಡ ಕೋಚ್ ಆಗಿದ್ದರು. ಏಳನೇ ಆವೃತ್ತಿಯಲ್ಲಿ (2019) ಬೆಂಗಾಲ್ ವಾರಿಯರ್ಸ್ ಹಾಗೂ 10ನೇ ಆವೃತ್ತಿಯಲ್ಲಿ (2023) ಪುಣೇರಿ ಪಲ್ಟನ್‌ನ ಮುಖ್ಯ ಕೋಚ್ ಆಗಿದ್ದ ಇವರು ಈ ತಂಡಗಳ ಪ್ರಶಸ್ತಿಯ ಕನಸು ಸಾಕಾರಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈಗ ಬುಲ್ಸ್ ಬಳಗವನ್ನು ಚಾಂಪಿಯನ್ ಆಗಲು ಪಳಗಿಸುವ ಹೊಣೆ ಹೊತ್ತಿರುವ ಇವರು 'ಪ್ರಜಾವಾಣಿ' ಜೊತೆ ಬುಧವಾರ ಮಾತನಾಡಿದರು.



ಬಿ.ಸಿ.ರಮೇಶ್

• **ಯಾವ ತಂಡದಿಂದ ಹೊರಕಳಿಸಿದ್ದರೊ ಅದೇ ತಂಡಕ್ಕೆ ಮುಖ್ಯ ಕೋಚ್ ಆಗಿದ್ದೀರಿ? ಹೇಗನಿಸುತ್ತಿದೆ?**

ಬುಲ್ಸ್ ಮೊದಲ ಬಾರಿ ಪ್ರಶಸ್ತಿ ಗೆದ್ದಾಗ ನಾನೂ ಮುಖ್ಯ ಕೋಚ್ ಆಗಿದ್ದೆ. ಆದರೆ ಯಶಸ್ಸಿನ ಸಂಪೂರ್ಣ ಶ್ರೇಯ ರಣಧೀರ್ ಸಿಂಗ್ ಅವರಿಗೆ ಸಂದಿತ್ತು. ಬಳಿಕ ಫ್ರಾಂಚೈಸ್‌ನವರು ಏಕಾಏಕಿ ನನ್ನನ್ನು ಕೈಬಿಟ್ಟಿದ್ದರು. ಆಗ ನನ್ನ ವಿರುದ್ಧ ಪಿತೂರಿ ನಡೆದಿತ್ತು. ನನ್ನ ಸಾಮರ್ಥ್ಯ ಏನೆಂಬುದು ಈಗ ಎಲ್ಲರಿಗೂ ಗೊತ್ತಾಗಿದೆ. ನನ್ನ ಕಾರ್ಯವೈಖರಿ ಹಾಗೂ ಬದ್ಧತೆ ನೋಡಿ ಬುಲ್ಸ್ ಫ್ರಾಂಚೈಸಿ ಈ ಜವಾಬ್ದಾರಿ ವಹಿಸಿದೆ. ಇದನ್ನು ಯಶಸ್ವಿಯಾಗಿ ನಿಭಾಯಿಸುವ ವಿಶ್ವಾಸ ಇದೆ.

• **ಹಿಂದಿನ ಆವೃತ್ತಿಯಲ್ಲಿ ಹೀನಾಯ ಪ್ರದರ್ಶನ ತೋರಿದ್ದ ತಂಡವನ್ನು ಸಜ್ಜುಗೊಳಿಸುವ ಹೊಣೆ ಹೆಗಲೇರಿದೆ. ಈ ಕೆಲಸ ಸವಾಲಿನದ್ದಲ್ಲವೇ?**

ಬುಲ್ಸ್, ಕಳೆದ ಆವೃತ್ತಿಯಲ್ಲಿ ಆಡಿದ್ದ 22 ಪಂದ್ಯಗಳಲ್ಲಿ ಎರಡರಲ್ಲಷ್ಟೇ ಗೆದ್ದು, ಪಾಯಿಂಟ್ಸ್ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ಕುಸಿದಿತ್ತು. ಈ ತಂಡವನ್ನು ಬಲಿಷ್ಠಗೊಳಿಸುವ ಕೆಲಸ ಸವಾಲಿನದ್ದೇ. ಹಾಗಂತ ಎದೆಗುಂದುವುದಿಲ್ಲ. ಮುಂದಿನ ಆವೃತ್ತಿಯಲ್ಲಿ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರ 6ರೊಳಗೆ ಸ್ಥಾನ ಗಿಟ್ಟಿಸುವಂತೆ ಮಾಡುವ ಗುರಿ ಇದೆ. ಅದಕ್ಕಾಗಿ ಈಗಿನಿಂದಲೇ ಸಿದ್ಧತೆ ಮಾಡಿಕೊಂಡು ಸಾಗುತ್ತೇವೆ.

• **ಕಳೆದ ಆವೃತ್ತಿಯಲ್ಲಿ ಬುಲ್ಸ್ ಎಡವಿದ್ದೆಲ್ಲಿ?**

ಆಟಗಾರರ ಆಯ್ಕೆಯಲ್ಲೇ ತಂಡ ಎಡವಿತ್ತು. ತಾರಾ ವರ್ಚಸ್ಸಿನ ಒಂದಿಬ್ಬರನ್ನು ತಂಡಕ್ಕೆ ಸೇರಿಸಿಕೊಂಡು ಪ್ರಶಸ್ತಿ ಗೆಲ್ಲುತ್ತೇವೆ ಎಂದು ಬೀಗುವುದು ದಡ್ಡತನವಲ್ಲವೆ?

• **ಮುಂದಿನ ಆವೃತ್ತಿಗಾಗಿ ತಂಡದ ಆಯ್ಕೆ ಹೇಗಿರಲಿದೆ?**

ಸ್ವ–ಹಿತಾಸಕ್ತಿ ಬದಿಗೊತ್ತಿ ತಂಡದ ಯಶಸ್ಸಿಗಾಗಿ ಹೋರಾಡುವ ಆಟಗಾರರು ನಮಗೆ ಬೇಕು. ಅಂತಹವರ ಹುಡುಕಾಟ ಶುರುವಾಗಿದೆ. ಗೆಲುವಿನ ತುಡಿತ ಇರುವವರನ್ನು ಗುರುತಿಸಿ ಅವಕಾಶ ನೀಡುತ್ತೇವೆ. ಉತ್ತಮ ಲಯದಲ್ಲಿರುವ ಆಟಗಾರರನ್ನು ಸೆಳೆದು ಪರಿಪೂರ್ಣ ತಂಡ ಕಟ್ಟುತ್ತೇವೆ. ಉತ್ತರ ಭಾರತೀಯರ ಜೊತೆಗೆ ದಕ್ಷಿಣದ ಆಟಗಾರರಿಗೂ ಹೆಚ್ಚಿನ ಅವಕಾಶ ನೀಡುವ ಆಲೋಚನೆ ಇದೆ.

• **ನವತಾರೆಗಳ ಹುಡುಕಾಟ ಶುರುವಾಗಿದೆಯಾ?**

ಹೊಸ ಪ್ರತಿಭೆಗಳ ಅನ್ವೇಷಣೆಗೆಂದೇ ಫ್ರಾಂಚೈಸ್‌ನವರು ಅಕಾಡೆಮಿಯೊಂದನ್ನು ಶುರು ಮಾಡಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿನ ಭರವಸೆಯ ಆಟಗಾರರನ್ನು ಹೆಕ್ಕಿ ಟ್ರಯಲ್ಸ್ ನಡೆಸುತ್ತೇವೆ. ಅದರಲ್ಲಿ ಆಯ್ಕೆಯಾದವರಿಗೆ ತರಬೇತಿ ಕೊಡುತ್ತೇವೆ. ಈ ಕಾರ್ಯ ಮುಂದಿನ ವಾರದಿಂದಲೇ ಆರಂಭವಾಗಲಿದೆ.

• **ಬುಲ್ಸ್ ಬಳಗದಲ್ಲಿ ಕನ್ನಡಿಗರೇ ಇಲ್ಲ ಎಂಬ ಕೊರಗಿದೆ. ನಿಮ್ಮ ಅವಧಿಯಲ್ಲಿ ಸ್ಥಳೀಯರಿಗೆ ಅವಕಾಶ ಸಿಗಬಹುದೇ?**

ತಂಡದಲ್ಲಿ ಕನ್ನಡಿಗರೂ ಆಡುವಂತಾಗಬೇಕೆಂಬ ಆಸೆ ನನಗೂ ಇದೆ. ಹಾಗಂತ ಸಿಕ್ಕ ಸಿಕ್ಕವರನ್ನೆಲ್ಲಾ ಸೇರಿಸಿಕೊಳ್ಳಲು ಸಾಧ್ಯವಿಲ್ಲ. ಪ್ರತಿಭೆ ಇದ್ದವರಿಗೆ ಖಂಡಿತಾ ಅವಕಾಶ ನೀಡುತ್ತೇವೆ.

ಪ್ರೊ ಕಬಡ್ಡಿಯಲ್ಲಿ ಕನ್ನಡಿಗರ ಸಂಖ್ಯೆ ಕ್ಷೀಣಿಸಿದೆಯಲ್ಲ?

ಕರ್ನಾಟಕದಲ್ಲಿ ಪ್ರತಿಭಾನ್ವಿತರಿಗೆ ಬರ ಇಲ್ಲ. ಆದರೆ ಬದ್ಧತೆಯ ಕೊರತೆ ಇದೆ. ಈಗಿನ ಹುಡುಗರಲ್ಲಿ ಮೊಬೈಲ್ ಗೀಳು ಹೆಚ್ಚಾಗಿದೆ. ಸಾಧನೆಗಾಗಿ ವಾಮ ಮಾರ್ಗ ಅನುಸರಿಸಿ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಸ್ವ ಸಾಮರ್ಥ್ಯದಿಂದ ಮೇಲೆ ಬರುವ ಪ್ರವೃತ್ತಿ ಕಡಿಮೆಯಾಗುತ್ತಿದ್ದು, ಪ್ರಭಾವ ಬೀರಿ ತಂಡದಲ್ಲಿ ಸ್ಥಾನ ಗಳಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ.

ರಣಧೀರ್ ಕೈಬಿಟ್ಟ ಬುಲ್ಸ್



ಪ್ರೊ ಕಬಡ್ಡಿ ಲೀಗ್‌ನ 11 ಆವೃತ್ತಿಗಳಲ್ಲೂ ತಂಡದ ಮುಖ್ಯ ಕೋಚ್ ಆಗಿದ್ದ ರಣಧೀರ್ ಸಿಂಗ್ ಸೆಹ್ರಾವತ್ ಅವರನ್ನು ಬುಲ್ಸ್ ಫ್ರಾಂಚೈಸ್ ಕೈಬಿಟ್ಟಿದೆ.

ರಣಧೀರ್ ನೇತೃತ್ವದಲ್ಲಿ ತಂಡ ಒಮ್ಮೆ ಚಾಂಪಿಯನ್ ಆಗಿತ್ತು. 6 ಬಾರಿ ನಾಕೌಟ್ ಹಂತ ಪ್ರವೇಶಿಸಿತ್ತು. 11ನೇ ಆವೃತ್ತಿಯಲ್ಲಿ ಕಳಪೆ ಸಾಮರ್ಥ್ಯ ತೋರಿ ಕೊನೆಯ ಸ್ಥಾನಕ್ಕೆ ಕುಸಿದಿತ್ತು.

ರಣಧೀರ್ ಅವರ ವಿಡಿಯೊವೊಂದನ್ನು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಬೆಂಗಳೂರು ಬುಲ್ಸ್, 'ಧನ್ಯವಾದಗಳು ಗುರುಗಳೇ, ಗೂಳಿ ಪಡೆ ನಿಮಗೆಂದೆಂದಿಗೂ ಚಿರಋಣಿ!' ಎಂದು ಬರೆದುಕೊಂಡಿದೆ.



ದೌಲತ್ ಖಾನ್ ಸ್ಮಾರಕ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಗೆದ್ದ ಬೆಂಗಳೂರು ಫ್ಯಾಂಟಮ್ ಎಫ್‌ಸಿ ತಂಡ

ಫ್ಯಾಂಟಮ್ ಎಫ್‌ಸಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಫ್ಯಾಂಟಮ್ ಎಫ್‌ಸಿ ತಂಡ ಬುಧವಾರ ದೌಲತ್ ಖಾನ್ ಸ್ಮಾರಕ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಫ್ಯಾಂಟಮ್ ತಂಡ 2–1 ಗೋಲುಗಳಿಂದ ಎಂಪೈಯರ್ ಎಫ್‌ಸಿ ತಂಡವನ್ನು ಮಣಿಸಿತು. ಫ್ಯಾಂಟಮ್ ಪರ ಎಚ್‌ಸಿ ಮಾಲ್ಸ್‌ವ್ ಮುತ್ಲುಂಗಾ (10ನೇ ನಿ.), ಗಿನ್ನೆಥಾಂಗ್ ಮಾಟೆ (15ನೇ ನಿ.) ಗೋಲುಗಳನ್ನು ಹೊಡೆದರು. ಎಂಪೈಯರ್ ತಂಡದ ಪರ ಸಚಿನ್ ಕುಮಾರ್ (60ನೇ ನಿ.) ಗೋಲು ಹೊಡೆದರು.

ಟೆಕ್ನಿಕೊಗೆ ಪ್ರಶಸ್ತಿ: ಟೆಕ್ನಿಕೊ ಫುಟ್‌ಬಾಲ್ ಫೌಂಡೇಷನ್ ತಂಡವು ಬುಧವಾರ ಬಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಸ್ಟ್ರೈಡ್ ಎಫ್‌ಸಿ ತಂಡವನ್ನು 2–0 ಗೋಲುಗಳಿಂದ ಮಣಿಸಿ ಚಾಂಪಿಯನ್ ಆಯಿತು. ಟೆಕ್ನಿಕೊ ತಂಡದ ವಿಶಾಲ್ ಸೈಕಿಯಾ (9ನೇ ನಿ.) ಮತ್ತು ಆ್ಯರಾನ್ ಟೆಲಾಸೆಫ್ರ ರೋಡ್ರಿಗಸ್ (20ನೇ ನಿ.) ಗೋಲು ಬಾರಿಸಿದರು.